# ಅಧ್ಯಾಯ 7

# ಆಶ್ಚರ್ಯಕರವಾದ ಮೆಲ್ಕಿಜೆದೇಕನ ಯಾಜಕತ್ವ

ಈಗಾಗಲೆ ಮೆಲ್ಕಿಜೆದೇಕನ ಪರಿಚಯ ಮಾಡಿರುವವನಾಗಿ (5:6, 10; 6:20), ಲೇಖಕನು ಮೆಲ್ಕಿಜೆದೇಕ ಮತ್ತು ಕ್ರಿಸ್ತನ ನಡುವಿನ ಹೋಲಿಕೆಗಳ ಕುರಿತು ಒಂದು ವಿವರವಾದ ಚರ್ಚೆಯೊಳಗೆ ಪ್ರವೇಶಿಸುತ್ತಾನೆ. ಹೇಗೂ, ಮೆಲ್ಕಿಜೆದೇಕನ ಮೇಲಲ್ಲ, ಕ್ರಿಸ್ತನ ಮೇಲೆಯೇ ಒತ್ತು ಕೊಡಲಾಗಿರುತ್ತದೆ. ಮೆಲ್ಕಿಜೆದೇಕನನ್ನು ಕ್ರಿಸ್ತನು ಹೇಳುವದಿಲ್ಲ, "ಆದರೆ ಮೆಲ್ಕಿಜೆದೇಕನೇ ಕರ್ತನಾದ ಯೇಸುವನ್ನು ಹೋಲುತ್ತಾನೆ."[1]

ಮೆಲ್ಕಿಜೆದೇಕನ ಅಸಹಜವಾಗಿ ದೇವರ ಮುಂದೆ ನಿಲ್ಲುವದರ ಕುರಿತು ಆದಿಕಾಂಡ 14:17-20ರಲ್ಲಿ ವರದಿ ಮಾಡಲ್ಪಟ್ಟಿದೆ, ಮತ್ತು ಆತನ ಯಾಜಕತ್ವವು ಕೀರ್ತನೆ 110:4ರಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಈ ಗಮನಾರ್ಹವಾದ ವ್ಯಕ್ತಿಯು ಹಳೆಯ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಪ್ರಸ್ತಾಪಿಸಲ್ಪಟ್ಟಿಲ್ಲ, ಮತ್ತು ಹೊಸ ಒಡಂಬಡಿಕೆಯಲ್ಲಿ ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತಾನೆ.

ಇಬ್ರಿಯರಿಗೆ ಪತ್ರಿಕೆಯಲ್ಲಿ ಉಲ್ಲೇಖಿಸಲಾಗಿರುವ ಶಾಸ್ತ್ರವು ನಮಗೆ ಹಳೆಯ ಒಡಂಬಡಿಕೆಯು ಸಾರಭೂತವಾಗಿ ಕ್ರಿಸ್ತನ-ಕೇಂದ್ರಿಕೃತ ಎಂಬುದನ್ನು ಕಾಣುವಂತೆ ಸಹಾಯ ಮಾಡುತ್ತದೆ.[2] ಮೆಲ್ಕಿಜೆದೇಕನ ಯಾಜಕತ್ವವು ಕ್ರಿಸ್ತನ ಯಾಜಕತ್ವದ ಪಾತ್ರದ ಬಗ್ಗೆ ಅಂತದೃಷ್ಟಿಗಳನ್ನು ಒದಗಿಸುತ್ತದೆ. ಹೊಸ ಒಡಂಬಡಿಕೆಯ ಯಾಜಕತ್ವವು ನಿಗುಢವಾದ ಪ್ರಾಚೀನ ಯಾಜಕ/ಅರಸನ "ತರಹದ ಅನುಗುಣವಾಗಿರುತ್ತದೆ" ಎಂದು ಹೇಳಲಾಗಿರುತ್ತದೆ; ಲೇಖಕನು ವಿವರಿಸುವದಕ್ಕೆ ಬಯಸಿದ್ದ ಎರಡು ಯಾಜಕತ್ವಗಳ ನಡುವೆ *ಹೋಲಿಕೆ*ಯಿರುತ್ತದೆ.[3] "ಒಬ್ಬನು ಸ್ವತಃ ನಿತ್ಯವಾಗಿರುವದರ ಮಾದರಿಯನ್ನು ಹೊಂದಿರುವದಕ್ಕಾಗುವದಿಲ್ಲ, ಯಾಕೆಂದರೆ ಒಂದು ವಾಸ್ತವಕತೆಯನ್ನು ಹೊಂದಿರಲಾರದು, ಅದೊಂದು ಮಾದರಿ ಆಗಿರುವದಿಲ್ಲ."[4] ಲೇಖಕನು ಹಳೆಯ ಒಡಂಬಡಿಕೆಯಲ್ಲಿನ ಮಾದರಿಗಳ ಸಹಾಯವಿಲ್ಲದೆ ಕ್ರಿಸ್ತನ ಮಹಾಯಾಜಕತ್ವದ ಕುರಿತ ಪ್ರಶ್ನೆಗಳಿಗೆ ಉತ್ತರಿಸುವದಕ್ಕಾಗಲಿಲ್ಲ.

ಲೇಖಕನು ವಾಚಕರ ಕರ್ತನಾದ ಯೇಸುವಿನ ಕುರಿತ ಈ "ಮಾಂಸ" ದ ಭಾವನೆಯೊಳಗೆ ಪ್ರವೇಶಿಸುವ ಮೂಲಕ ಅವರಿಗಿದ್ದ ಆತ್ಮೀಕ ಮಂದಮತಿಯನ್ನು ಜಯಿಸುವಂತೆ ಸಹಾಯ ಮಾಡುತ್ತಿದ್ದಾನೆ. 5:11-6:8ರಲ್ಲಿನ ಗದರಿಸುವಿಕೆಯು ಕ್ರಿಸ್ತನ ಮಹಾಯಾಜಕತ್ವದ ಕುರಿತು ಜಾಗರೂಕತೆಯಿಂದ ಗಮನವನ್ನು ಕೊಡುವಂತೆ ಅವರನ್ನು ಬೇಡಿಕೊಂಡಿರಬೇಕು. ಲೇಖಕನಿಗೆ ತನ್ನ ಹೋಲಿಕೆಯನ್ನು ಪೂರ್ಣಗೊಳಿಸುವದಕ್ಕೆ ಎರಡೂ ವಿವರಣೆಗಳು ಅಗತ್ಯವಿದ್ದು — ಆದಿಕಾಂಡ 14ರ ಹಿನ್ನಲೆ ಮತ್ತು ಕೀರ್ತನೆ 110:4ರಲ್ಲಿ ಮೆಸ್ಸೀಯನ ಸಂಬಂಧ.

ಅಬ್ರಹಾಮನು ಕ್ರಿಸ್ತನ ಪೂರ್ವಗಾಮಿಯಾಗಿದ್ದ ಮೆಲ್ಕಿಜೆದೇಕನಿಗೆ ಕಡಿಮೆಯಾದವನಾಗಿದ್ದನು. ಈ ಸತ್ಯವು ಅಬ್ರಹಾಮನಿಗಿಂತ, ಮಾತ್ರವಲ್ಲದೆ ಲೇವಿಯನಾದ ಆರೋನನಿಗಿಂತಲೂ ಕ್ರಿಸ್ತನು ಶ್ರೇಷ್ಠನೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಬ್ರಿಯರು ಇದಕ್ಕೆ ಮುನ್ನ ಯಾವದೇ ಪ್ರೇರಿತ ವಕ್ತಾರ ಅಥವಾ ಲೇಖಕನ ಮೂಲಕ ಕ್ರಿಸ್ತನ ದೈವಿಕ ಮಹಾಯಾಜಕತ್ವದ ಬಗ್ಗೆ ಕೇಳಿರಲಿಲ್ಲ ಎಂಬಂತೆ ತೋರುತ್ತದೆ. 8:1ರಲ್ಲಿನ ಪದಗಳ ಬಳಕೆಯನ್ನು ಗಮನಿಸಿರಿ. ಅವರು ತಮಗೆ ಗೊತ್ತಿದ್ದ ಯೇಸುವನ್ನು ಕೀರ್ತನೆ 110ರಲ್ಲಿ ಪ್ರಸ್ತಾಪಿಸಲಾಗಿರುವ ಮೆಸ್ಸೀಯನೊಂದಿಗೆ ಸಂಬಂಧಗೊಳಿಸಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹೇಗೂ, ಎರಡು ಯಾಜಕತ್ವಗಳು – ಮೆಲ್ಕಿಜೆದೇಕನ ಮತ್ತು ಕ್ರಿಸ್ತನ – ಅವುಗಳ ನೀತಿ ಮತ್ತು ಸಮಾಧಾನಗಳ ಗುಣಸ್ವಭಾವಗಳಿಂದ, ಮಾತ್ರವಲ್ಲದೆ ಅವುಗಳ ಅಂತ್ಯವಾಗದ ಸ್ವಭಾವದಿಂದ ನಿಕಟವಾಗಿ ಸಂಬಂಧ ಹೊಂದಿರುತ್ತವೆ.

## ಅಬ್ರಹಾಮ ಮತ್ತು ಮೆಲ್ಕಿಜೆದೇಕ (7:1-10)

**1ಈ ಮೆಲ್ಕಿಜೆದೇಕನು ಸಾಲೇಮಿನ ಅರಸನೂ ಪರಾತ್ಪರನಾದ ದೇವರ ಯಾಜಕನೂ**
**ಆಗಿದ್ದನು; ರಾಜರನ್ನು ಹೊಡೆದು ಹಿಂದಿರುಗಿ ಬರುತ್ತಿದ್ದ ಅಬ್ರಹಾಮನನ್ನು ಎದುರುಗೊಂಡು**
**ಅವನನ್ನು ಆಶೀರ್ವದಿಸಿದನು; 2ಅವನಿಗೆ ಅಬ್ರಹಾಮನು ತಾನು ಜಯಿಸಿಕೊಂಡು ಬಂದಿದ್ದ ಎಲ್ಲಾ**
**ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಕೊಟ್ಟನು. ಅವನ ಹೆಸರಿನ ಅರ್ಥವು ನೀತಿರಾಜ**
**ಎಂಬುದು; ಇದಲ್ಲದೆ ಆತನು ಸಾಲೇಮಿನರಾಜ ಅಂದರೆ ಸಮಾಧಾನರಾಜ; 3ಅವನಿಗೆ**
**ತಂಧೆಯೂ ತಾಯಿಯೂ ವಂಶಾವಳಿಯೂಇಲ್ಲ, ಜನ್ಮದ ಆರಂಭವೂ ಆಯುಷ್ಯದ ಅಂತ್ಯವೂ**
**ಇಲ್ಲ. ಅವನು ದೇವರ ಮಗನಿಗೆ ಸಮಾನ ಮಾಡಲ್ಪಟ್ಟಿದ್ದಾನೆ. ಅವನು ನಿರಂತರವಾಗಿ**
**ಯಾಜಕನಾಗಿರುವನು.**

**4ಈ ಮನುಷ್ಯನು ಎಷ್ಟು ದೊಡ್ಡವನೆಂದು ಆಲೋಚಿಸಿರಿ. ನಮ್ಮ ಮೂಲಪಿತೃವಾದ**
**ಅಬ್ರಹಾಮನು ತಾನು ಸುಲುಕೊಂಡು ಬಂದ ಶ್ರೇಷ್ಠವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು**
**ಅವನಿಗೆ ಕೊಟ್ಟನಲ್ಲಾ. 5ಲೇವಿಯ ಕುಲದವರಲ್ಲಿ ಯಾಜಕೋದ್ಯೋವನ್ನು ಹೊಂದುವವರು**
**ಜನರಿಂದ ಅಂದರೆ ಅಬ್ರಹಾಮನ ವಂಶಸ್ಥರಾಗಿರುವ ತಮ್ಮ ಸಹೋದರರಿಂದಲೇ**
**ದಶಮಭಾಗಗಳನ್ನು ತೆಗೆದುಕೊಳ್ಳುವದಕ್ಕೆ ಧರ್ಮಶಾಸ್ತ್ರದಲ್ಲಿ ಅಪ್ಪಣೆ ಉಂಟು. 6ಆದರೆ ಅವರ**
**ವಂಶಾವಳಿಗೆ ಸೇರದೆ ಇರುವ ಮೆಲ್ಕಿಜೆದೇಕನು ಅಬ್ರಹಾಮನಿಂದಲೇ ದಶಮಭಾಗವನ್ನು**
**ತಕ್ಕೊಂಡದ್ದಲ್ಲದೆ ದೇವರಿಂದ ವಾಗ್ದಾನಗಳನ್ನು ಹೊಂದಿದವನಾದ ಅವನಿಗೆ ಆಶೀರ್ವಾದ**
**ಕೊಟ್ಟನು. 7ಆಶೀರ್ವಾದ ಹೊಂದುವವನಿಗಿಂತ ಆಶೀರ್ವದಿಸುವವನು ದೊಡ್ಡವನು ಎಂಬುದು**
**ವಿವಾದವಿಲ್ಲದ ಮಾತಷ್ಟೆ. 8ಇದಲ್ಲದೆ ಲೇವಿಯರ ಕ್ರಮವನ್ನು ನೋಡಿದರೆ ಸಾಯತಕ್ಕ ಮನುಷ್ಯರು**
**ದಶಮಭಾಗಗಳನ್ನು ತಕ್ಕೊಳ್ಳುತ್ತಾರೆ; ಆದರೆ ಮೆಲ್ಕಿಜೆದೇಕನ ಕ್ರಮವನ್ನು ನೋಡಿದರೆ**
**ಜೀವಿಸುತ್ತಿದ್ದಾನೆಂದು ಸಾಕ್ಷಿ ಹೊಂದಿರುವವನು ತಕ್ಕೊಳ್ಳುತ್ತಾನೆ. 9ಇದು ಮಾತ್ರವಲ್ಲದೆ**
**ದಶಮಭಾಗಗಳನ್ನು ತಕ್ಕೊಳ್ಳುವ ಲೇವಿಯೂ ಕೂಡ ಅಬ್ರಹಾಮನ ಮೂಲಕ ದಶಮಭಾಗಗಳನ್ನು**
**ಕೊಟ್ಟ ಹಾಗಾಯಿತೆಂದು ಹೇಳಬಹುದು; 10ಹೇಗಂದರೆ ಮೆಲ್ಕಿಜೆದೇಕನು ಲೇವಿಯ**
**ಮೂಲಪುರುಷನನ್ನು ಎದುರುಗೊಂಡಾಗ ಲೇವಿಯು ತತ್ವರೂಪವಾಗಿ ಇವನೊಳಗೆ ಇದ್ದನು.**

**ವಚನ 1.** 1 ಮತ್ತು 2 ವಚನಗಳು ಸಾಲೇಮಿನ ಅರಸನ ಕುರಿತ ಕಥನವನ್ನು ಸಾರಾಂಶಗೊಳಿಸುತ್ತವೆ. ಆದಿಕಾಂಡ 14ನೇ ಅಧ್ಯಾಯವು ಆತನ ವಿಷಯದಲ್ಲಿ ಯಾವದೇ

ಪರಿಚಯವನ್ನು ಮತ್ತು ಕಾರ್ಯತಃ ಆತನ ಹಿನ್ನಲೆಯ ಕುರಿತು ಯಾವದೇ ಮಾಹಿತಿಯನ್ನಾಗಲಿ ಕೊಡುವದಿಲ್ಲ, ಈ ಅಧ್ಯಾಯದಲ್ಲಾಗಲಿ ಸಹ, ಕೀರ್ತನೆ 110:4ರ ಉಲ್ಲೇಖನವೊಂದನ್ನು ಹೊರತು ಪಡಿಸಿ ಬೇರೆ ಏನೂ ಇರುವದಿಲ್ಲ. ಈತನು ಅಂಥ ಏಕೈಕ **ಯಾಜಕ**/ಅಸರನೋ, ಅಥವಾ ಆತನ ಕ್ರಮದಲ್ಲಿ ಇತರರು ಭಾಗವಾಗಿದ್ದರೋ? ಮೆಲ್ಕಿಜೆದೇಕ ಮತ್ತು ಅಬ್ರಹಾಮನ ಕಾಲದಲ್ಲಿ ಬಹುಪಾಲು ಜಗತ್ತು ವಿಗ್ರಹಾರಾಧನೆ ಮತ್ತು ಅನೈತಿಕತೆಯಿಂದ ತುಂಬಿತ್ತು, ಆದರೆ ಖಂಡಿತವಾಗಿ ಸಾಲೇಮಿನಲ್ಲಿ ಇರುವ ರೀತಿಯಲ್ಲಿ ನೀತಿಯ ಇತರ ಪ್ರದೇಶಗಳು ಇದ್ದವು.

"ಮೆಲ್ಕಿಜೆದೇಕ" ಎಂಬುದರ ಅಕ್ಷರಶಃ ಅರ್ಥವು ಇಬ್ರಿಯ ಭಾಷೆಯಲ್ಲಿ "ನನ್ನ ಅರಸನು ನೀತಿವಂತನು" (ನೋಡಿರಿ ವ. 2, "ನೀತಿರಾಜ") ಎಂದಾಗಿರುತ್ತದೆ. *ಮೆಲ್ಕಿ* ಎಂಬುದು מֶלֶךְ (*melek*) ಎಂಬ ಪದದಿಂದ ಬರುತ್ತದೆ, ಅದರರ್ಥವು "ಅರಸ," ಮತ್ತು *ಜೆದೇಕ* ಎಂಬುದು צַדִּיק (*tsaddiq*) ಎಂಬ ಪದದಿಂದ ಬರುತ್ತದೆ, ಅದರರ್ಥವು "ನೀತಿ."[5] ಕ್ರಿಸ್ತನು, ಜೆಕರ್ಯ 9:9, 10 ನೆರವೇರಿಕೆಯಾಗಿ, "ಜನಾಂಗಗಳಿಗೆ ಸಮಾಧಾನಕರವಾದ" ಅಪ್ಪಣೆಯನ್ನು ಕೊಡುವವನಾಗಿದ್ದನು ಮತ್ತು "ನ್ಯಾಯವಂತನು," ಆಗಿರುವವನಾಗಿದ್ದನು, ಅದು ನೀತಿಯ ಆಳ್ವಿಕೆಯನ್ನು ಸೂಚಿಸುತ್ತದೆ. ಆತನು "ಸದ್ಧರ್ಮಿಯಾದ [ನೀತಿ] ಮೊಳಿಕೆ" ಆಗಿರಬೇಕಿತ್ತು, ಮತ್ತು "ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವದಕ್ಕೆ" ಶಕ್ತನಾಗಿರಬೇಕಿತ್ತು. ಆತನು ಯೆಹೂದವನ್ನು ರಕ್ಷಿಸಿ ತನ್ನ ಸಿಂಹಾಸನದಲ್ಲಿ ಅರಸನು ಮತ್ತು ಯಾಜಕನಾಗಿ ಸೇವೆ ಮಾಡುವವನಾಗಿದ್ದನು (ಯೆರೆಮೀಯ 23:5, 6; ಜೆಕರ್ಯ 6:12, 13).

"ಸಾಲೇಮ," ಇಬ್ರಿಯ ಪದ "ಸಮಾಧಾನ" ಎಂಬುದಕ್ಕೆ ಸಮಾನವಾಗಿದ್ದು (ನೋಡಿರಿ ವ. 2), ಕೀರ್ತನೆ 76:2ರಲ್ಲಿ ಚೀಯೋನಿನೊಂದಿಗೆ ಗುರುತಿಸಲ್ಪಟ್ಟಿದೆ. Josephus ಮತ್ತು ಮೃತ ಸಮುದ್ರ ಸುರುಳಿಗಳು ಈ ಪಟ್ಟಣವನ್ನು ಯೆರೂಸಲೇಮ್ ಎಂದು ಪ್ರಸ್ತುತಪಡಿಸಿರುತ್ತವೆ. ಮೆಲ್ಕಿಜೆದೇಕನು ನಿಜವಾದ ಸಮಾಧಾನವನ್ನು ತರುವ – ಯುದ್ಧಗಳನ್ನು ದೂರವಿಡುವದು ಮಾತ್ರವೇ ಅಲ್ಲ, ಆದರೆ ದೇವರಿಂದ ಒಂದು ಆಂತರಿಕ ಸಮಾಧಾನವನ್ನು ಸಹ ಕೊಡುವ – ಕ್ರಿಸ್ತನಿಗೆ ಮಾದರಿ ತೋರಿಸುತ್ತಾನೆ. ಯೇಸು ಹೀಗೆ ಘೋಷಿಸಿದನು, "ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ" (ಯೋಹಾನ 14:27).

ಮೆಲ್ಕಿಜೆದೇಕನು ಸಾಮಾನ್ಯ ಮನುಷ್ಯನಿಗಿಂತಲೂ ಬೇರೆ ಇನ್ನೇನ್ನಾದರೂ ಆಗಿದ್ದನೆಂಬುದಾಗಿ ಹಳೆಯ ಒಡಂಬಡಿಕೆಯ ಯಾವದೇ ಪುರಾವೆಯು ತಿಳಿಸುವದಿಲ್ಲ. ಇದು ಆತನ ಗುರುತಿನ ವಿಷಯದಲ್ಲಿ ಮಾಡಿಕೊಳ್ಳಲಾಗಿರುವ ಕೆಲವೊಂದು ನಂಬಲಸಾಧ್ಯವಾದ ಕಲ್ಪನೆಗಳನ್ನು ನಿರ್ಮೂಲನ ಮಾಡುತ್ತದೆ. ಪವಿತ್ರಾತ್ಮನು ಆತನ ಇತಿಹಾಸದ ಮೇಲೆ ಒಂದು ಮುಸುಕು ಎಸೆದನೆಂದು ತೋರುತ್ತದೆ, ಇದು ಆತನನ್ನು ಜನನ ಹಾಗೂ ಮರಣ ವಿಷಯದಲ್ಲಿ ಕ್ರಿಸ್ತನಿಗೆ ಒಂದು ಮಾದರಿ ಆಗುವಂತೆ ಶಕ್ತಗೊಳಿಸಿತ್ತು. ಆದಿಕಾಂಡ 14ನೇ ಅಧ್ಯಾಯವು ಈ ಯಾಜಕನು ಮೆಸ್ಸೀಯನ ಒಂದು ಸಾದೃಶ್ಯ/ಮಾದರಿ ಆಗಿರುವ ಬಗ್ಗೆ ಸೂಚನೆಯನ್ನು ನೀಡುವದಿಲ್ಲ, ಆದರೆ ಕೀರ್ತನೆ 110:4ನೇ ವಚನವು ಆತನ ಪ್ರವಾದನಾತ್ಮಕ ಸಂಕೇತವನ್ನು ಪ್ರಕಟಗೊಳಿಸುತ್ತದೆ. ಪೇತ್ರನು ದೇವರ ಬಲಗಡೆಯಲ್ಲಿ ಕ್ರಿಸ್ತನು ಆಳ್ವಿಕೆ ಮಾಡುವದರ ಮುಂತಿಳಿಸುವಿಕೆಯಾಗಿ ಕೀರ್ತನೆ 110:1ನ್ನು ಉಲ್ಲೇಖನ ಮಾಡುತ್ತಾನೆ (ಅಪೊಸ್ತಲರ ಕೃತ್ಯಗಳು 2:34).

**ವಚನ 2.** ಮೆಲ್ಕಿಜೆದೇಕನು **ಅಬ್ರಹಾಮ**ನಿಂದ ಬಹಳವಾಗಿ ಗೌರವಿಸಲ್ಪಟ್ಟಿದ್ದನು, ಆತನು

ಮೆಲ್ಕಿಜೆದೇಕನ ಕೆಲಸವನ್ನು ದಶಮಾಂಶ (**ಜಯಿಸಿಕೊಂಡು ಬಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗ**) ಸ್ವೀಕರಿಸುವದಕ್ಕೆ ಯೋಗ್ಯನೆಂದು ಭಾವಿಸಿದನು. ಇಬ್ರಿಯರ ಪಿತೃವು ಮೆಲ್ಕಿಜೆದೇಕನಿಗೆ ಈ ಕಾಣಿಕೆಯನ್ನು ಏಕೆ ಸಲ್ಲಿಸಿದನು? ಆದಿಕಾಂಡ 14:22-24ರಲ್ಲಿ, ಅಬ್ರಹಾಮನು ತಾನು ದೇವರಿಗೆ ಮಾಡಿದ ಪ್ರಮಾಣದ ಕಾರಣದಿಂದ ಏನನ್ನೂ ತೆಗೆದುಕೊಳ್ಳುವದಿಲ್ಲ ಎಂದು ಹೇಳಿದನು. ತಾನು ಮೆಲ್ಕಿಜೆದೇಕನಿಗೆ ಕಾಣಿಕೆಯನ್ನು ಕೊಡುವ ಮೂಲಕ ದೇವರಿಗೆ ಕೊಡುತ್ತಿದ್ದೇನೆಂದು ಆತನು ಬಲ್ಲವನಾಗಿದ್ದನು. ಅಬ್ರಹಾಮನು ಅಂಥ ಕಾಣಿಕೆಯನ್ನು ಸಲ್ಲಿಸಬೇಕೆಂದು ಬೇಡುವ ಯಾವದೇ ಕಟ್ಟಳೆಯು ನಮಗೆ ತಿಳಿದಿರುವದಿಲ್ಲ. ಹೇಗೂ, ಆತನು ಮೂಲಪಿತೃಗಳ ಕಾಲದ ವೇಳೆಯಲ್ಲಿನ ದೇವರ ಧರ್ಮವನ್ನು ಪಾಲಿಸುವವನಾಗಿ ಅದನ್ನು ಮಾಡಿದನೆಂಬುದು ಸ್ಪಷ್ಟವಾಗುತ್ತದೆ.[6] ಈ ಕೃತ್ಯವು ಆರಾಧನೆಯ ಒಂದು ವ್ಯವಸ್ಥೆಯು ಅಲ್ಲಿತ್ತು ಮತ್ತು ಅದರಲ್ಲಿ ದೇವರಿಂದ ಪ್ರತಿಷ್ಠೆ ಮಾಡಲ್ಪಟ್ಟಿರುವ ಪುರುಷರು ಸೇರಿದ್ದರು ಮತ್ತು ಅವರು ಆರಾಧನೆಯನ್ನು ನಡಿಸಬಲ್ಲವರಾಗಿದ್ದರು ಎಂಬುದನ್ನು ಸೂಚಿಸುತ್ತದೆ. ಯೋಬನು ಮತ್ತು ಇತ್ರೋ (ಮೋಶೆಯ ಮಾವನು; ವಿಮೋಚನಕಾಂಡ 3:1; 18:1-27) ಈ ವರ್ಗಕ್ಕೆ ಸೇರಿದವರಾಗಿರುವ ಸಾಧ್ಯತೆಯಿರುತ್ತದೆ. ಈ ವಿಧವಾದ ಆರಾಧನೆಯು ಇತಿಹಾಸದಲ್ಲಿ ಯಾವಾಗ ನಿಂತು ಹೋಯಿತೆಂಬುದನ್ನು ನಾವು ಖಚಿತವಾಗಿ ಹೇಳುವದಕ್ಕಾಗುವದಿಲ್ಲ, ಆದರೆ ಅದು ಕ್ರಿಸ್ತನು ಬರುವದಕ್ಕೆ ಮುಂಚೆ ಯಾವದೋ ಒಂದು ಕಾಲದಲ್ಲಿ ಸಂಭವಿಸಿರಬಹುದು. ಕ್ರಿ.ಶಕದ ಮೊದಲ ಶತಮಾನದ ಹೊತ್ತಿಗೆ, ಮೋಶೆಯ ಧರ್ಮಶಾಸ್ತ್ರವನ್ನು ಅಥವಾ ಮಿತವಾದ ಪ್ರಮಾಣದಲ್ಲಿ ಅವರ ಹೃದಯಗಳಲ್ಲಿ ಬರೆಯಲ್ಪಟ್ಟಿದ್ದ ಧರ್ಮಶಾಸ್ತ್ರವನ್ನು ಅನುಸರಿಸುತ್ತಿದ್ದ ಕೆಲವು ನೀತಿವಂತರಾದ ಅನ್ಯಜನರಿದ್ದರಾದರೂ, ಬಹುಪಾಲು ಜನರು ದೇವರ ಮೇಲಿನ ನಂಬಿಕೆಯನ್ನು ಬಿಟ್ಟು ಬಿಟ್ಟಿದ್ದರು; ತತ್ಪರಿಣಾಮವಾಗಿ, ಆತನು ಅವರನ್ನು ಬಿಟ್ಟು ಬಿಟ್ಟನು (ನೋಡಿರಿ ರೋಮಾ 1:18, 24, 28; 2:14, 15).

**ವಚನ 3.** ಯೆಹೂದಿ ವ್ಯವಸ್ಥೆಯಲ್ಲಿ ಯಾಜಕತ್ವಕ್ಕೆ ನೇಮಕಗೊಳಿಸುವದರಲ್ಲಿ ನೀತಿಯ ಜೀವನ ಮಾತ್ರವಲ್ಲದೆ ವಂಶಾನುಕ್ರಮದಲ್ಲಿ ಹುಟ್ಟಿರುವದು ಅಗತ್ಯವಿರುತ್ತಿತ್ತು (ಇಬ್ರಿಯ 5:4-6). ಲೇವಿಯ ಯಾಜಕರ ಪೂರ್ವಜರನ್ನು ನಿಖರವಾದ ದಾಖಲೆಗಳನ್ನು ಬರೆದಿಟ್ಟ ಕಾಲದ ವರೆಗೂ ಸುಲಭವಾಗಿ ಕಂಡು ಹಿಡಿಯಬಹುದಿತ್ತು. ಎಜ್ರನು 2:62, 63 ಮತ್ತು ನೆಹಮೀಯ 7:63-65 ವಾಕ್ಯಭಾಗಗಳು ತಮ್ಮ ವಂಶಾವಳಿಯನ್ನು ಸಮರ್ಪಕವಾಗಿ ಸಾಭಿತುಪಡಿಸದವರು ವಿಷಯವು ಇತ್ಯರ್ಥಗೊಳ್ಳುವ ತನಕ ಉದ್ಯೋಗವನ್ನು ವಹಿಸಿಕೊಳ್ಳುವದಕ್ಕಾಗಲಿಲ್ಲ ಎಂಬುದನ್ನು ತೋರಿಸುತ್ತದೆ. ಹೇಗೂ, ಮೆಲ್ಕಿಜೆದೇಕನು ಯಾಜಕತ್ವದ ಲೇವಿ ಕುಲಕ್ಕೆ ಸೇರಿದವನಾಗಿರಲಿಲ್ಲ ಮತ್ತು ಆರೋನನ ಮಹಾಯಾಜಕತ್ವದ ಕುಟುಂಬದಿಂದ ಬಂದವನು ಆಗಿರಲಿಲ್ಲ. ಆತನ ವಂಶಾವಳಿಯ ಇಲ್ಲದಿರುವಿಕೆಯು ಒತ್ತಿ ಹೇಳುವದೇನೆಂದರೆ ಶಾಸ್ತ್ರಗಳಲ್ಲಿ ಸಿಕ್ಕದಿರುವದನ್ನು, ದೇವರ ದಾಖಲೆಗಳಿಗಾಗಿ ಆಗಲಿ ಅಥವಾ ಆತನಿಗೆ ವಿಧೇಯತೆ ತೋರಿಸುವ ನಮ್ಮ ಕೃತ್ಯಗಳಿಗಾಗಿ ಆಗಲಿ ಸತ್ಯವೆಂದು ಹೇಳಿಕೊಳ್ಳಬಾರದು. ಈ ಅಂಶವನ್ನು ದೃಢೀಕರಿಸುವದಕ್ಕೆ, ಲೇಖಕನು ἀγενεαλόγητος (*agenealogētos*, **ವಂಶಾವಳಿಯೂ ಇಲ್ಲ**) ಎಂಬ ಪದವನ್ನು ಬಳಸಿದನು, ಅದು ಗ್ರೀಕ್ ಸಾಹಿತ್ಯದಲ್ಲಿ ಎಲ್ಲಿಯೂ ಸಿಕ್ಕುವದಿಲ್ಲ. ಆತನು ಬಹುಶಃ ಲೇವಿಯ ಯಾಜಕತ್ವಕ್ಕೆ ಬೇಕಾದ ಸಮರ್ಪಕ ವಂಶಾವಳಿ ಮತ್ತು ಕ್ರಿಸ್ತನ ಯಾಜಕತ್ವಕ್ಕೆ ವಂಶಾವಳಿಯ ಅಗತ್ಯವಿಲ್ಲದಿರುವಿಕೆ ನಡುವೆ ವಿರುದ್ಧ ಹೋಲಿಕೆಯನ್ನು ಮತ್ತಷ್ಟು ಬಲಪಡಿಸುವದಕ್ಕೆ ಈ ಪದವನ್ನು ಹುಟ್ಟು ಹಾಕಿರಬಹುದು, ವಂಶಾವಳಿಯ ಅಗತ್ಯವಿಲ್ಲ ಎಂಬುದು ಯಾಜಕರ ವಿಷಯದಲ್ಲಿ ಒಂದು ನವೀನ ವಿಚಾರವಾಗಿತ್ತು.

ಆದದರಿಂದ, ಮೆಲ್ಕಿಜೆದೇಕನಿಗೆ ಯಾಜಕತ್ವದಲ್ಲಿದ್ದ **ತಂದೆಯೂ ತಾಯಿಯೂ ಇಲ್ಲ** ಎಂಬುದು ಸ್ಪಷ್ಟವಾಗಿರುತ್ತದೆ. ರೋಮನ್ನರು ಒಬ್ಬನ ತಂದೆತಾಯಿಗಳ ಕುರಿತು ಯಾವ ದಾಖಲೆಯೂ ಇಲ್ಲವಾದರೆ ಅಂಥವನನ್ನು "ತಂದೆಯಿಲ್ಲದವನು" ಎಂದು ಹೇಳುತ್ತಿದ್ದು. ತಂದೆತಾಯಿಗಳ ಬಗ್ಗೆ ಗೊತ್ತಿಲ್ಲ ಅಥವಾ ವಂಶಾವಳಿಗಳು ಸಿಕ್ಕದವರನ್ನು ಯೆಹೂದ್ಯರು ತಂದೆ ಅಥವಾ ತಾಯಿ ಇಲ್ಲದವರೆಂದು ಕರೆಯುತ್ತಿದ್ದರು.[7] ಒಬ್ಬ ರಬ್ಬಿಯು ಮತಾಂತರಗೊಂಡ ಅನ್ಯಜನಾಂಗದವನನ್ನು ತಂದೆಯಿಲ್ಲದವನೆಂದು ಹೇಳುತ್ತಿದ್ದನು.[8] Josephusನು ತನ್ನ ವಾಚಕರಿಗೆ ತಾನು ಸ್ವತಃ ಯಾಜಕ ಕುಟುಂಬದಲ್ಲಿ ಹುಟ್ಟಿದವನೆಂದು ಮತ್ತು ಅದನ್ನು ಸಾರ್ವಜನಿಕ ದಾಖಲೆಗಳಿಂದ ಸಾಭಿತುಪಡಿಸಬಲ್ಲೆನು ಎಂದು ಹೇಳಿದನು.[9]

ಮೆಲ್ಕಿಜೆದೇಕನು ಹಳೆಯ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಮೊದಲ ಯಾಜಕನಾಗಿದ್ದಾನೆ. ಆತನು ಮಾನವ ರೂಪದಲ್ಲಿದ್ದ ಕ್ರಿಸ್ತನು ಎಂಬ ಕಾಲ್ಪನಿಕ ಯೋಚನೆಯು **ಆತನು ದೇವರ ಮಗನಿಗೆ ಸಮಾನ ಮಾಡಲ್ಪಟ್ಟಿದ್ದಾನೆ** ಎಂಬ ಹೇಳಿಕೆಯಿಂದ ನಿರ್ಮೂಲಗೊಳಿಸಲ್ಪಡುತ್ತದೆ; ಆತನಿಗೆ *ಸಮಾನ* ಆಗಿರುವವನಾಗಿ ಆತನು ಅದೇ ವ್ಯಕ್ತಿಯಾಗಿರುವದಕ್ಕೆ ಸಾಧ್ಯವಿರಲಿಲ್ಲ. ಆತನು ಕೇವಲ ಒಬ್ಬ "ಮನುಷ್ಯನು" ಆಗಿದ್ದನು (ವ. 4). ಮೆಲ್ಕಿಜೆದೇಕನು ದೇವಕುಮಾರನಂತೆ ಇದ್ದನು, ಆದರೆ ಆತನು ದೇವಕುಮಾರನಾಗಿರಲಿಲ್ಲ. ಇಲ್ಲಿ ಮುಖ್ಯವಾದ ಅಂಶವೆಂದರೆ, ಮೆಲ್ಕಿಜೆದೇಕನು ಯಾಜಕತ್ವದಲ್ಲಿದ್ದ ಪೂರ್ವಜರ ಕುರಿತು ಯಾವದೇ ದಾಖಲೆಯನ್ನು ಹೊಂದಿರಲಿಲ್ಲವಾದ್ದರಿಂದ, ಆತನು ನಮ್ಮ ಕರ್ತನ ಯಾಜಕತ್ವಕ್ಕೆ ಒಂದು ಮಾದರಿ ಆಗಿರಬಲ್ಲನಾಗಿದ್ದನು. ಆತನು ಲೇವಿಯ ಸಂತಾನದವನು ಆಗಿರಲಿಲ್ಲ ಆದರೆ ಅಬ್ರಹಾಮನಿಂದ ನೇರವಾಗಿ ಒಬ್ಬ ಯಾಜಕನಂತೆ ಗೌರವಕ್ಕೆ ಪಾತ್ರನಾಗಿದ್ದನಾದ್ದರಿಂದ, ಮೆಲ್ಕಿಜೆದೇಕನು ಯೇಸುವಿನ ಯಾಜಕತ್ವಕ್ಕೆ ಒಂದು ಪೂರ್ವನಿದರ್ಶನವಾದನು. ಸುಮಾರು ಅರ್ಧ ಸಹಸ್ರ ವರ್ಷಗಳ ಬಳಿಕ, ಬೇರೊಬ್ಬನು ಆ ಕ್ರಮದಲ್ಲಿ ಬರಲಿರುವನೆಂಬುದನ್ನು ಕೀರ್ತನೆ 110:4 ಸೂಚಿಸುತ್ತದೆ. ನಮ್ಮ ಕರ್ತನಿಗೆ ಯಾಜಕತ್ವ ಹಿನ್ನಲೆಯ ತಂದೆತಾಯಿಗಳಿಲ್ಲದಿರುವಿಕೆಯು ನಮ್ಮ ಮಹಾಯಾಜಕನಾಗಿ ಇರುವದರಿಂದ ಆತನನ್ನು ಅನರ್ಹಗೊಳಿಸಲಿಲ್ಲ.

**ಅವನು ನಿರಂತರವಾಗಿ ಯಾಜಕನಾಗಿರುವನು.** "ಸದಾಕಾಲವೂ" (7:17, 21) ಮತ್ತು "ನಿರಂತರವಾಗಿ" (7:3) ಎಂಬವುಗಳ ಅರ್ಥವು, ಅನೇಕ ಸಾರಿ ಹಳೆಯ ಒಡಂಬಡಿಕೆಯಲ್ಲಿರುವ ಪ್ರಕಾರವೇ, ಈ ಪದವು ಅನ್ವಯಿಸಲ್ಪಡುವ ಇಡೀ ಕಾಲಾವಧಿಯ ತನಕವೂ ಎಂದರ್ಥವನ್ನು ಕೊಡುತ್ತವೆ. ರೋಮನ್ನರು ಒಬ್ಬ ಸಾಮಾನ್ಯ ನಿರಂಕುಶ ಪ್ರಭುವಿನ ಹುದ್ದೆಗಿಂತಲು ಹೆಚ್ಚು ಗೌರವಪೂರ್ವಕವಾದ ಹುದ್ದೆಯಾಗಿ "Dictator Perpetuus" (ನಿರಂತರವಾದ ನಿರಂಕುಶ ಪ್ರಭು) ಎಂಬ ಬಿರುದನ್ನು ಅನ್ವಯಿಸಿಕೊಂಡರು.[10] ಒಬ್ಬ ನಿರಂಕುಶ ಪ್ರಭು ಅಥವಾ ಕೈಸರನು ಶಾಶ್ವತವಾಗಿ ಜೀವಿಸಲಾರನೆಂಬುದನ್ನು ಗ್ರಹಿಸಿಕೊಂಡರು; ಆದರೆ ಒಬ್ಬ ರೋಮನ್ ಚಕ್ರವರ್ತಿಯ ಆಡಳಿತಾವಧಿಯು ಇಂತಿಷ್ಟೆ ಎಂದು ಯಾವ ವಿಧಿಯು ಮಿತಿಗೊಳಪಡಿಸಲಿಲ್ಲವಾದ್ದರಿಂದ, ಆತನ ಆಳ್ವಿಕೆಯು "ಸದಾಕಾಲ" ಎಂದು ಹೇಳಲಾಗುತ್ತಿತ್ತು.

**ವಚನಗಳು 4-7.** ಪೂರ್ವ ದಿಕ್ಕಿನ ಅರಸರನ್ನು ಗೆದ್ದುಕೊಂಡು ಲೋಟ ಹಾಗೂ ಆತನ ಕುಟುಂಬವನ್ನು ಬಿಡಿಸಿಕೊಂಡು ಬಂದ ಬಳಿಕ, **ಅಬ್ರಹಾಮನು** ತಾನು ಹೆಬ್ರೋನಿಗೆ ಹಿಂದಿರುಗುವ ದಾರಿಯಲ್ಲಿ ಯೆರೂಸಲೇಮಿನ ಸಮೀಪದ ಪ್ರಾಂತ್ಯವನ್ನು ಹಾದು ಹೋದನು (ಆದಿಕಾಂಡ 14). ಜಯದ ಉತ್ಸಾಹ ಮತ್ತು ಯುದ್ಧದಲ್ಲಿ **ಸುಲುಕೊಂಡು** ಬಂದವುಗಳಲ್ಲಿನ ಹೆಚ್ಚಳಕ್ಕಿಂತಲೂ ಬಿಡುಗಡೆಗೊಳಿಸಲ್ಪಟ್ಟವರಿಂದ ಸಿಕ್ಕಿದ ಕೃತಜ್ಞತಾಭಾವನೆ ಮತ್ತು ಗೌರವಗಳ ಮುಂದೆ ಅಲ್ಪವೆಂದು ತೋರಿದವು (ವ. 4). ಆತನು ಆ ಕಾಲದಲ್ಲಿ ನಿಸ್ಸಂಶಯವಾಗಿ ಆ ಪ್ರಾಂತ್ಯದೊಳಗೆ

ಅತ್ಯಂಥ ಗೌರವಕ್ಕೆ ಪಾತ್ರನಾದ ಮನುಷ್ಯನಾಗಿದ್ದನು. ಅಬ್ರಹಾಮನು ದೇವರಿಗೆ ತನ್ನ ಕೃತಜ್ಞತೆಯನ್ನು ತೋರಿಸುವದಕ್ಕೆ ಬಯಸಿದ್ದನು, ಮತ್ತು ಆತನು ಅದನ್ನು ತನಗೆ ಸಾಧ್ಯವಾದ ಅತ್ಯಂಥ ಉತ್ತಮ ದಾರಿಯಲ್ಲಿ ಮಾಡಿದ್ದನು – ಯೆಹೋವನ ಪ್ರತಿನಿಧಿಯ ಮೂಲಕವಾಗಿ ಕರ್ತನ ಕೆಲಸಕ್ಕೆ ಒಂದು ತಕ್ಕಷ್ಟು ಪ್ರಮಾಣದ ಕಾಣಿಕೆಯನ್ನು ಸಲ್ಲಿಸುವ ಮೂಲಕ ಮಾಡಿದನು. ಮೆಲ್ಕಿಜೆದೇಕನು, “ಸಾಲೇಮಿನ ಅರಸನು” ಮತ್ತು “ಪರಾತ್ಪರನಾದ ದೇವರ ಯಾಜಕನು.”[11] ಅಬ್ರಹಾಮನು ಯಾಜಕ/ಅರಸನನ್ನು ದೇವರ ದೃಷ್ಟಿಯಲ್ಲಿ ತನಗಿಂತಲೂ ಶ್ರೇಷ್ಠನಾದವನೆಂದು ಪರಿಗಣಿಸಿದನು ಎಂಬುದನ್ನು ಈ ವಿಭಾಗವು ತೋರಿಸುತ್ತದೆ (ನೋಡಿರಿ ವ. 7). ಆತನು ಇದನ್ನು ಮೆಲ್ಕಿಜೆದೇಕನಿಗೆ ಕಾಣಿಕೆಯನ್ನು ಕೊಡುವದು ಮತ್ತು ಯಾಜಕನ ಆಶೀರ್ವಾದವನ್ನು ಸ್ವೀಕರಿಸಿಕೊಳ್ಳುವದು ಎರಡರ ಮೂಲಕವೂ ಒಪ್ಪಿಕೊಂಡನು. ಆತನಿಗೆ ಆ ಮನುಷ್ಯನ ಶ್ರೇಷ್ಠತೆಯು ಹೇಗೆ ತಿಳಿದಿತ್ತು ಎಂಬುದರ ಬಗ್ಗೆ ನಾವು ಊಹೆಯನ್ನಷ್ಟೆ ಮಾಡಬಲ್ಲೆವು. ಆತನಿಗೆ ಒಂದು ಪ್ರಕಟನೆಯು ಕೊಡಲ್ಪಟ್ಟಿರಬೇಕು, ಅಥವಾ ಮೆಲ್ಕಿಜೆದೇಕನು ಒಬ್ಬ ಯಾಜಕನಾಗಿ ದೇವರ ಸೇವೆಯನ್ನು ಮಾಡುವವನು ಎಂಬುದು ಸಾಮಾನ್ಯವಾಗಿ ತಿಳಿದಿದ್ದ ವಿಚಾರವಾಗಿದ್ದಿರಬಹುದು.

ಅಬ್ರಹಾಮನು **ಹತ್ತನೆಯ ಒಂದು ಭಾಗವನ್ನು** (ದಶಮಾಂಶ) ಆರಿಸಿಕೊಂಡನು, ಅದು ಅತಿ ಪ್ರಾಚೀನ ಕಾಲಗಳಿಂದಲೂ ದೇವರಿಗೆ ಕೊಡುತ್ತಿದ್ದ ಸಾಮಾನ್ಯ ಕಾಣಿಕೆಯಾಗಿದ್ದಿರಬಹುದು.[12] ಮೆಲ್ಕಿಜೆದೇಕನು ದಶಮಾಂಶವನ್ನು ಕೇಳಲಿಲ್ಲ, ಆದರೆ ಅದನ್ನು ಅಂಗೀಕರಿಸಿಕೊಂಡನು ಮತ್ತು ಅದಕ್ಕೆ ಪ್ರತಿಯಾಗಿ ಸೌಜನ್ಯದಿಂದ ಅಬ್ರಹಾಮನನ್ನು ಆಶೀರ್ವದಿಸಿದನು. ಆತನು ಹಾಗೆ ಮಾಡುವದಕ್ಕೆ ದೇವರಿಂದ ಅಧಿಕಾರ ಮತ್ತು ಶಕ್ತಿಯನ್ನು ಹೊಂದಿದ್ದನೆಂದು ಸ್ಪಷ್ಟವಾಗಿ ತೋರುತ್ತದೆ. ದೇವರ ಪ್ರತಿನಿಧಿಯಾಗಿ ಮೆಲ್ಕಿಜೆದೇಕನಿಗೆ, ತನ್ನ ಜನರಿಂದ ಮಾತ್ರವೇ ಅಲ್ಲದೆ ಎಲ್ಲಾ ನಿಜವಾದ ಆರಾಧಕರಿಂದಲೂ ದಶಮಾಂಶಗಳನ್ನು ಸ್ವೀಕರಿಸಿಕೊಳ್ಳುವ ಅಧಿಕಾರವಿತ್ತು. ಲೇವಿಯ ಕುಲ ಯಾಜಕರಿಗೆ ಇಸ್ರಾಯೇಲ್ಯರಿಂದ ಮಾತ್ರವೇ ಕಾಣಿಕೆಗಳನ್ನು ಸ್ವೀಕರಿಸಿಕೊಳ್ಳುವದಕ್ಕೆ ಅನುಮತಿಯಿತ್ತು.[13] ಇದು ಆರೋನ ಯಾಜಕತ್ವಕ್ಕಿಂತ ಮೆಲ್ಕಿಜೆದೇಕನ ಶ್ರೇಷ್ಠತೆಯನ್ನು ಸೂಚಿಸುತ್ತದೆ. **ಲೇವಿಯ ಕುಲದವರಿಗೆ** (ಲೇವಿಯರಿಗೆ) ದಶಮಾಂಶಗಳು ಕೊಡಲ್ಪಡುತ್ತಿ ದ್ದವು ಯಾಕೆಂದರೆ ಅದು ದೇವರ ಕಟ್ಟಳೆಯಾಗಿತ್ತು (ವ. 5). ಆದುದರಿಂದ, ಆರಿಸಿಕೊಳ್ಳುವದು ವ್ಯಕ್ತಿಗಳಿಗೆ ಬಿಟ್ಟ ವಿಚಾರವಾಗಿರಲಿಲ್ಲ; ಅದು ದೇವರ ವಿಧಿ ಆಗಿತ್ತು. ಅಬ್ರಹಾಮನಿಂದ ಸಲ್ಲಿಸಲ್ಪಟ್ಟ ದಶಮಾಂಶವು ಆ ಕಾಲದಲ್ಲಿ ದೇವರಿಂದ ಯಾವದೇ ನೇರವಾದ ಅಥವಾ ನಿರ್ದಿಷ್ಟವಾದ ಆಜ್ಞೆಯಿಲ್ಲದೆ ಕೊಡಲ್ಪಟ್ಟಿದ್ದೆಂದು ತೋರುತ್ತದೆ; ಆತನು ಬಹುಶಃ ಎಷ್ಟು ಪ್ರಮಾಣದಲ್ಲಿ ಕೊಡಬೇಕೆಂಬ ರೂಢಿಯಲ್ಲಿದ್ದ ಆಚಾರವನ್ನು ಬಲ್ಲವನಾಗಿದ್ದನೆಂದು ಸ್ಪಷ್ಟವಾಗುತ್ತದೆ. ಮೆಲ್ಕಿಜೆದೇಕನು ದೇವರ ಸಂಗಡ ತನಗಿರುವ ಸಂಬಂಧವನ್ನು ಬಲ್ಲವನಾಗಿದ್ದರಿಂದ ಅಬ್ರಹಾಮನಿಂದ ದಶಮಾಂಶವನ್ನು ಸ್ವೀಕರಿಸಿಕೊಂಡನು.

**ಆಶೀರ್ವಾದ ಹೊಂದುವವನಿಗಿಂತ ಆಶೀರ್ವದಿಸುವವನು ದೊಡ್ಡವನು ಎಂಬದು ವಿವಾದವಿಲ್ಲದ ಮಾತಷ್ಟೆ** (ವ. 7) ಎಂಬ ಮಾತುಗಳು ಮೆಲ್ಕಿಜೆದೇಕನು ಅಬ್ರಹಾಮನಿಗಿಂಥ ದೊಡ್ಡವನು ಎಂಬುದನ್ನು ಸೂಚಿಸುತ್ತವೆ. ಯೋವಾಬನಂತಹ ಕಡಿಮೆಯಾದ ವ್ಯಕ್ತಿಯು “ಅರಸನನ್ನು ಹರಸಿದಾಗ” (2 ಸಮುವೇಲ 14:22), ಅದು ರಾಜನಿಗೆ ಗೌರವ ಮತ್ತು ಮರ್ಯಾದೆಯನ್ನು ನುಡಿಯುತ್ತಿದ್ದಾನೆಂದು ಕಾಣಿಸುತ್ತದೆ. ಅಬ್ರಹಾಮನು **ಮೂಲಪುರುಷ** ನಾಗಿದ್ದಾಗ್ಯೂ (πατριάρχης, *patriarchēs*; ವ. 4), ತನ್ನ ವಾಚಕರು ಮೆಲ್ಕಿಜೆದೇಕನಿಗಿಂತ ಅಬ್ರಹಾಮನು ಚಿಕ್ಕವನೆಂಬದು ವಾಸ್ತವಾಂಶ ಎಂಬುದನ್ನು ಅರ್ಥಮಾಡಿಕೊಂಡರೆಂಬುದರ ಬಗ್ಗೆ

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಪ್ರಶ್ನೆ ಮಾಡಲಿಲ್ಲ. "ಮೂಲಪುರುಷ" ಎಂಬ ಬಿರುದು ಅಬ್ರಹಾಮನ ಶ್ರೇಷ್ಠತೆಯನ್ನು ತೋರಿಸುತ್ತದೆ; ಆತನು ಯೆಹೂದಿ ಜನಾಂಗದ ಸ್ಥಾಪಕನಾಗಿ ಅತ್ಯಂಥ ದೊಡ್ಡ ಮಹತ್ವಪೂರ್ಣತೆಯನ್ನು ಹೊಂದಿದ್ದನೆಂಬುದನ್ನು ಸೂಚಿಸುತ್ತದೆ.[14] ಮೆಲ್ಕಿಜೆದೇಕನು "ಮೂಲಪುರುಷ" ನಿಗಿಂತ ದೊಡ್ಡವನಾಗಿದ್ದನಾದ್ದರಿಂದ, ಆತನ ಯಾಜಕತ್ವದ ಕ್ರಮವು (ಕ್ರಿಸ್ತನನ್ನು ಸೇರಿಸಿ) ಅಬ್ರಹಾಮನಿಂದ ಬಂದ ವಂಶಾವಳಿಗಿಂತಲೂ ಹೆಚ್ಚು ದೊಡ್ಡದಾಗಿರಬೇಕು. ಹೀಗೆ ಇಬ್ರಿಯರಿಗೆ ಪತ್ರಿಕೆಯ ವಾಚಕರು ಯೇಸುವನ್ನು ದೃಷ್ಟಿಸುವ ಬದಲಾಗಿ ಲೇವಿಯ ಯಾಜಕತ್ವದ ಮೇಲೆ ಆಧಾರಗೊಳ್ಳುವದಕ್ಕೆ ಸಾಧ್ಯವಾಗಲಿಲ್ಲ.

ಅಬ್ರಹಾಮನು ಮೆಲ್ಕಿಜೆದೇಕನಿಂದ ಆಶೀರ್ವಾದವನ್ನು ಪಡೆದುಕೊಳ್ಳುವದು ಆತನು ಮೂಲಪುರುಷ ಮತ್ತು ತನ್ನ ಸಂತಾನದವರ ಸ್ಥಾನವು ಚಿಕ್ಕದೆಂಬುದನ್ನು ಇನ್ನಷ್ಟು ತೋರಿಸುತ್ತದೆ. ಈ ಆಶೀರ್ವಾದವು ಅಬ್ರಹಾಮನ ಕ್ಷೇಮಕ್ಕಾಗಿ ಮಾಡಿದ ಹಾರೈಕೆ ಮಾತ್ರವೇ ಆಗಿರಲಿಲ್ಲ, ಯಾಕೆಂದರೆ ಅಂಥ ಆಶೀರ್ವಾದವನ್ನು ಯಾವ ವ್ಯಕ್ತಿಯಾದರೂ ಪಡೆದುಕೊಳ್ಳಬಲ್ಲನು. ಬದಲಾಗಿ, ಅದು ಆಶೀರ್ವದಿಸಬೇಕೆಂಬ ದೇವರ ಇಂಗಿತವನ್ನು ಘೋಷಿಸುವ ಅಧಿಕಾರ ಪಡೆದಿರುವಿಕೆಯನ್ನು ಸೂಚಿಸುತ್ತದೆ. ಮೂಲಪಿತೃಗಳ ಯುಗದಲ್ಲಿ ಆಚರಿಸಲಾಗುತ್ತಿದ್ದ ಅದೇ ಮಾದರಿಯಲ್ಲಿಯೇ, ಇಸಾಕ ಮತ್ತು ಯಾಕೋಬರು ತಮ್ಮ ಮಕ್ಕಳನ್ನು ದೈವಿಕ ಪ್ರವಾದನಾತ್ಮಕ ಮಾರ್ಗದರ್ಶನದಲ್ಲಿ ಆಶೀರ್ವದಿಸಿದರು (11:20, 21; ನೋಡಿರಿ ಆದಿಕಾಂಡ 27; 49). ಧರ್ಮಶಾಸ್ತ್ರದಡಿಯಲ್ಲಿ ಯಾಜಕರು ಸಹ ದೇವರ ಆಶೀರ್ವಾದಗಳನ್ನು ಘೋಷಿಸಬಲ್ಲವರಾಗಿದ್ದರು. ಅಬ್ರಹಾಮನ ಮೇಲಿನ ಆಶೀರ್ವಾದವು ಅದಕ್ಕೆ ಹೋಲಿಕೆ ಮಾಡಲ್ಪಡುವಂಥದ್ದಾಗಿರಬೇಕು. ಅದು ಯೇಸು ತನ್ನ ಶಿಷ್ಯರನ್ನು ಆಶೀರ್ವದಿಸಿದ ರೀತಿಯಲ್ಲಿತ್ತು, ಅದು ಅವರಿಗೋಸ್ಕರ ದೇವರಿಗೆ ಸ್ತೋತ್ರ ಮಾಡುವದಕ್ಕಿಂತ ಹೆಚ್ಚಿನದ್ದಾಗಿರಬಹುದಾಗಿದೆ (ಲೂಕ 24:50, 51).[15] ಯೇಸುವಿನ ಆಶೀರ್ವಾದವು ಒಬ್ಬ ಶ್ರೇಷ್ಠನಾದವನಿಂದ ಕಡಿಮೆಯಾಗಿರುವವರಿಗೆ ಹೋದವುಗಳಾಗಿವೆ, ಹೇಗೆ ಶ್ರೇಷ್ಠನಾಗಿದ್ದ ಮೆಲ್ಕಿಜೆದೇಕನು ತನಗಿಂತ ಕಡಿಮೆಯಾದ ಅಬ್ರಹಾಮನನ್ನು ಆಶೀರ್ವದಿಸಿದನೋ ಹಾಗೆಯೇ (ವ. 7).

**ವಚನ 8.** ಶಾಸ್ತ್ರಗಳು ಮೆಲ್ಕಿಜೆದೇಕನ ಮರಣ ಅಥವಾ ಯಾಜಕನಾಗಿ ಆತನು ಗತಿಸಿ ಹೋದ ಬಗ್ಗೆ ದಾಖಲೆಯನ್ನು ಹೊಂದಿರುವದಿಲ್ಲ. ಬದಲಾಗಿ, ಲೇಖಕನು ಆತನು **ಜೀವಿಸುತ್ತಿದ್ದಾನೆಂದು** ಬರೆಯುತ್ತಾನೆ. **ಸಾಕ್ಷಿ ಹೊಂದಿರುವವನು** (μαρτυρέω, *martureō*) ಎಂಬುದು ಆದಿಕಾಂಡದಲ್ಲಿ ಸಿಕ್ಕುವ ವಾಕ್ಯಭಾಗದ ಸಾಕ್ಷ್ಯ ಆಗಿರುತ್ತದೆ. ಅದೇ ರೀತಿಯ ಮಾತು ಇಬ್ರಿಯರಿಗೆ ಪತ್ರಿಕೆಯಲ್ಲಿ ಏಳು ಸಾರಿ ಬಳಸಲ್ಪಟ್ಟಿದ್ದು, ಅವುಗಳಲ್ಲಿ ಎರಡು ಹಳೆಯ ಒಡಂಬಡಿಕೆಯ ಹೇಳಿಕೆಗಳನ್ನು ಸೂಚಿಸುತ್ತವೆ (7:17; 10:15). ಅದೇ ವಿಷಯವು ಇಲ್ಲಿಯೂ ಸ್ಪಷ್ಟವಾಗಿ ಕಾಣಿಸುತ್ತದೆ, "ಲೇಖಕನು ತನ್ನ ಹೇಳಿಕೆಯನ್ನು ಅಧಿಕಾರಯುತ ಮೂಲದ ಮೇಲೆ ಆಧಾರಗೊಳಿಸುತ್ತಿದ್ದಾನೆ ಎಂಬುದರ ಸೂಕ್ಷ್ಮವಾದ ಜ್ಞಾಪಕವನ್ನು" ಕೊಡುತ್ತದೆ.[16]

ಮೆಲ್ಕಿಜೆದೇಕನ ಮರಣದ ಕುರಿತು ಸಾಕ್ಷಿ ಹೇಳುವ ವಾಕ್ಯಭಾಗದ ಅನುಪಸ್ಥಿತಿಯು ಲೇವಿಯ ವ್ಯವಸ್ಥೆಗೆ ತದ್ವಿರುದ್ಧವಾಗಿರುತ್ತದೆ. ಮೆಲ್ಕಿಜೆದೇಕನ ದಾಖಲೆಯ ವಿಷಯಕ್ಕೆ ಬಂದರೆ, ಆತನು ಸದಾಕಾಲವೂ ಜೀವಿಸುತ್ತಿರುವನು. ಅರೋನನ ಕ್ರಮದಡಿಯಲ್ಲಿ ಸೇವೆ ಮಾಡಿದವರನು ಮರಣಿಸಿದರು, ಮತ್ತು ಅವರ ಮರಣಗಳು ದಾಖಲಿಸಲ್ಪಟ್ಟಿದ್ದವು; ಆದರೆ ಮೆಲ್ಕಿಜೆದೇಕನ ಕ್ರಮದಡಿಯಲ್ಲಿರುವವರ (ಬೇರೆಯವರು ಇದ್ದರೆಂದು ಭಾವಿಸಿಕೊಳ್ಳುತ್ತಾ) ವಿಷಯದಲ್ಲಿ ಅದು ಸತ್ಯವಾಗಿರಲಿಲ್ಲ. ಧರ್ಮಶಾಸ್ತ್ರಗಳ ಅಡಿಯಲ್ಲಿ ಮಹಾಯಾಜಕರ ಕುರಿತಾಗಿ ಜಾಗರೂಕವಾದ ಮಾಹಿತಿಗಳನ್ನು ದಾಖಲಿಸಿಡಲಾಗುತ್ತಿತ್ತು, ಅವರ ಮರಣದ ಮಾಹಿತಿಯೂ ಸೇರಿದಂತೆ

(1 ಪೂರ್ವಕಾಲವೃತ್ತಾಂತ 6:50-53). ಅಂಥ ದಾಖಲೆಗಳನ್ನು ಬರೆದಿಡುವದು ಪ್ರಾಮುಖ್ಯವಾಗಿತ್ತು ಯಾಕೆಂದರೆ ಯಾಜಕತ್ವಕ್ಕಾಗಿ ಆರೋನನ ಮತ್ತು ಲೇವಿ ಕುಲದ ವಂಶಾವಳಿಯು ಅವಶ್ಯಕವಾಗಿತ್ತು. ಹೇಗೂ, ಮೆಲ್ಕಿಜೆದೇಕನ ವಂಶಾವಳಿಯು ಸಂಪೂರ್ಣ ಕೊರತೆಯಲ್ಲಿತ್ತು.

ಲೇಖಕನು ಯಾಜಕತ್ವದ ಉದ್ಯೋಗದ ಕಾಲಾವಧಿಯ ಬಗ್ಗೆ ಮಾತಾಡುತ್ತಿದ್ದಾನೆ, ಹೊರತು ಶಾರೀರಿಕ ಜೀವನದ ಕಾಲಾವಧಿಯ ಬಗ್ಗೆಯಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಲೋಕದಲ್ಲಿ, **ಸಾಯತಕ್ಕ ಮನುಷ್ಯರು ದಶಮಭಾಗಗಳನ್ನು ತಕ್ಕೊಳ್ಳುತ್ತಾರೆ**. ಶಾಸ್ತ್ರಗಳು ಮೆಲ್ಕಿಜೆದೇಕನ ಮರಣದ ಬಗ್ಗೆ ಯಾವದೇ ವರದಿಯನ್ನು ಕೊಡುವದಿಲ್ಲವಾದ್ದರಿಂದ, ಆತನ ಯಾಜಕತ್ವವು ತನ್ನ ಯಾಜಕತ್ವವನ್ನು ಪ್ರತಿಷ್ಠಾಪಿಸುವದಕ್ಕೆ ಮರಣಿಸಿದ ಆದರೆ ಜೀವಿತನಾಗಿ ಪುನಃ ಎದ್ದು ಬಂದ ಯೇಸುವಿಗೆ ಸಮರ್ಪಕವಾದ ಸಂಕೇತವಾಗಿತ್ತು. ಆತನು ಜೀವಿಸುತ್ತಿರುವನೆಂಬುದನ್ನು ಶಾಸ್ತ್ರಗಳು ದಾಖಲಿಸುತ್ತವೆ ಮತ್ತು ಸಾಕ್ಷಿ ಕೊಡುತ್ತವೆ! ಆತನು ನಿತ್ಯವಾದ ಜೀವವನ್ನು ಹೊಂದಿರು ವವನಾದ ಕಾರಣ, ಕ್ರಿಸ್ತನ ಯಾಜಕತ್ವವು ನಿರಂತರವಾಗಿ ಮುಂದುವರೆಯುತ್ತದೆಂಬುದು ಸ್ವಾಭಾವಿಕವಾಗಿ ಬರುವದಾಗಿದೆ.

ಈ ಹಂತದ ವರೆಗೂ, ನಾವು ಮೆಲ್ಕಿಜೆದೇಕನ ಯಾಜಕತ್ವ ಮತ್ತು ಲೇವಿಯ ಯಾಜಕತ್ವದ ನಡುವೆ ಯಾವದೇ ಹೋಲಿಕೆ ಮಾಡುವದನ್ನು ನೋಡಿರುವದಿಲ್ಲ. ಅಬ್ರಹಾಮನು ಮೆಲ್ಕಿಜೆದೇಕನಿಗೆ ಕಡಿಮೆಯಾದವನಾಗಿದ್ದರೆ, ಲೇವಿಯ ಯಾಜಕತ್ವವು ಮೆಲ್ಕಿಜೆದೇಕನ ಯಾಜಕತ್ವಕ್ಕೆ ಕಡಿಮೆಯಾದದ್ದು ಎಂದಾಗುತ್ತದೆ. "ತನ್ನ ವಾದವನ್ನು ಹೆಚ್ಚು ಮನವರಿಕೆಯುಂಟು ಮಾಡುವಂಥದ್ದನ್ನಾಗಿ ಮಾಡುವದಕ್ಕಾಗಿ, ಲೇಖಕನು . . . ಅಬ್ರಹಾಮನ ಮೂಲಕ ಲೇವಿಯೂ ಸ್ವತಃ ದಶಮಭಾಗವನ್ನು ಕೊಟ್ಟನು ಎಂದು ಹೇಳುವ ಮೂಲಕ ಅತಿ ಮೂಲಭೂತವಾದ ಇಬ್ರಿಯ ಭಾವನೆಗಳಲ್ಲೊಂದನ್ನು ಬಳಸಿಕೊಳ್ಳು ತ್ತಾನೆ."[17]

**ವಚನಗಳು 9, 10. ಹೇಗಂದರೆ** (ವ. 9) ಎಂಬುದು ಒಂದು ಬೆಚ್ಚಿಬೀಳಿಸುವ ಸಾಂಕೇತಿಕ ಹೇಳಿಕೆಯನ್ನು ಮಿತಿಗೊಳಿಸಲು ಮತ್ತು ಅಪಾರ್ಥಕ್ಕೊಳಗಾಗುವದರಿಂದ ಕಾಪಾಡುವದಕ್ಕಾಗಿ ಗ್ರೀಕ್ ಲೇಖಕರು ಬಳಸುತ್ತಿದ್ದ ಸಾಮಾನ್ಯವಾದ ಮಾತು ಆಗಿರುತ್ತಿತ್ತು.[18] ಖಂಡಿತವಾಗಿಯೂ, ಲೇವಿಯು ಅಕ್ಷರಶಃ **ತತ್ವರೂಪವಾಗಿ** ಅಬ್ರಹಾಮನೊಳಗೆ ಇರಲಿಲ್ಲ; ಇದು ಲೇವಿಯನನ್ನು ಅಬ್ರಹಾಮನ ಸಂತಾನದವನೆಂದು ಗುರುತಿಸುವ ಒಂದು ಮಾತಾಗಿತ್ತು. ಹೆಚ್ಚು ಸೂಕ್ತವಾಗಿ, ಅದನ್ನು "ಆತನು ಇನ್ನೂ ಪಡೆಯಲಿದ್ದನು"[19] ಎಂದು ಅನುವಾದಿಸಬಹುದಾಗಿದೆ. ಅಬ್ರಹಾಮನು ಯೆಹೂದಿ ಕುಟುಂಬದ ಪ್ರತಿನಿಧಿಸುವ ತಲೆಯಾಗಿದ್ದರಿಂದ, ಒಂದು ಅರ್ಥದಲ್ಲಿ ಆತನ ಕ್ರಿಯೆಗಳು, ಆತನ ಸಂತಾನದವರು ಮಾಡುವ ಕ್ರಿಯೆಗಳೆಂದು ಹೇಳಬಹುದಾಗಿತ್ತು. ಇದು ರೋಮಾ 5:12-14 ಮತ್ತು 1 ಕೊರಿಂಥ 15:22ರಲ್ಲಿ ಆದಾಮನಿಗೆ ಸಂಬಂಧಿಸಿದಂತೆ ಅದೇ ರೀತಿ ಬಳಸಲ್ಪಟ್ಟಿರುವಂತೆ ಕಾಣಿಸುತ್ತದೆ. Albert Barnesನು ಆಂಗ್ಲ ಸಾಮಾನ್ಯ ಕಾನೂನಿನೊಳಗಿಂದ ಈ ದೃಷ್ಟಾಂತವನ್ನು ಕೊಟ್ಟನು: "ಒಬ್ಬ ದೂರದ ಪೂರ್ವಜನು ಇನ್ನೊಂದು ವರ್ಗದ ಪೂರ್ವಜನಿಗೆ ಅಥವಾ ನಾಮಾಂಕಿತ ಶ್ರೀಮಂತನಿಗೆ ಗೌರವಾರ್ಪಣೆ ಅಥವಾ ಸ್ವಾಮಿ ನಿಷ್ಠೆಯನ್ನು ಸಲ್ಲಿಸಿದ್ದನೆಂಬ ವಾಸ್ತವಾಂಶವನ್ನು, ಕುಟುಂಬದಲ್ಲಿ ತಾವು ಕಡಿಮೆಯಾದವರೆಂಬುದನ್ನು ಒಪ್ಪಿಕೊಂಡಿದ್ದಕ್ಕೆ ಪುರಾವೆಯೆಂದು ಎಣಿಸಲ್ಪಡಬಹುದು, ಮತ್ತು ಒಂದು ವಾಗ್ವಾದದಲ್ಲಿ ಅದನ್ನು ಬಲವಾಗಿಯೂ ಔಚಿತ್ಯವಾಗಿಯೂ ಬಳಸಬಹುದಾಗಿತ್ತು."[20] ಆತನು ಅದೇ ರೀತಿಯಲ್ಲಿಯೇ ಗಮನಕ್ಕೆ ತಂದದ್ದೇನೆಂದರೆ ಒಬ್ಬ ತಂದೆಯು ಯಾವದೋ ಭೂಮಿಯನ್ನು ಮಾರಿದರೆ, ಅದು ಒಂದು ರೀತಿಯಲ್ಲಿ ಅವನ ಬಾಧ್ಯಸ್ತನು ಸ್ವತಃ ಅದನ್ನು

ಮಾರಿದಂತೆ ಆಗುವದು ಎಂಬದೆ.

ಈ ಚರ್ಚೆಯಲ್ಲಿನ ನಿಜವಾದ ವಿರುದ್ಧತೆಯು **ಮೆಲ್ಕಿಜೆದೇಕನ** ಯಾಜಕತ್ವದ ಕ್ರಮ ಮತ್ತು ಲೇವಿಯ ಯಾಜಕತ್ವ ಕ್ರಮದ ನಡುವಿನದ್ದಾಗಿತ್ತು, ಆ ವಂಶದಿಂದಲೇ ಆರೋನನು ಕಡಿಮೆಯಾದವನಾಗಿ ಬಂದಿದ್ದನು. ಇಬ್ರಿಯರಿಗೆ ಪತ್ರಿಕೆಯ ಜೀವಧಾರಕವಾದ ಅಂಶವು ಮೆಲ್ಕಿಜೆದೇಕನ ಯಾಜಕತ್ವ/ಅರಸತ್ವ ಆಗಿರುವದಿಲ್ಲ, ಆದರೆ ದೇವರ ಯೋಜನೆಯಲ್ಲಿ ಕ್ರಿಸ್ತನು ಮತ್ತು ಆತನ ಪಾತ್ರದ ಕುರಿತಾಗಿರುತ್ತದೆ.

ಅಬ್ರಹಾಮನು ಯಜ್ಞಗಳನ್ನು ನಿಯತಕ್ರಮವಾಗಿ ಅರ್ಪಿಸುತ್ತಿದ್ದನು ಮತ್ತು ದೇವರೊಂದಿಗೆ ಮಾತಾಡು ಸಂಬಂಧವನ್ನು ಹೊಂದಿದ್ದೆನೆಂಬುದರಲ್ಲಿ ಸ್ವತಃ ಆತನೇ ಒಬ್ಬ ಯಾಜಕನಾಗಿದ್ದನೆಂಬ ತಾರ್ಕಿಕವಾಗಿ ವಾದವನ್ನು ಮಾಡಬಹುದಾಗಿದೆ. ಹಾಗಿದ್ದರೂ, ಆತನು ಮೆಲ್ಕಿಜೆದೇಕನನ್ನು ತನಗಿಂತ ದೊಡ್ಡವನೆಂದು ಎಣಿಸಿದನು. ಅಲ್ಲದೆ, ಅನಂತರದಲ್ಲಿ ಇಸ್ರಾಯೇಲ್ಯರಲ್ಲಿನ ಯಾಜಕರ ಪಾತ್ರವು ತೋರಿಸಿದ ಪ್ರಕಾರ, ಅಬ್ರಹಾಮನು ಬೇರೆ ಜನರು ಮತ್ತು ದೇವರ ನಡುವೆ ಮಧ್ಯಸ್ಥನಾಗಿ ಸೇವೆ ಸಲ್ಲಿಸಿರಬಹುದಾಗಿದೆ. ಇದು ತನ್ನ ಸೋದರ ಸಂಬಂಧಿಯಾದ ಲೋಟನ ಪರವಾಗಿ ದೇವರ ಮುಂದೆ ಮೊರೆಯಿಡುವದರಲ್ಲಿ ಸೂಚಿತವಾಗಿರುತ್ತದೆ (ಆದಿಕಾಂಡ 18:22-33).

ಹೊಸ ಒಡಂಬಡಿಕೆಯ ಅಡಿಯಲ್ಲಿ, ಕ್ರೈಸ್ತರು ಕ್ರಿಸ್ತನ ರಾಜ್ಯದಲ್ಲಿ ಯಾಜಕರಾಗಿದ್ದಾರೆ ಮತ್ತು ಅವರು "ಆತ್ಮೀಯ ಯಜ್ಞಗಳನ್ನು" ಅರ್ಪಿಸುವವರಾಗಿರಬೇಕು (1 ಪೇತ್ರ 2:5; ನೋಡಿರಿ ಪ್ರಕಟನೆ 1:6; 5:10). "ದೇವಜನರು" ಆಗಿರುವ ಎಲ್ಲಾ ಕ್ರೈಸ್ತರು, ಒಬ್ಬನಿಗಿಂತ ಮತ್ತೊಬ್ಬನು ದೊಡ್ಡವನೆಂದಲ್ಲದೆ ಎಲ್ಲರೂ ಸಮಾನರಾಗಿರುತ್ತಾರೆ. ದೊಡ್ಡದಾದ ಸೇವೆಯು ಮಾತ್ರವೇ ಒಬ್ಬನನ್ನು ದೇವರ ದೃಷ್ಟಿಯಲ್ಲಿ ದೊಡ್ಡವನನ್ನಾಗಿ ಮಾಡಬಲ್ಲದು (ಮತ್ತಾಯ 20:25-28). ನಾವು ಯಾಜಕರಾಗಿದ್ದೇವಾದರೂ, ನಮ್ಮ ಪ್ರಾರ್ಥನೆಗಳನ್ನು ಹೆಚ್ಚು ಪರಿಣಾಮಕರಗೊಳಿಸುವದಕ್ಕೆ ನಮಗೆ ನಮ್ಮ ಮಹಾನ್ ಮಧ್ಯಸ್ಥನಾಗಿರುವ ಕ್ರಿಸ್ತನ ಸಹಾಯದ ಅಗತ್ಯವಿರುತ್ತದೆ (ಇಬ್ರಿಯ 4:14-16; 7:25).

## ಮೆಲ್ಕಿಜೆದೇಕನ ವಂಶದಲ್ಲಿ ಕ್ರಿಸ್ತನ ಮಹಾಯಾಜಕತ್ವ (7:11-22)

**[11]ಇಸ್ರಾಯೇಲ್ಯರಿಗೆ ಉಂಟಾದ ಧರ್ಮಶಾಸ್ತ್ರವು ಲೇವಿಕ ಯಾಜಕತ್ವದ ಮೇಲೆಯೇ ಆಧಾರಗೊಂಡಿದೆಯಷ್ಟೆ. ಆ ಯಾಜಕತ್ವದಿಂದ ಸಂಪೂರ್ಣಸಿದ್ಧಿ ಉಂಟಾಗಿದ್ದರೆ ಆರೋನನ ತರಹದವನಾಗಿರದೆ ಮೆಲ್ಕಿಜೆದೇಕನ ತರಹದ ಬೇರೊಬ್ಬ ಯಾಜಕನು ಬರುವದಕ್ಕೆ ಅವಶ್ಯವೇನಿತ್ತು? [12]ಯಾಜಕತ್ವವು ಬೇರೆಯಾದರೆ ಧರ್ಮಶಾಸ್ತ್ರವು ಕೂಡ ಬೇರೆಯಾಗುವದು ಅಗತ್ಯ. [13]ಮೇಲ್ಕಂಡ ಮಾತು ಯಾವಾತನ ವಿಷಯದಲ್ಲಿ ಹೇಳಿದೆಯೋ ಆತನು ಬೇರೊಂದು ಕುಲದಲ್ಲಿ ಹುಟ್ಟಿದವನು; ಆ ಕುಲದವರಲ್ಲಿ ಒಬ್ಬರೂ ಯಜ್ಞವೇದಿಯ ಬಳಿಯಲ್ಲಿ ಸೇವೆಮಾಡಿದ್ದಿಲ್ಲ. [14]ನಮ್ಮ ಕರ್ತನು ಯೆಹೂದ ಕುಲದಲ್ಲಿ ಜನಿಸಿದನೆಂಬದು ಪ್ರಸಿದ್ಧವಾಗಿದೆಯಷ್ಟೆ; ಈ ಕುಲದ ವಿಷಯದಲ್ಲಿ ಮೋಶೆಯು ಯಾಜಕರ ಸಂಬಂಧವಾಗಿ ಒಂದು ಮಾತನ್ನಾದರೂ ಹೇಳಲಿಲ್ಲ. [15-16]ಇದಲ್ಲದೆ ಬೇರೊಬ್ಬ ಯಾಜಕನು ಶರೀರಧರ್ಮ ವಿಷಯವಾದ ನಿಯಮದ ಪ್ರಕಾರವಾಗಿರದೆ ಮೆಲ್ಕಿಜೆದೇಕನ ಸಾದೃಶ್ಯದಲ್ಲಿ ನಿರ್ಲಯವಾದ ಜೀವದ ಶಕ್ತಿಯುಳ್ಳವನಾಗಿದ್ದು ಬರಬೇಕಾದದರಿಂದ ನಮ್ಮ ಸಿದ್ಧಾಂತ ಮತ್ತೂ ಸ್ಪಷ್ಟವಾಯಿತು. [17]ಆತನ ವಿಷಯದಲ್ಲಿ – ನೀನು ಸದಾಕಾಲವೂ ಮೆಲ್ಕಿಜೆದೇಕನ [18]ತರಹದ ಯಾಜಕನಾಗಿದ್ದೀ ಎಂದು ಹೇಳಿಯದೆಯಲ್ಲಾ. [19]ಧರ್ಮಶಾಸ್ತ್ರವು ಯಾವದನ್ನೂ ಸಿದ್ಧಿಗೆ ತಾರದೆ ಇರುವದರಿಂದ ಮೊದಲಿದ್ದ ನಿಯಮವು**

**ನಿರ್ಬಲವಾಗಿಯೂ ನಿಷ್ಪ್ರಯೋಜಕ ವಾಗಿಯೂ ಇದ್ದು ರದ್ದಾಗಿ ಹೋಯಿತು. ಅದಕ್ಕೆ ಬದಲಾಗಿ ಉತ್ತಮವಾಗಿರುವ ಒಂದು ನಿರೀಕ್ಷಾಧಾರವು ಪ್ರಾಬಲ್ಯಕ್ಕೆ ಬಂತು. ಈ ನಿರೀಕ್ಷಾಧಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸುವಂಥದು.**

**[20-21]ಇದಲ್ಲದೆ ಲೇವಿಯರು ಆಣೆಯಿಲ್ಲದೆ ಯಾಜಕರಾದರು; ಆತನಾದರೋ ಆಣೆಯೊಡನೆ ಯಾಜಕನಾಗಿ ಮಾಡಲ್ಪಟ್ಟನು. ದೇವರು ಆತನಿಗೆ –**

**ನೀನು ಸದಾಕಾಲವೂ ಯಾಜಕನಾಗಿದ್ದೀ ಎಂದು**

**ಕರ್ತನೆಂಬ ನಾನು ಆಣೆಯಿಟ್ಟು ನುಡಿದೆನು; ಪಶ್ಚಾತ್ತಾಪಪಡುವದಿಲ್ಲ**

**ಎಂಬದಾಗಿ ಹೇಳಿದನಲ್ಲಾ. [22]ಯೇಸು ಆಣೆಯೊಡನೆಯೇ ಯಾಜಕನಾದದರಿಂದ ಎಷ್ಟೋ ಶ್ರೇಷ್ಠವಾದ ಒಡಂಬಡಿಕೆಗೆ ಹೊಣೆಗಾರನಾದನು.**

ಇಬ್ರಿಯ 7:11-22ರ ವಾಕ್ಯಭಾಗವು ಯೇಸು ತಪ್ಪಾದ ವಂಶಾವಳಿಯಿಂದ ಬಂದವನಾದ್ದರಿಂದ ಆತನು ಒಬ್ಬ ಯಾಜಕನಾಗಲಾರನು ಎಂಬ ಆಕ್ಷೇಪಣೆಗೆ ಪ್ರತ್ಯುತ್ತರವಾಗಿ ಬರೆಯಲ್ಪಟ್ಟಿರಬಹುದಾಗಿದೆ. ದೈವಿಕ ಪ್ರೇರಣೆಯಿಂದ ಮಾರ್ಗದರ್ಶಿಸಲ್ಪಟ್ಟವನಾಗಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಒಬ್ಬ ನೂತನ ಯಾಜಕನು ಹೊಸ ಒಡಂಬಡಿಕೆಯ ಭಾಗವಾಗಿರುವನೆಂದು ಪ್ರವಾದಿಸಿದ ಒಂದು ವಾಕ್ಯಭಾಗವನ್ನು ಬಳಸಿದನು: ಕೀರ್ತನೆ 110:4. ಪ್ರಥಮ ಶತಮಾನದ ವಾಚಕರು ಹಳೆಯ ಯಾಜಕತ್ವದ ಜೊತೆಯಲ್ಲಿಯೇ ಹೊಸ ಯಾಜಕತ್ವವೊಂದು ಅಸ್ತಿತ್ವದಲ್ಲಿರಬಲ್ಲದು ಎಂದು ಯೋಚಿಸಿಕೊಂಡಿರಬಹುದಾಗಿದೆ; ಹಳೆಯ ಒಡಂಬಡಿಕೆಯ ಯಾಜಕತ್ವವು ಇಲ್ಲವಾಗಿ ಅದರ ಸ್ಥಳದಲ್ಲಿ ಕ್ರಿಸ್ತನ ಯಾಜಕತ್ವವು ಬರುವದೆಂದು ಇಬ್ರಿಯರಿಗೆ ಪತ್ರಿಕೆಯಲ್ಲಿ ಬರೆಯಲ್ಪಡುವ ತನಕ ಅವರಿಗೆ ಅದು ಅರ್ಥವಾಗದೆ ಇದ್ದಿರಬಹುದಾಗಿದೆ.

**ವಚನಗಳು 11, 12. ಯಾಜಕತ್ವವು ಬೇರೆಯಾದರೆ** ಎಂಬ ಭಾವನೆಯು (ವ. 12) ಯೆಹೂದ್ಯರೊಳಗೆ ಅನೇಕರಲ್ಲಿ ಕ್ರೈಸ್ತತ್ವದ ಕಡೆಗೆ ಬಹುವಾದ ವೈಷಮ್ಯವನ್ನು ಉಂಟುಮಾಡಿತ್ತು. ಅವರು ದೀರ್ಘಕಾಲದಿಂದ ಗೌರವಿಸುತ್ತಾ ಬಂದಿದ್ದ **ಧರ್ಮಶಾಸ್ತ್ರ**ದ ವಿಷಯದಲ್ಲಿ ಬದಲಾವಣೆಯನ್ನು ಅಂಗೀಕರಿಸಿಕೊಳ್ಳುವದು ಅವರು ಸಹಿಸಿಕೊಳ್ಳುವದಕ್ಕೆ ಆಗದ ವಿಚಾರವಾಗಿತ್ತು.

ಹಳೆಯ ಯಾಜಕತ್ವದ ಸ್ಥಾನದಲ್ಲಿ ಹೊಸ ಯಾಜಕತ್ವವು ಬರುವದು ಮತ್ತು ಹಳೆಯದಕ್ಕೆ ಏನನ್ನು ಕೊಡುವದಕ್ಕಾಗಲಿಲ್ಲವೋ ಅದನ್ನು – **ಸಂಪೂರ್ಣಸಿದ್ಧಿ** (ವ. 11) – ಒದಗಿಸುವದಾಗಿತ್ತು. ಅಂಥ ಪರಿಪೂರ್ಣತೆಯಲ್ಲಿ ಮನುಷ್ಯನಿಗೆ ಕ್ರಿಸ್ತನ ಮೂಲಕವಾಗಿ ದೇವರ ಬಳಿಗೆ ಹೋಗಲು ದಾರಿಯಾಗುವದು ಸೇರಿತ್ತು. ಇಲ್ಲಿ, ನಾವು ಇಬ್ರಿಯರಿಗೆ ಪತ್ರಿಕೆಯ ಪ್ರಧಾನ ಅಂಶವನ್ನು ಕಾಣುತ್ತೇವೆ: ದೇವರ ಬಳಿಗೆ ಹೋಗುವದಕ್ಕೆ ಬೇರೆ ಇನ್ನಾವ ದಾರಿಯೂ ಇರುವದಿಲ್ಲ (ಯೋಹಾನ 14:6).

"ಪರಿಪೂರ್ಣಸಿದ್ಧಿ" (τελείωσις, *teleiōsis*) ಒಂದು ಸಂಪೂರ್ಣತೆಯನ್ನು ಸೂಚಿಸುತ್ತದೆ – ಒಂದು ಮುಕ್ತಾಯವನ್ನು ಅಪೇಕ್ಷಿಸುವದು ಮತ್ತು ಸಾಧಿಸಲ್ಪಟ್ಟದ್ದು ಎಂಬುದನ್ನು ಸೂಚಿಸುತ್ತದೆ, ಹಳೆಯ ಒಡಂಬಡಿಕೆಯಲ್ಲಿ ಕಂಡು ಬರದಂಥ ಒಂದು ಪರಿಪೂರ್ಣತೆ. ಪರಿಪೂರ್ಣತೆಯು **ಲೇವಿಕ ಯಾಜಕತ್ವದ** ಮೂಲಕ ಸಾಧಿಸಿಕೊಳ್ಳಲ್ಪಡ ತಕ್ಕದ್ದೆಂದು ಮತ್ತು ಆ ಕಾರಣದಿಂದ ಅನಿವಾರ್ಯವಾದದ್ದೆಂದು ಯೆಹೂದ್ಯರು ನಂಬಿದ್ದರು. ಖಂಡಿತವಾಗಿಯೂ, ಧರ್ಮಶಾಸ್ತ್ರವು ತನ್ನ ಬುನಾದಿಯನ್ನು ಲೇವಿಕ ಯಾಜಕತ್ವದ ಮೇಲೆ ಹೊಂದಿತ್ತು. ಹಳೆಯ ಒಡಂಬಡಿಕೆಯ ಯಜ್ಞಗಳ ವ್ಯವಸ್ಥೆಯ ಕುರಿತಾದ ಅವರ ಯೋಚನೆಯು ತಪ್ಪಿನಿಂದ ಕೂಡಿತ್ತೆಂಬುದನ್ನು ನಮ್ಮ

ವಾಕ್ಯಭಾಗವು ತೋರಿಸುತ್ತದೆ – ಧರ್ಮಶಾಸ್ತ್ರದಲ್ಲಿ ವಾಗ್ದಾನ ಮಾಡಿರುವಂತೆ "ಹೋರಿಗಳ ಮತ್ತು ಹೋತಗಳ ರಕ್ತದಿಂದ" ಪಾಪಗಳ ಪರಿಹಾರವು ಸಾಧ್ಯವಿಲ್ಲ ಎಂಬದೆ (10:4).

"ಪರಿಪೂರ್ಣಸಿದ್ಧಿ" ಎಂಬುದು ಪಾಪರಹಿತ ಪರಿಪೂರ್ಣತೆ ಅಥವಾ ಪಾಪದ ಎಲ್ಲಾ ಬಯಕೆಗಳನ್ನು ಸಂಪೂರ್ಣ ಜಯಿಸಿಕೊಂಡಿರುವದು ಎಂಬರ್ಥವನ್ನು ಕೊಡುವದಿಲ್ಲ, ಆದರೆ ಅದು ಪಾಪಗಳ ಸಂಪೂರ್ಣ ಮನ್ನಿಸುವಿಕೆ ಮತ್ತು ಕ್ಷಮಾಪಣೆಯನ್ನು ಸೂಚಿಸುತ್ತದೆಂಬುದು ಸ್ಪಷ್ಟವಾಗಿದೆ. ಲೇವಿಕ ವ್ಯವಸ್ಥೆಯ ಮೂಲಕ ರಕ್ಷಣೆಯು ಲಭ್ಯವಾಗಿದ್ದರೆ, ದಾವೀದನ ಕಾಲದಲ್ಲಿ ಇನ್ನೊಂದು ತರಹದ ಯಾಜಕನು ಎದ್ದೇಳುವನು ಎಂದು ದೇವರು ಏಕೆ ಹೇಳಿದನು (ನೋಡಿರಿ ಕೀರ್ತನೆ 110:4)? ಇದು ಯೆಹೂದಿ ಯಾಜಕತ್ವದ ಅಪರಿಪೂರ್ಣತೆಯನ್ನು ತೋರಿಸುತ್ತದೆ. ನೂತನ ಯಾಜಕತ್ವದ ಭಾವನೆಯು ಯೆಹೂದಿಮತದ ಮುಖ್ಯ ನಂಬಿಕೆಗೆ ಒಂದು ಹೊಡೆತವಾಗಿತ್ತು! "ಯಾಜಕತ್ವಕ್ಕೆ ಸಂಬಂಧಿಸಿದ ಕಟ್ಟಳೆಗಳು ಸದಾಕಾಲವೂ ಉರ್ಜಿತವಾದವುಗಳೆಂದು ಜನರು ನಂಬಿದ್ದರು."[21]

ಪೌಲನು ಧರ್ಮಶಾಸ್ತ್ರದ ವಿಷಯದಲ್ಲಿ ಅದೇ ರೀತಿಯಲ್ಲಿ ವಾದಿಸಿದನು, ಅದು ಜೀವವನ್ನು ಕೊಡುವದಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ತೋರಿಸಿ ಕೊಡುತ್ತಾನೆ (ಗಲಾತ್ಯ 3:21; ನೋಡಿರಿ 2:21). ವಾಸ್ತವದಲ್ಲಿ, ಇಸ್ರಾಯೇಲ್ಯರ ಚರಿತ್ರೆಯಲ್ಲಿ ಅತ್ಯಂಥ ನೀತಿಯುಳ್ಳ ಜನರು ತಮ್ಮನ್ನು ಪರಿಪೂರ್ಣಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ (ಇಬ್ರಿಯ 11:40). ಸಮಸ್ಯೆಗೆ ಉತ್ತರವು ಕ್ರಿಸ್ತನು ಒಬ್ಬನೇ ಆಗಿದ್ದಾನೆ (ರೋಮಾ 7:7-25). ಈ ಸಮಸ್ಯೆಗೆ ಧರ್ಮಶಾಸ್ತ್ರದೊಳಗೆ ಯಾವದೇ ಪರಿಹಾರವು ಇರಲಿಲ್ಲ, ಯಾಕೆಂದರೆ ಅದರ ಹೊಣೆಯು ಪಾಪದಿಂದ ಸ್ವಾತಂತ್ರ್ಯವನ್ನು ಕೊಡುವದಕ್ಕಿಂತಲೂ ಪಾಪದ ಕುರಿತು ಅರುಹು ಉಂಟು ಮಾಡುವದೇ ಆಗಿತ್ತು (ಗಲಾತ್ಯ 3:19).

ಲೇವಿಕ ಯಾಜಕತ್ವವನ್ನು ಮೋಶೆಯ ಧರ್ಮಶಾಸ್ತ್ರದಿಂದ ಬೇರ್ಪಡಿಸುವದಕ್ಕೆ ಸಾಧ್ಯವಿರಲಿಲ್ಲವಾದ್ದರಿಂದ, ಒಂದು ಮತ್ತೊಂದರ ಮೇಲೆ ತೀವ್ರವಾಗಿ ಪರಿಣಾಮವನ್ನು ಬೀರದೆ ಬದಲಾವಣೆಗೊಳ್ಳುವದು ಅಸಾಧ್ಯವಾಗಿತ್ತು. ಯಾಜಕತ್ವವು ಧರ್ಮಶಾಸ್ತ್ರಕ್ಕೆ ಅವಶ್ಯಕವಾಗಿತ್ತು; "ಧರ್ಮಶಾಸ್ತ್ರವು [ಯಾಜಕತ್ವವಿಲ್ಲದೆ] ಕಾರ್ಯ ಮಾಡುವದಕ್ಕಾಗಲಿಲ್ಲ."[22] ವಾಸ್ತವಿಕದಲ್ಲಿ, ಧರ್ಮಶಾಸ್ತ್ರವು ಯಾಜಕತ್ವದ ಆಧಾರದಲ್ಲಿ ಕೊಡಲ್ಪಟ್ಟಿತ್ತು (ವ. 11), ಯಾಕೆಂದರೆ ಸಿನಾಯ್ ಪರ್ವತದಲ್ಲಿ ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ಮುಂಚೆಯೇ ಯಾಜಕತ್ವವು ಸ್ಥಾಪಿಸಲ್ಪಟ್ಟಿತ್ತು.

ಒಂದು ಮಾನವ ದೃಷ್ಟಿಕೋನದಿಂದ, ದೇವರು ಒಂದು ವ್ಯತ್ಯಾಸವಾದ ಯಾಜಕತ್ವಕ್ಕೆ ದಾರಿ ಮಾಡಿಕೊಡುವದಕ್ಕೆ ತನ್ನ ಧರ್ಮಶಾಸ್ತ್ರವನ್ನು ತಿದ್ದುಪಡಿ ಮಾಡಿರಬಹುದಿತ್ತೆಂದು ತೋರಬಹುದು. ಹೇಗೂ, ದೇವರ ದಾರಿಯು 14ನೇ ವಚನದಲ್ಲಿ ಕಾಣುತ್ತದೆ. ನೂತನ ಯಾಜಕತ್ವಕ್ಕೆ ಒಂದು ನೂತನ ಧರ್ಮಶಾಸ್ತ್ರವು ಅಗತ್ಯವಿರುತ್ತದೆಂಬುದು ತಾರ್ಕಿಕವಾದದ್ದು. ಯಾಜಕತ್ವವು ಧರ್ಮಶಾಸ್ತ್ರದ ಅಸ್ತಿವಾರ ಮತ್ತು ಮೇಲ್ಕಟ್ಟಡ ಆಗಿತ್ತಾದ್ದರಿಂದ, ಎರಡು ಸಹ ಜೊತೆಜೊತೆಯಾಗಿಯೇ ನಿಲ್ಲಬೇಕಿತ್ತು ಅಥವಾ ಬೀಳಬೇಕಿತ್ತು (ವ. 12). ಇದು ಯೆಹೂದಿಮತ ಮತ್ತು ಅದರ ಭಾಗಶಃ ನೀತಿಕರಣದ ವ್ಯವಸ್ಥೆಯು ಗತಿಸಿ ಹೋಗುವಿಕೆಯು ಕುರಿತು ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಿರುವ ಅತ್ಯಂಥ ಸ್ಪಷ್ಟವಾದ ವಿವರಣೆಯಾಗಿರುತ್ತದೆ. ಹಿರೀ ಸಭೆಯು ಆರೋಪಿಸಿದ ಪ್ರಕಾರವೇ, ಸಭೆಯ ಆರಂಭದಿಂದಲೂ ಈ ಸೂಚ್ಯಾರ್ಥವು ಸ್ಪಷ್ಟವಾಗಿ ಕಾಣಿಸುತ್ತಿತ್ತು: "ಆ ನಜರೇತಿನ ಯೇಸು ಈ ದೇವಾಲಯವನ್ನು ಕೆಡವಿ ಮೋಶೆ ನಮಗೆ ನೇಮಿಸಿರುವ ಆಚಾರಗಳನ್ನು ಬೇರೆ ಮಾಡುವನೆಂಬದಾಗಿ ಇವನು ಹೇಳುವದನ್ನು ನಾವು ಕೇಳಿದ್ದೇವೆ" (ಅಪೊಸ್ತಲರ ಕೃತ್ಯಗಳು 6:14). ಧರ್ಮಶಾಸ್ತ್ರದ ಪದ್ಧತಿಗಳು ಬದಲಾಗಬೇಕಿತ್ತು. ಯಾಜಕರಲ್ಲಿ ಅನೇಕರು ವಿಶ್ವಾಸಿಗಳಾಗಿದ್ದರಾದರೂ (ಅಪೊಸ್ತಲರ ಕೃತ್ಯಗಳು 6:7),

ಸುವಾರ್ತೆಯ ಈ ಪ್ರಾಥಮಿಕ ಸತ್ಯವನ್ನು ಅಂಗೀಕರಿಸಿಕೊಳ್ಳುವದು ಅವರಿಗೆ ಕಷ್ಟಕರವಾಗಿದ್ದಿರಬೇಕು.

ಈ ಬದಲಾವಣೆಯಲ್ಲಿ ಏನು ಅಡಕವಾಗಿತ್ತು? ಅದು ಇನ್ನು ಮೇಲೆ ಯಾಜಕತ್ವದ ಧಾರ್ಮಿಕ ನೇಮನಿಷ್ಠೆಗಳು ಮತ್ತು ಯಜ್ಞಗಳಂತಹ ಆಚಾರಕ್ಕೆ ಸಂಬಂಧಿಸಿದ ಕಟ್ಟಳೆಗಳನ್ನು ಮಾತ್ರವೇ ಅನುಸರಿಸಬಾರದು, ಆದರೆ ದಶಾಜ್ಞೆಗಳನ್ನು ಅನುಸರಿಸಬಹು ದೆಂಬದನ್ನು ಒಳಗೊಂಡಿತ್ತು ಎಂದು ಕೆಲವರು ವಾದಿಸಿದರು. ಅವರು "ನೈತಿಕ" ಧರ್ಮಶಾಸ್ತ್ರ ಮತ್ತು "ಆಚಾರಿಕ" ಧರ್ಮಶಾಸ್ತ್ರಗಳಲ್ಲಿ ಭೇದವನ್ನು ಮಾಡುತ್ತಾರೆ, ಎರಡನೆಯದ್ದು ತೆಗೆದು ಹಾಕಲ್ಪಟ್ಟಿತಾದರೂ ಮೊದಲನೆಯದ್ದು ತೆಗೆದು ಹಾಕಲ್ಪಡಲಿಲ್ಲ ಎಂದು ಅವರು ಹೇಳಿಕೊಳ್ಳುತ್ತಾರೆ. ಧರ್ಮಶಾಸ್ತ್ರದಲ್ಲಿ ಉಳಿದದ್ದನ್ನು ಮುಂಚಿನಂತೆಯೇ ಇರುವದಕ್ಕೆ ಬಿಟ್ಟು ಭಾಗಶಃ ತೆಗೆದು ಹಾಕಬಹುದೆಂಬ ಯೋಚನೆಗೆ ಬೈಬಲ್ ಅಸ್ತಿವಾರವು ಇರುವದಿಲ್ಲ. ಶಾಸ್ತ್ರಗಳಾಗಲಿ ಅಥವಾ ಆದಿ ಸಭೆಯಾಗಲಿ ಧರ್ಮಶಾಸ್ತ್ರವನ್ನು ನೈತಿಕ, ಆಚಾರಿಕ, ಮತ್ತು ಕಾನೂನಾತ್ಮಕ ಭಾಗಗಳಾಗಿ ವಿಂಗಡಿಸಿರುವದಿಲ್ಲ. F. F. Bruceನು ಹೀಗೆ ಹೇಳಿದ್ದು ಸರಿಯಾಗಿಯೇ ಇರುತ್ತದೆ, "ನೈತಿಕ ಮತ್ತು ಆಚಾರಿಕ ಕಟ್ಟಳೆಗಳಲ್ಲಿನ ಭೇದವು ಕ್ರೈಸ್ತ ದೈವಶಾಸ್ತ್ರಜ್ಞರಿಂದ ಮಾಡಲ್ಪಟ್ಟದ್ದಾಗಿದೆ, ಹೊರತು ಇಡೀ ಧರ್ಮಶಾಸ್ತ್ರವನ್ನು ದೇವರ ಚಿತ್ತವೆಂದು ಅಂಗೀಕರಿಸುವವರಿಂದಲ್ಲ, ಅಥವಾ ಹೊಸ ಒಡಂಬಡಿಕೆಯ ಬರಹಗಾರರಿಂದ ಸಹ ಹಾಗೆ ಮಾಡಲ್ಪಟ್ಟಿಲ್ಲ."[23] ಕೆಲವು ಸಾರಿ ಶಾಸ್ತ್ರಗಳು ಕೀರ್ತನೆಯನ್ನು ಸಹ "ಧರ್ಮಶಾಸ್ತ್ರ" ದ ಭಾಗವೆಂದು ಕರೆಯುತ್ತದೆ (ಯೋಹಾನ 10:34; ನೋಡಿರಿ ಕೀರ್ತನೆ 82:6). ಧರ್ಮಶಾಸ್ತ್ರದ ಕೆಲ ಭಾಗವನ್ನು ಆಚಾರಿಕವಾದದ್ದೆಂದು ವಿಭಾಗಿಸುವದು ನ್ಯಾಯಯುತವಾಗಿರುತ್ತದೆ, ಆದರೆ ಆ ಭಾಗ ಮಾತ್ರವೇ ತೆಗೆದು ಹಾಕಲ್ಪಟ್ಟಿತು ಮತ್ತು ಮಿಕ್ಕದ್ದನ್ನೆಲ್ಲಾ ಹಾಗೆಯೇ ಉಳಿಸಿಕೊಳ್ಳಲಾಯಿತೆಂದು ಒಬ್ಬನು ಹೇಳಿಕೊಳ್ಳಬಾರದು. James Burton Coffmanನು ಗಮನಕ್ಕೆ ತರುವದೇನೆಂದರೆ, "ಈ ಇಡೀ ಪತ್ರಿಕೆಯಲ್ಲಿ ಒಮ್ಮೆಯೂ ಸಾಮಾನ್ಯವಾಗಿರುವ ಮೋಶೆಯ ಧರ್ಮಶಾಸ್ತ್ರದಿಂದ ವ್ಯತ್ಯಾಸವಾಗಿಸುವ 'ಧರ್ಮಶಾಸ್ತ್ರ' ಎಂದು ಸ್ವಲ್ಪವೂ ಅರ್ಥ ಬರುವಂತೆ ಸೂಚಿಸಲಾಗಿರುವದಿಲ್ಲ."[24] **ಧರ್ಮಶಾಸ್ತ್ರವು ಬೇರೆಯಾಗುವದು** ಎಂಬದು ನಿಸ್ಸಂಶಯವಾಗಿ ಇಡೀ ಮೋಶೆಯ ಧರ್ಮಶಾಸ್ತ್ರಕ್ಕೆ ಅನ್ವಯವಾಗುತ್ತದೆ.

7:12ರಿಂದ ಮೊದಲುಗೊಂಡು, ಇಬ್ರಿಯರಿಗೆ ಪತ್ರಿಕೆಯು ಮೂರು ಸಾರಿ ಧರ್ಮಶಾಸ್ತ್ರವು ರದ್ದಾಗಿ ಹೋಯಿತು, ಅಥವಾ ತೆಗೆದು ಬಿಡಲ್ಪಟ್ಟಿತು ಎಂದು ಹೇಳುತ್ತದೆ (ನೋಡಿರಿ 7:18; 10:9). ಪೌಲನು ರೋಮಾ 7ನೇ ಅಧ್ಯಾಯದಲ್ಲಿ ಯೆಹೂದ್ಯರು ಆಶಿಸಬಾರದು ಎಂಬ ಕಟ್ಟಳೆಯು ಸೇರಿದಂತೆ (ವ. 7), ಧರ್ಮಶಾಸ್ತ್ರದಿಂದ "ವಿಮುಕ್ತಗೊಳಿಸಲ್ಪಟ್ಟರು" (ವ. 6) ಮತ್ತು ಅದರ "ಪಾಲಿಗೆ ಸತ್ತಿರಿ" (ವ. 4) ಎಂದು ಪೌಲನು ವಾದಿಸುತ್ತಾನೆ. ಆ ನಿರ್ದಿಷ್ಟವಾದ ಕಟ್ಟಳೆಯು ಆಚಾರಿಕ ಎಂಬುದಕ್ಕಿಂತಲೂ ಹೆಚ್ಚು ನೈತಿಕವಾದದ್ದು; ಅದು ವಿವಾದವಿಲ್ಲದೆ ದಶಾಜ್ಞೆಗಳ ಒಂದು ಭಾಗವಾಗಿರುತ್ತದೆ. ಕ್ರಿಸ್ತನು ಶಿಲುಬೆಗೆ ಜಡಿದ ಧರ್ಮಶಾಸ್ತ್ರದ ಕಾರ್ಯಗಳಲ್ಲಿ ಪೌಲನು ಸಬ್ಬತ್ ದಿನವನ್ನು ಸೇರ್ಪಡೆಗೊಳಿಸಿದನು (ಕೊಲೊಸ್ಸೆ 2:14-17). "ಮರಣವಿಧಿಸುವ ಸೇವೆ"ಯು ಕಲ್ಲಿನ ಮೇಲೆ ಬರೆದ ಆಜ್ಞೆಗಳನ್ನು ಒಳಗೊಂಡಿತ್ತು (2 ಕೊರಿಂಥ 3:1-11). ಯೇಸುವು ಧರ್ಮಶಾಸ್ತ್ರವು ಕೇಳುವ ಎಲ್ಲಾ ಕಾರ್ಯಗಳನ್ನು ಕೈಕೊಂಡು ನಡೆಯುವ ಮೂಲಕ ಅದನ್ನೆಲ್ಲಾ ನೆರವೇರಿಸಿದಾಗ ಧರ್ಮಶಾಸ್ತ್ರವು ರದ್ದುಗೊಳಿಸಲ್ಪಟ್ಟಿತು (ನೋಡಿರಿ ಮತ್ತಾಯ 5:17, 18).

**ವಚನ 13.** ಫರಿಸಾಯರು ಮತ್ತು ಯೆಹೂದಿಕರಣಗೊಳಿಸುವವರು ಯೇಸುವಿನ ವಿಷಯದಲ್ಲಿ ಆತನು ತಪ್ಪಾದ **ಕುಲದಲ್ಲಿ** ಹುಟ್ಟಿದ್ದರಿಂದ ಆತನು ಪಾಪ ಪರಿಹಾರಕ್ಕಾಗಿ ಯಜ್ಞವಾಗುವದಕ್ಕೆ

ಅಥವಾ ಒಂದು ಯಜ್ಞವನ್ನು ಮಾಡುವ ಯಾಜಕನಾಗುವದಕ್ಕೆ ಸಾಧ್ಯವಿಲ್ಲ ಎಂದು ವಾದಿಸಿರಬಹುದಾಗಿದೆ. ಲೇವಿಯ ಕುಲದಿಂದ ಬಂದ ಪುರುಷರು ಮಾತ್ರವೇ ಮೋಶೆಯ ವಿಧಿಯ ಪ್ರಕಾರ ಮಹಾಯಜಕರಾಗಿ ಸೇವೆಯನ್ನು ಮಾಡಬಹುದಾಗಿತ್ತು, ಮತ್ತು ಆರೋನನ ಕುಟುಂಬವಲ್ಲದೆ ಬೇರೆ ಇನ್ನಾರು ಮಹಾಯಾಜಕರಾಗಿ ಸೇವೆ ಮಾಡುವದಕ್ಕೆ ಸಾಧ್ಯವಿರಲಿಲ್ಲ. ಯೇಸುವು ಯೆಹೂದ ಕುಲಕ್ಕೆ ಸೇರಿದವನೆಂಬುದು ಸಾಮಾನ್ಯವಾದ ತಿಳಿವಳಿಕೆಯಾಗಿತ್ತು, ಅದೊಂದು ರಾಜವಂಶದ ಕುಲವಾಗಿತ್ತು ಹೊರತು ಯಾಜಕತ್ವದ ಕುಲವಾಗಿರಲಿಲ್ಲ. ದೇವಾಲಯದ ನಾಶನಕ್ಕೆ ಮುಂಚೆ (ಕ್ರಿ.ಶ. 70), ಅಂಥ ದಾಖಲೆಗಳು ಎಲ್ಲರಿಗೂ ಲಭ್ಯವಿರುತ್ತಿದ್ದವು ಮತ್ತು ಯೆಹೂದಿ ವಿರೋಧಿಗಳಿಂದ ಅಲ್ಲಗಳೆಯಲಾಗದವುಗಳಾಗಿದ್ದವು. ಹಾಗಾದರೆ, ಪ್ರಥಮ ಶತಮಾನದಲ್ಲಿ ಯೇಸುವು ದಾವೀದನ ಮನೆತನದವನೆಂಬುದನ್ನು ಅಲ್ಲಗಳೆಯುವ ಯಾವ ಪ್ರಯತ್ನವೂ ಮಾಡಲ್ಪಡಲಿಲ್ಲ ಎಂದು ನಾವು ಭಾವಿಸಿಕೊಳ್ಳಬಹುದು. ಮತ್ತಾಯ 2:5, 6 ವಚನಗಳು ಯೇಸು ದಾವೀದನ ನಗರವಾದ ಬೆತ್ಲೇಹೆಮನಲ್ಲಿ ಜನಿಸಿದನೆಂದು ತೋರಿಸುವ ಮೂಲಕ ಈ ಮನೆತನದ ಬಗ್ಗೆ ಪರೋಕ್ಷವಾಗಿ ಸೂಚಿಸಲಾಗಿರುತ್ತದೆ. ಲೂಕ 3:23-31 ಮತ್ತು ಮತ್ತಾಯ 1:6-16ರಲ್ಲಿರುವ ವಂಶಾವಳಿಗಳು ಆತನು ದಾವೀದನ ಕುಮಾರನು ಎಂಬುದನ್ನು ತೋರಿಸುತ್ತವೆ, ಮತ್ತು ಆತನು "ದಾವೀದನ ಅಂಕುರದವನು" ಎಂದು ಪ್ರಕಟನೆ 5:5 ಹೇಳುತ್ತದೆ. ಮತ್ತಾಯನು ಒಂದು ವೇಳೆ ಆತನು ಯೋಸೇಫನಿಂದ ದತ್ತುಸ್ವೀಕರಿಸಲ್ಪಟ್ಟವನೆಂದು ಪರೋಕ್ಷವಾಗಿ ಸೂಚಿಸಬಹುದು, ಆದರೆ ಲೂಕನು ಮರಿಯಳ ಮೂಲಕವಾದ ವಂಶಾವಳಿಯನ್ನು ಕೊಡುತ್ತಾನೆ. ಯೋಸೇಫನು ಕೆಲವು ಸಾರಿ ಯೇಸುವಿನ "ಸಾಕು ತಂದೆ" ಎಂದು ಕರೆಯಲ್ಪಡುತ್ತಾನೆ, ಆದರೆ ಮರಿಯಳ ಕಥೆಯನ್ನು ತಿಳಿದಿದ್ದವರೆಲ್ಲರೂ ಯೇಸುವನ್ನು ಯೋಸೇಫನ ದತ್ತು ಪುತ್ರನೆಂದು ಎಣಿಸಲ್ಪಟ್ಟಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ನಿಸ್ಸಂಶಯವಾಗಿ, ಯೋಸೇಫನು ಯೇಸುವಿನ "ದತ್ತು" ತಂದೆಯಾಗಿರುವದರಲ್ಲಿ ವಿಶೇಷವಾಗಿ ಹೆಮ್ಮೆಯನ್ನು ಅನುಭವಿಸಿದನು. ಹೇಗೂ, ರಾಜವಂಶದ ಮನೆತನವು "ದಾವೀದನ ಕುಮಾರ" ಎಂಬ ಬಿರುದಿನಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ.[25]

**ವಚನ 14. ಪ್ರಸಿದ್ಧವಾಗಿದೆಯಷ್ಟೆ** ಎಂಬುದರ ಅರ್ಥವು "ಪರಿಪೂರ್ಣವಾಗಿ ಸುವ್ಯಕ್ತವಾಗಿದೆ," ಅಥವಾ "ಎಲ್ಲರಿಗೂ ಅದು ಗೊತ್ತಿದೆ" (JB) ಎಂದಾಗಿದೆ. Phillips ಭಾವಾನುವಾದವು ಹೀಗಿರುತ್ತದೆ, "ಅದು ಇತಿಹಾಸದ ವಿಷಯ." ASVಯ ಮಾತನ್ನು ಬಳಸಿ ಹೇಳುವದಾದರೆ, ಈ "ಸ್ಪಷ್ಟವಾಗಿರುವ" ವಾಸ್ತವಾಂಶವು ಏನೆಂದರೆ ಕ್ರಿಸ್ತನು "ಯೆಹೂದದಿಂದ ಉದ್ಭವಿಸಿದನು" ಎಂಬದೆ. ಇಲ್ಲಿ "ಇಷಯನ ಬುಡದಿಂದ ಒಂದು ಚಿಗುರು ಒಡೆಯುವದು" ಎಂಬ ಪ್ರವಾದನೆಯನ್ನು (ಯೆಶಾಯ 11:1) ಮತ್ತು ದೇವರು "ಚಿಗುರಿಸಲಿದ್ದ" ದಾವೀದನ "ಸದ್ಧರ್ಮಿಯಾದ ಮೊಳಿಕೆ"ಯ ಪ್ರವಾದನೆಯನ್ನು ಸೂಚಿಸುತ್ತದೆ (ಯೆರೆಮೀಯ 23:5, 6). "ತತ್ಪರಿಣಾಮವಾಗಿ, ನಮ್ಮ ಕರ್ತನು ಯೆಹೂದದಿಂದ *ಜನಿಸಿದವನು* ಎಂಬ ಒತ್ತಿ ಹೇಳುವಿಕೆಯು ಒಂದು ವಿಶಿಷ್ಟವಾಗಿ ಮೆಸ್ಸೀಯಾತ್ಮಕ ಅಧಿಕಾರ್ಥವನ್ನು ಹೊಂದಿದೆ."[26] ಇಲ್ಲಿ ಇಡೀ ವಾದವಿವಾದವು ಕೀರ್ತನೆ 110:4ನೇ ವಚನದಿಂದ ಸೂಚಿಸಲ್ಪಟ್ಟಿರುವ ಒಂದು ಬೇರೆಯಾದ ಯಾಜಕತ್ವ ಕ್ರಮದ ಮೇಲೆ ಆಧಾರವಾಗಿರುವದರಿಂದ, ಅದನ್ನು ನೆರವೇರಿಸಿದಾತನು ಕೀರ್ತನೆ 110:1ರಲ್ಲಿ ದೇವರ ಬಲಗಡೆಯಲ್ಲಿ ಕೂತುಕೊಳ್ಳುವಂತೆ ಆಮಂತ್ರಿಸಲ್ಪಟ್ಟವನು ಸಹ ಆಗಿರುತ್ತಾನೆ. "ನಮ್ಮ ಲೇಖಕನ ತರ್ಕದ ಉಜ್ವಲತೆಯು ಯೇಸುವಿನ ಯಾಜಕತ್ವದ ಅರ್ಹತೆಗಳು ಸ್ಥಾಪಿಸಲ್ಪಟ್ಟಿರುತ್ತವೆ" ಎಂಬುದನ್ನು ತೋರಿಸುತ್ತದೆ.[27]

ಯೇಸುವು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಯಾಜಕನಾಗಿರಲಾರನು ಎಂದು ಹೇಳುವದಕ್ಕೆ ಕೊಡಲ್ಪಟ್ಟಿರುವ ಕಾರಣವು **ಈ ಕುಲದ** [ಯೆಹೂದ] **ವಿಷಯದಲ್ಲಿ ಮೋಶೆಯು**

**ಯಾಜಕರ ಸಂಬಂಧವಾಗಿ ಒಂದು ಮಾತನ್ನಾದರೂ ಹೇಳಲಿಲ್ಲ** ಎಂಬದೆ. ಹೀಗೆ ಲೇಖಕನು ದೇವರ ಮೌನವನ್ನು ಅಪಾರ್ಥವಾಗಿ ಕಲ್ಪಿಸಿಕೊಳ್ಳಬಾರದೆಂದು ತೋರ್ಪಡಿಸುತ್ತಾ ಹೀಗೆ ಹೇಳುತ್ತಾನೆ, "ದೇವರು 'ಯೆಹೂದ ಕುಲದಿಂದ ಬಂದ ಯಾಜಕರ ಬಳಿಗೆ ಹೋಗಬೇಡಿರಿ' ಎಂದು ಹೇಳಲಿಲ್ಲ, ಆದರೆ ಖಂಡಿತವಾಗಿಯೂ ಆತನು ತನ್ನ ಮಗನ ವಿಷಯದಲ್ಲಿ ಕುಲದ ಸಂಬಂಧವನ್ನು ನಿರ್ಲಕ್ಷಿಸಿ ವಿಶೇಷವಾಗಿ ನಡೆದುಕೊಳ್ಳುವನು, ಆತನು ಅಧಿಕೃತ ಯಾಜಕ ಕುಲದಿಂದ ಬಂದವನಲ್ಲದಿದ್ದಾಗ್ಯೂ ದೇವರು ಆತನನ್ನು ಒಬ್ಬ ಯಾಜಕನನ್ನಾಗಿ ಮಾಡುವನು." ಯೇಸು ಒಬ್ಬ ಲೇವಿಯನಾಗಿರಲಿಲ್ಲ; ಆದರೆ, ಧರ್ಮಶಾಸ್ತ್ರವನ್ನು ನೆರವೇರಿಸಿದವನಾಗಿ, ಆತನು ಹಳೆಯ ಧಾರ್ಮಿಕ ಆಚಾರಗಳ ನಿರ್ಬಂಧಕ್ಕೊಳಪಟ್ಟವನಲ್ಲ.

**ವಚನ 15, 16. ಮತ್ತೂ ಸ್ಪಷ್ಟವಾಯಿತು** ಎಂಬುದು ಯಾವದು? ಇದರ ಕುರಿತಾದ ಐದು ಬೇರೆ ಅಭಿಪ್ರಾಯಗಳನ್ನು ಮುಂದಿಟ್ಟ ಬಳಿಕ, Robert Milliganನು ತನ್ನ ಸ್ವಂತ ಯೋಚನೆಯನ್ನು ವ್ಯಕ್ತಪಡಿಸುತ್ತಾನೆ. ಆತನು ಇಲ್ಲಿ 7:11-22ರ ಇಡೀ ಆಧಾರವಾಕ್ಯವನ್ನು ಸೂಚಿಸಿ ಹೇಳಲಾಗಿರುತ್ತದೆ, ಅದು ಈ ಕೆಳಗಿನಂತೆ ಸಾರಾಂಶಗೊಳಿಸಲ್ಪಡಬಹುದು ಎಂದು ಹೇಳಿದನು: "ಲೇವಿಕ ಯಾಜಕತ್ವದ ಕ್ರಮ, ಮತ್ತು ಅದರ ಉಲ್ಲೇಖವಾಗಿ ಕೊಟ್ಟಿದ್ದ ಧರ್ಮಶಾಸ್ತ್ರ ಎರಡನ್ನೂ ರದ್ದುಗೊಳಿಸುವ ರೀತಿಯಲ್ಲಿ ಪರಿಣಾಮ ಬೀರುವ ಹಾಗೆ ಯಾಜಕತ್ವದಲ್ಲಿ ಬದಲಾವಣೆ ಮಾಡಲ್ಪಟ್ಟಿತ್ತು."[28] ಪ್ರವಾದನೆಯು ಬೇರೊಂದು ಯಾಜಕತ್ವದ ಬಗ್ಗೆ ಮುಂತಿಳಿಸಿತ್ತು (ಕೀರ್ತನೆ 110:4) ಅದು ಯೆಹೂದಿ ತಿಳುವಳಿಕೆ ಯನ್ನೊಳಗೊಂಡ ವ್ಯಕ್ತಿಗಳಿಗೆ ಧರ್ಮಶಾಸ್ತ್ರದಲ್ಲಿ ಒಂದು ಬದಲಾವಣೆಯಾಗ ತಕ್ಕದ್ದು ಎಂಬುದನ್ನು ಸ್ಪಷ್ಟಗೊಳಿಸಿತ್ತು. ಹೇಗೂ, ಹೊಸ **ಯಾಜಕನು ಮೆಲ್ಕಿಜೆದೇಕನ ಸಾದೃಶ್ಯದಲ್ಲಿ** ಇದ್ದನು. ಮೆಲ್ಕಿಜೆದೇಕನು ಅದರಲ್ಲಿ ದೇವರ ಕುಮಾರನಂತಿದ್ದನು, ದಾಖಲೆಯ ಪ್ರಕಾರ, ಆತನು ಕ್ರಿಸ್ತನಂತೆಯೇ ಸದಾಕಾಲವೂ ಇರುವ ಯಾಜಕನಾಗಿದ್ದನು (7:2, 3). ಎಲೀಯನು ಯೋಹಾನನಿಗೆ ಪೂರ್ವಚಿತ್ರಣವಾದ ಹಾಗೆಯೇ ಮೆಲ್ಕಿಜೆದೇಕನು ಯೇಸುವಿನ ಪೂರ್ವಚಿತ್ರಣವಾಗಿದ್ದನು. ಪ್ರತಿಯೊಂದು ಸಾರಭೂತ ರೀತಿಯಲ್ಲಿ, ಯೇಸು ಮೆಲ್ಕಿಜೆದೇಕನ ಮಾದರಿಯಲ್ಲಿ ಸಿಕ್ಕುವ ಯಾಜಕತ್ವವನ್ನು ನೆರವೇರಿಸಿದನು: "ಮೆಲ್ಕಿಜೆದೇಕನಿಂದ ಪೂರ್ವಛಾಯೆಯಾಗಿ ಆವರಿಸಲ್ಪಟ್ಟ *ವಾಸ್ತವಿಕತೆಯು* ಕ್ರಿಸ್ತನೇ . . ."[29]

ಲೇವಿಯರ ಯಾಜಕತ್ವವು ಯಾವದೇ ಶ್ರೇಷ್ಠ ವ್ಯಕ್ತಿಯ ಮೇಲೆ ಆಧಾರವಾಗಿರಲಿಲ್ಲ, ಆದರೆ **ಶರೀರಧರ್ಮ ವಿಷಯವಾದ ನಿಮಯದ** (ಅಕ್ಷರಶಃ, σάρκινος, *sarkinos*, "ದೈಹಿಕವಾಗಿ," ಅಥವಾ "ಶರೀರಕ್ಕೆ ಸಂಬಂಧಿಸಿದ" ಎಂದರ್ಥವಾಗಿರುತ್ತದೆ) ಪ್ರಕಾರವಾಗಿರುತ್ತದೆ. ಈ ಅಗತ್ಯತೆಯು ಮನೆತನಕ್ಕೆ ಸಂಬಂಧಿಸಿದ್ದಾಗಿತ್ತು; ಅದು "ಭೂಲೋಕ-ನಿರ್ಬಂಧಿತ ನಿಯಮಗಳ ವ್ಯವಸ್ಥೆಯಾಗಿತ್ತು" (NEB). ಹಳೆಯ ವ್ಯವಸ್ಥೆಯು ಧರ್ಮದ ಬಾಹ್ಯ ವಿಷಯಗಳಿಗೆ ಸಂಬಂಧಪಟ್ಟದ್ದಾಗಿತ್ತು, ಉದಾಹರಣೆಗೆ ಯಾಜಕರ ಶಾರೀರಿಕ ಸಂತತಿ, ಒಂದು ಶಾರೀರಿಕ ದೇವದರ್ಶನ ಗುಡಾರ, ಮತ್ತು ಪ್ರಾಣಿಗಳ ಯಜ್ಞಗಳು ಆ ವಿಧವಾದ ವ್ಯವಸ್ಥೆಯು ಹೊಸ ಒಡಂಬಡಿಕೆಯ ಕ್ರೈಸ್ತತ್ವಕ್ಕೆ ಅಪರಿಚಿತವಾಗಿತ್ತು. ಅದು ಆಂತರ್ಯದ, ಆತ್ಮೀಕ ಮನುಷ್ಯನ ಮೇಲೆ ಹೆಚ್ಚಿನ ಗಮನವನ್ನು ಹರಿಸುವಂಥದ್ದಾಗಿರುತ್ತದೆ.

ಯೇಸುವಿನ ಶಕ್ತಿ ಮತ್ತು ಅಧಿಕಾರದ ಹಕ್ಕು "ಅಂತ್ಯವಿಲ್ಲದ ಜೀವದ" ಮೇಲೆ ಆಧಾರವಾಗಿರುತ್ತದೆ (KJV), ಅಥವಾ **ನಿರ್ಲಯವಾದ ಜೀವದ ಶಕ್ತಿ**ಯ ಮೇಲೆ ಆಧಾರವಾಗಿರುತ್ತದೆ (NASB; RSV; ISV). ಆತನು ಒಂದು ಕಾಲಾವಧಿಯ ವರೆಗೆ ನಮ್ಮ ಹಾಗೆಯೇ ಮನುಷ್ಯರು ಕೊಲ್ಲಬಹುದಾದ ದೇಹವೊಂದರಲ್ಲಿ ಜೀವಿಸಿದ್ದನಾದ್ದರಿಂದ ಆತನು ನಮ್ಮ ವಿಷಯದಲ್ಲಿ ಅನುತಾಪಪಡಬಲ್ಲನು (2:14, 15; 4:15; 5:7, 8). ಹಾಗಿದ್ದರೂ, ಅವರು ಆತನ

ಆತ್ಮವನ್ನು ನಾಶಗೊಳಿಸುವದಕ್ಕೆ ಶಕ್ತರಾಗಲಿಲ್ಲ; ಆತನ ದೇಹವು ಸಮಾಧಿಯಲ್ಲಿದ್ದರೆ ಆತನು ಪರಲೋಕದ ಮಂಡಲದಲ್ಲಿ ಜೀವಿಸಿದನು; ಮರಣವು ಆತನನ್ನು ಹಿಡಿದಿಟ್ಟುಕೊಳ್ಳಲಾಗಲಿಲ್ಲ (ಅಪೊಸ್ತಲರ ಕೃತ್ಯಗಳು 2:31). ಆತನು ಸದಾಕಾಲವೂ ದೇವರ ಮುಂದೆ ನಮ್ಮ ಪ್ರತಿನಿಧಿಯಾಗಿ ಜೀವಿಸುತ್ತಾನೆ, ಆತನ ಬಲಗಡೆಯಲ್ಲಿ ಕೂತುಕೊಂಡಿರುತ್ತಾನೆ (ಕೀರ್ತನೆ 110:1). ಆತನು ಕೇವಲ ಕಾನೂನುಬದ್ಧ ಹಕ್ಕಿನಿಂದ ಮಾತ್ರವೇ ಒಬ್ಬ ಯಾಜಕನಾಗಿರುವವನಲ್ಲ, ಆದರೆ ಶಕ್ತಿ ಮತ್ತು ಅಧಿಕಾರದಿಂದ ಯಾಜಕನಾಗಿರುತ್ತಾನೆ. ಸ್ವತಃ ತ್ರೈಯೇಕತ್ವದ ಸರ್ವಸಂಪೂರ್ಣತೆಯು ಆತನಲ್ಲಿ ವಾಸಿಸುತ್ತದೆ (ಕೊಲೊಸ್ಸೆ 2:9). ಆತನು ದೇವರ ಬಳಿಗೆ ಬರುವವರನ್ನು "ಸದಾಕಾಲವೂ ರಕ್ಷಿಸುವದಕ್ಕೆ" ಅಥವಾ "ಕಟ್ಟಕಡೆಯ ವರೆಗೂ ರಕ್ಷಿಸುವದಕ್ಕೆ" (KJV; ASV; NKJV) ಶಕ್ತಿ ಹೊಂದಿದ್ದಾನೆ (7:25). ಲೇವಿಕ ಯಾಜಕತ್ವವನ್ನು ಸ್ಥಾಪಿಸುವ ಕಟ್ಟಳೆಯು ಬಾಹ್ಯ ರೀತಿಯದ್ದು ಮತ್ತು ನಶಿಸಿ ಹೋಗುವಂತದ್ದು. ದೇವರು ಸಿದ್ಧನಿರುವ ಯಾವದೇ ಸಮಯದಲ್ಲಿ ಅದು ಮಾರ್ಪಡಿಸಲ್ಪಡುವದಕ್ಕೆ ಸಾಧ್ಯವಿತ್ತು. ಅದಕ್ಕೆ ತದ್ವಿರುದ್ಧವಾಗಿ, "ಕ್ರಿಸ್ತನ ಜೀವವು ಅಂತರ್ಗತ ಮತ್ತು ನಿರ್ಲಯವಾದದ್ದು."[30]

**ವಚನ 17.** ದೇವದರ್ಶನ ಗುಡಾರದಲ್ಲಿನ ಕೆಲಸವು ಎಷ್ಟೊಂದು ಪ್ರಯಾಸಕರವಾಗಿರುತ್ತಿತ್ತೆಂದರೆ ಒಬ್ಬ ಮನುಷ್ಯನು ಐವತ್ತು ವಯಸ್ಸನ್ನು ದಾಟಿದ ಮೇಲೆ ಅಲ್ಲಿ ಸೇವೆಯನ್ನು ಮಾಡುವದು ಆತನಿಗೆ ಅಸಾಧ್ಯವಾಗುತ್ತಿತ್ತು (ಅರಣ್ಯಕಾಂಡ 4:2, 3), ಆದರೆ ಯೇಸುವಿನ ವಿಷಯದಲ್ಲಿ ಹಾಗೆ ಇರಲಿಲ್ಲ ಎಂಬದಾಗಿ James Macknightನು ಗಮನಕ್ಕೆ ತರುತ್ತಾನೆ.[31] ಕ್ರಿಸ್ತನ ಯಾಜಕತ್ವದ ಶ್ರೇಷ್ಠತೆಯು ಸಾಭಿತುಪಡಿಸಲ್ಪಟ್ಟಿದೆ. ಆತನ ವಿಷಯದಲ್ಲಿ **ಹೇಳಿಯದೆಯಲ್ಲಾ** ಎಂಬುದರ ಅರ್ಥವು ಪುರಾವೆಯು ಶಾಸ್ತ್ರಗಳಿಂದಲೇ ಇರುತ್ತದೆಂಬದೆ ("ಸಾಕ್ಷಿ ಹೊಂದಿರುವವನು"; 7:8; "ಸಾಕ್ಷಿಕೊಡು ವವನಾಗಿ"; 10:15). ಆತನ ಯಾಜಕತ್ವವು ಜನರನ್ನು ದೇವರ ಸನ್ನಿಧಿಯೊಳಗೆ ಕರೆತರುವ ಉದ್ದೇಶವನ್ನು ನೆರವೇರಿಸಿತು. ಅದು ಪರಿಪೂರ್ಣ, ನಿತ್ಯವಾದದ್ದು, ಮತ್ತು ಮಾರ್ಪಡಲಾರದ್ದಾಗಿದೆ.

**ವಚನ 18.** ಕೆಲವರು **ಮೊದಲಿದ್ದ ನಿಯಮವು** ಲೇವಿಯ ಯಾಜಕತ್ವದ ವಿಷಯವಾದ ವಿಧಿಗಳು ಎಂದಷ್ಟೇ ಅರ್ಥವನ್ನು ಕೊಡುತ್ತದೆಂದು ಮಿತಿಗೊಳಿಸುತ್ತಾರೆ. ಹೇಗೂ, ಯಾಜಕತ್ವವನ್ನು **ರದ್ದಾಗಿ ಹೋಯಿತು** ಎಂಬುದು ಮೋಶೆಯ ಇಡೀ ಧರ್ಮಶಾಸ್ತ್ರಕ್ಕೆ ಅನ್ವಯವಾಗುತ್ತದೆ. ಅದರ ಎಲ್ಲಾ ಆಡಂಭರ ಮತ್ತು ಮನಸೆಳೆಯುವ ಧಾರ್ಮಿಕ ಆಚಾರಗಳ ಹೊರತಾಗಿಯೂ, ಹಳೆಯ ಒಡಂಬಡಿಕೆಯ ವ್ಯವಸ್ಥೆಯು ಮನಸ್ಸಾಕ್ಷಿಗೆ ನಿಜವಾದ ಸಮಾಧಾನವನ್ನು ಕೊಡುವದಕ್ಕೆ ಶಕ್ತವಾಗಲಿಲ್ಲ.[32] ಅತ್ಯಂಥ ದೊಡ್ಡ ವಿಫಲತೆಯು ಏನೆಂದರೆ ಆರಾಧಕನನ್ನು ದೇವರ ಬಳಿಗೆ ಕರೆದು ತರುವದಕ್ಕೆ ವಿಫಲವಾದದ್ದೇ.[33] ಧರ್ಮಶಾಸ್ತ್ರದ ವಿಶಿಷ್ಟವಾದ ಉದ್ದೇಶವು ಪಾಪದ ವಿರುದ್ಧ ಉಪದೇಶಿಸುವದು ಮತ್ತು ಜನರನ್ನು ಕ್ರಿಸ್ತನ ಕಡೆಗೆ ನಡಿಸುವದು ಆಗಿತ್ತು (ಗಲಾತ್ಯ 3:24). ಧರ್ಮಶಾಸ್ತ್ರವು "ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ" ಸೇರ್ಪಡೆಗೊಳಿ ಸಲ್ಪಟ್ಟಿತು (ಗಲಾತ್ಯ 3:19) ಮತ್ತು ತನ್ನ ಪರಿಶುದ್ಧತೆಗೆ ವಿರುದ್ಧ ಹೋಲಿಕೆಯನ್ನು ಮಾಡುವ ಮೂಲಕ ಪಾಪದ ಸ್ವಭಾವವನ್ನು ತೋರಿಸುವ ಉದ್ದೇಶವನ್ನು ಸಾಧಿಸಿತು (ರೋಮಾ 7:12). ಧರ್ಮಶಾಸ್ತ್ರವು ಸ್ವತಃ ಪರಿಪೂರ್ಣವಾಗಿತ್ತು (ಕೀರ್ತನೆ 19:7) ಮತ್ತು ಯಶಸ್ವಿಯಾಗಿ ಯೆಹೂದ್ಯರನ್ನು ಪಾಪದ ತಿಳುವಳಿಕೆಗೆ ಕರೆದುಕೊಂಡು ಬಂದಿತು (ರೋಮಾ 7:7). ಹೇಗೂ, ಅದು "ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲ" ಆಗಿತ್ತು (ರೋಮಾ 8:3); ಅದು ಪಾಪವನ್ನು ಜಯಿಸುವಂತೆ ಮನುಷ್ಯನನ್ನು ಶಕ್ತನನ್ನಾಗಿಸಲಿಲ್ಲ ಅಥವಾ ಆತನನ್ನು ಪಾಪದಿಂದ ಬಿಡಿಸಲಿಲ್ಲ.

**ವಚನ 19.** ಪಾಪದ ಮೇಲೆ ಜಯ ಹಾಗೂ ಅದರಿಂದ ಬಿಡುಗಡೆಯು ಕ್ರಿಸ್ತನಲ್ಲಿ ಮಾತ್ರವೇ ಬರುತ್ತವೆ, ಹೊರತು ಧರ್ಮಶಾಸ್ತ್ರದ ಮೂಲಕವಲ್ಲ. ಬೇರೆ ಮಾತುಗಳಲ್ಲಿ ಹೇಳುವದಾದರೆ, **ಧರ್ಮಶಾಸ್ತ್ರವು ಯಾವದನ್ನೂ ಸಿದ್ಧಿಗೆ ತಾರದೆ** ಇತ್ತು. ಅದು ಸ್ವತಃ ತನ್ನಲ್ಲಿ ಪರಿಪೂರ್ಣವಾಗಿತ್ತು, ಆದರೆ ಅದು ಮನುಷ್ಯನಲ್ಲಿನ ಕೊರತೆಗಳನ್ನು ಸರಿತೂಗಿಸಲಿಕ್ಕೆ ಶಕ್ತವಾಗಲಿಲ್ಲ ಯಾಕೆಂದರೆ ಅದು ಪಾಪಕ್ಕಾಗಿ ಪೂರ್ಣ ಪ್ರಾಯಶ್ಚಿತ್ತವನ್ನು ಒದಗಿಸಲಿಲ್ಲ. ಹಳೆಯ ಒಡಂಬಡಿಕೆಯಲ್ಲಿನ ನಿರೀಕ್ಷೆಯು ಹೊಸ ಒಡಂಬಡಿಕೆಯಲ್ಲಿರುವ ನಿರೀಕ್ಷೆಯೊಂದಿಗೆ ಹೋಲಿಸುವದಕ್ಕೂ ಆಗುವದಿಲ್ಲ. ಹಳೆಯ ಒಡಂಬಡಿಕೆಯಡಿಯಲ್ಲಿ, ಜನರು ವಿಮೋಚಕನ ಬರೋಣವನ್ನು ಕೇವಲ ಎದುರು ನೋಡುವದಕ್ಕೆ ಮಾತ್ರವೇ ಶಕ್ತರಾಗಿದ್ದರು. ಹೊಸ ಒಡಂಬಡಿಕೆಯ ಅಡಿಯಲ್ಲಿ, ನಾವು ನಮಗೋಸ್ಕರ ಏನು ಮಾಡಲ್ಪಟ್ಟಿದೆ ಎಂಬುದನ್ನು ತಿರುಗಿ ನೋಡಿ ಹರ್ಷಿಸಬಲ್ಲೆವು. ಧರ್ಮಶಾಸ್ತ್ರವು ಜೀವವನ್ನು ಕೊಡಲು ಶಕ್ತವಾಗಿದ್ದರೆ ಅಥವಾ ಪಾಪಿಯನ್ನು ಸಿದ್ಧಿಗೆ ತಂದಿದ್ದರೆ ಕ್ರಿಸ್ತನು ನಿಷ್ಪ್ರಯೋಜನಕರವಾಗಿ ಸತ್ತನು ಎಂದಾಗುತ್ತದೆ (ಗಲಾತ್ಯ 2:21; 3:21). ಒಂದು ಧರ್ಮಶಾಸ್ತ್ರವು ಆಜ್ಞೆಗಳನ್ನು ಒಳಗೊಂಡಿರುತ್ತದೆ, ಅದು ಒಬ್ಬನನ್ನು ಪಾಪವನ್ನು ಮೀರಿ ಜೀವಿಸುವಂತೆ ಸಾಕಾಗುವಷ್ಟರ ಮಟ್ಟಿಗೆ ಉತ್ತೇಜಿಸುವದಕ್ಕಾಗಲಿ ಅಥವಾ ಸ್ಫೂರ್ತಿಗೊಳಿಸುವದಕ್ಕಾಗಲಿ ಸಾಧ್ಯವಿಲ್ಲ.

ಧರ್ಮಶಾಸ್ತ್ರದಡಿಯಲ್ಲಿ, ಒಬ್ಬ ಆರಾಧಕನು ಒಂದು ಪಶ್ಚಾತ್ತಾಪದ ಮತ್ತು ವಿಶ್ವಾಸವುಳ್ಳ ಹೃದಯ ಹೊಂದಿದವನಾಗಿ ಕಾಣಿಕೆಯೊಂದಿಗೆ ಬರುವಾಗ, ದೇವರು "ಅದನ್ನು ಯೇಸುವಿನ ಮರಣದ ಕಡೆಗೆ ಬೆರಳು ತೋರಿಸುವದನ್ನಾಗಿ ಕಾಣುವನು ಮತ್ತು ವಿಶ್ವಾಸಿಯ ನಂಬಿಕೆಯ ಕ್ರಿಯೆಯು, ಅಬ್ರಹಾಮನ ನಂಬಿಕೆಯಂತೆಯೇ 'ನೀತಿಯೆಂದು ಎಣಿಸಲ್ಪಡುವದು' ಎಂಬದಾಗಿ ಕಾಣುವನು."[34] ಯಜ್ಞ ಮಾತ್ರವೇ ಸಾಕಾದದ್ದಲ್ಲ ಎಂಬುದನ್ನು ಹಳೆಯ ಒಡಂಬಡಿಕೆಯು ಸ್ಪಷ್ಟಗೊಳಿಸಿತು (ಕೀರ್ತನೆ 51:16, 17; ನೋಡಿರಿ ಆಮೋಸ 5:21).

ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಆತನು ಮಾತ್ರವೇ ನಿಜವಾಗಿಯೂ ಧನ್ಯನು (ಕೀರ್ತನೆ 32:1, 2). ಹಳೆಯ ಒಡಂಬಡಿಕೆಯಡಿಯಲ್ಲಿ "ಸಿದ್ಧಿಗೆ ಬಂದವರು" ಆ ಗುರಿಯನ್ನು ಭವಿಷ್ಯದಲ್ಲಿ ಸಂಭವಿಸುವದಾಗಿ ಮಾತ್ರವೇ ಸಾಧಿಸಿಕೊಂಡರು ಯಾಕೆಂದರೆ ವಿಮೋಚಿಸಲ್ಪಡಬೇಕಾದರೆ ಕ್ರಿಸ್ತನು ಅವರಿಗೋಸ್ಕರ ಮರಣಿಸಬೇಕಾಗಿತ್ತು (ಇಬ್ರಿಯ 9:15). ನಾವು ಶಾಸ್ತ್ರಗಳಲ್ಲಿ ರಕ್ಷಣೆಯನ್ನು ಹೊಂದಿದ ಹಳೆಯ ಒಡಂಬಡಿಕೆಯ ಜನರ ಕುರಿತು ಓದುವಾಗ, ಅವರು ಕೃಪೆಯಿಂದ ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟರು ಹೊರತು ವೈಯಕ್ತಿಕ ಪರಿಪೂರ್ಣತೆ ಅಥವಾ ಅರ್ಹಗೊಳಿಸುವ ನೀತಿಯ ಕೃತ್ಯಗಳಿಂದಲ್ಲ. ಅಬ್ರಹಾಮನ ನಂಬಿಕೆಯು "ಆತನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು" (ಆದಿಕಾಂಡ 15:6), ಮತ್ತು ಅದೇ ರೀತಿಯಲ್ಲಿಯೇ ಧರ್ಮಶಾಸ್ತ್ರದಡಿಯಲ್ಲಿ "ರಕ್ಷಣೆ ಹೊಂದಿದ" ಎಲ್ಲರ ವಿಷಯದಲ್ಲಿ ಹಾಗೆಯೇ ಆಗಿತ್ತು.

ಧರ್ಮಶಾಸ್ತ್ರವು ಗಲಾತ್ಯ 3:24ರಲ್ಲಿ "ಕಾಯುವ ಆಳಿನಂತಾಗಿದೆ" (*παιδαγωγός*, *paidagōgos*) ಎಂದು ಕರೆಯಲ್ಪಟ್ಟಿದೆ. ಅಕ್ಷರಶಃ, ಈ ಪದವು ಒಬ್ಬ ಮಗುವನ್ನು ಉಪದೇಶಕನ ಬಳಿಗೆ ಕರೆದುಕೊಂಡು ಹೋಗುವ ಸೇವಕ ಅಥವಾ ಆಳು ಎಂಬುದನ್ನು ಸೂಚಿಸುತ್ತದೆ; ನಮ್ಮ *paidagōgos* ಆಗಿ ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಗೆ ಕರೆದುಕೊಂಡು ಬಂದಿತು.

ಹೊಸ ಒಡಂಬಡಿಕೆಯು ಪಾಪದ ಹೃದಯವನ್ನು ಶುದ್ಧಮಾಡಬಲ್ಲದಾದ್ದರಿಂದ, ಈಗ ನಾವು **ದೇವರ ಸನ್ನಿಧಿಗೆ ಸೇರಬಲ್ಲೆವು**. ಹಳೆಯ ಒಡಂಬಡಿಕೆಯ ಯಾಜಕರು ಗರ್ಭಗುಡಿಯನ್ನು ಸಮೀಪಿಸುತ್ತಿದ್ದ ಹಾಗೆ ದೇವರ ಸನ್ನಿಧಿಗೆ ಸೇರಿಸಲ್ಪಡುತ್ತಿದ್ದರು. ನಾವು ಪ್ರಾರ್ಥನೆ ಅಥವಾ ಆರಾಧನೆಯನ್ನು ಮಾಡುವ ಪ್ರತಿ ಸಾರಿಯೂ ದೇವರ ಸನ್ನಿಧಿಗೆ ಸೇರುವಂತವರಾಗಿದ್ದೇವೆ. ಇದು

ಹೇಗೆ ಯೇಸುವಿನ ರಕ್ತದ ಮೂಲಕ ಸಾಧಿಸಲ್ಪಡುತ್ತದೆಂಬುದನ್ನು ಇಬ್ರಿಯ 10:19-22 ತೋರಿಸಿ ಕೊಡುತ್ತದೆ. ಆತನ ರಕ್ತದ ಯಜ್ಞವು ವಾಸ್ತವದಲ್ಲಿ ಹಳೆಯ ಒಡಂಬಡಿಕೆಯ ಯಜ್ಞಗಳನ್ನು ಊರ್ಜಿತಗೊಳಿಸಿತು. ನಮ್ಮ ನೂತನ ಮಹಾಯಾಜಕನಾಗಿ, ಕ್ರಿಸ್ತನು ನಮಗೊಂದು **ಉತ್ತಮವಾಗಿರುವ ನಿರೀಕ್ಷಾಧಾರ**ವನ್ನು ತಂದನು, ಅದರ ಮೂಲಕ ದೇವರ ಸನ್ನಿಧಿಗೆ ಸೇರುವೆವು. ವಾಸ್ತವದಲ್ಲಿ, ಆತನು ನಮ್ಮ ನಿರೀಕ್ಷೆಯಾಗಿದ್ದಾನೆ (1 ತಿಮೊಥೆ 1:1).

ಇಬ್ರಿಯರಿಗೆ ಪತ್ರಿಕೆಯಲ್ಲಿ ಕ್ರಿಸ್ತನು ತನ್ನ ಯಾಜಕತ್ವದ ಮೂಲಕ ಏನು ಸಾಧಿಸಿದ್ದಾನೆಂಬುದರ ಮೇಲೆ ಮುಖ್ಯ ಗಮನ ಕೊಡಲ್ಪಟ್ಟಿರುತ್ತದೆ. ನಿರೀಕ್ಷೆಯು ಈ ಪತ್ರಿಕೆಯ ಒಂದು ಪ್ರಧಾನ ಗುಣಸ್ವಭಾವವಾಗಿರುತ್ತದೆ (ನೋಡಿರಿ 3:6; 6:11, 18, 19; 7:19; 10:23). ನಾವು ದೇವರ ಸಮೀಪಕ್ಕೆ ತರಲ್ಪಟ್ಟಾಗ ಯೇಸುವಿನಲ್ಲಿ ಸಿಕ್ಕುವ ಸಮಾಧಾನವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯ ಹೊಂದದವರಿಗೆ ಸಿಕ್ಕುವದಿಲ್ಲ (ರೋಮಾ 5:1, 2). ನಾವು ದೀಕ್ಷಾಸ್ನಾನದಲ್ಲಿ ಕ್ರಿಸ್ತನಿಗೆ ವಿಧೇಯರಾಗುವಾಗ ನಂಬಿಕೆಯು ನಮ್ಮ ಪಾಪಗಳನ್ನು ಶುದ್ಧ ಮಾಡುವದು (ಅಪೊಸ್ತಲರ ಕೃತ್ಯಗಳು 22:16). ಈ ವಿಧದಲ್ಲಿ ಶುದ್ಧ ಮಾಡಲ್ಪಟ್ಟವರು ಮಾತ್ರವೇ ಒಂದು ದುಷ್ಟ ಮನಸ್ಸಾಕ್ಷಿಯಿಂದ ಬಿಡಿಸಲ್ಪಟ್ಟವರಾಗಿ "ಧೈರ್ಯದಿಂದ ಕೃಪಾಸನದ ಮುಂದೆ" ಬರಬಲ್ಲೆವು (4:16).

**ವಚನ 20, 21.** ಕ್ರಿಸ್ತನ ಯಾಜಕತ್ವವು ಏಕೆ ಲೇವಿಕ ಯಾಜಕತ್ವಕ್ಕಿಂತ ಶ್ರೇಷ್ಠವಾದದ್ದು? ಈ ವಿಭಾಗವು ಆ ಪ್ರಶ್ನೆಗೆ ಉತ್ತರಿಸುತ್ತದೆ, ಪುಸ್ತಕದ ಬಹಳಷ್ಟು ಕೇಂದ್ರಿಯ ವಿಷಯವು ಒಂದು ಪ್ರತ್ಯುತ್ತರವಾಗಿ ಇರುತ್ತದೆ. ಇದು ಈ ದಿನ ನಮಗೆ ಮುಖ್ಯವಾದದ್ದೋ? ಹೌದು, ಯಾಕೆಂದರೆ ಕ್ರಿಸ್ತನಿಂದ ಹೊರಗಿರುವವರು ಶಾಶ್ವತವಾಗಿ ನಾಶನದಲ್ಲಿರುವವರಾಗಿದ್ದಾರೆ. ಇನ್ನೂ ತಮ್ಮ ಪಾಪಗಳಲ್ಲಿರುವರು ಕ್ರಿಸ್ತನು ಇರುವಲ್ಲಿಗೆ ಹೋಗಲಾರರು (ಯೋಹಾನ 8:21, 24). ಮಹಾಯಾಜಕನಾಗಿ ಕ್ರಿಸ್ತನ ಕೆಲಸವು ಮಾತ್ರವೇ ಆ ಸಮಸ್ಯೆಯನ್ನು ಇತ್ಯರ್ಥಗೊಳಿಸಬಲ್ಲದು.

ದೇವರು ಒಂದು "ಉತ್ತಮವಾದ ಒಡಂಬಡಿಕೆಯ" ಭರವಸವನ್ನು ಕೊಟ್ಟನು, ಮತ್ತು ಆತನು ಅದನ್ನು ಒಂದು ***ಆಣೆಯಿಟ್ಟು*** ನುಡಿದನು. ದೇವರು ಒಂದು ಆಣೆಯನ್ನು ವಿರಳವಾಗಿ ಬಳಿಸಿದನು, "ಆಣೆಯಿಡಲ್ಪಟ್ಟ ಸಂಗತಿಯ ಖಚಿತತೆ ಮತ್ತು ಮಾರ್ಪಾಡಾಗದಿರುವಿಕೆ"ಯನ್ನು ತೋರಿಸುವದಕ್ಕಾಗಿ ಬಳಸುತ್ತಿದ್ದನು.[35] ದೇವರು ಹಳೆಯ ಒಡಂಬಡಿಕೆಯಲ್ಲಿ ಪ್ರಾಮುಖ್ಯವಾದ ಆಣೆಗಳ ಪ್ರಮಾಣವನ್ನು ಮಾಡಿದ್ದನು, ಉದಾಹರಣೆಗೆ (1) ಅಬ್ರಹಾಮನಿಗೆ, ಆತನ ಮೂಲಕವಾಗಿ ಎಲ್ಲಾ ಜನಾಂಗಗಳಿಗೆ ಹರಿಯುವವೆಂಬ ವಿಷಯದಲ್ಲಿ ಆಣೆಯಿಟ್ಟನು (ಆದಿಕಾಂಡ 22:16-18); (2) ಅವಿಧೇಯ ಇಸ್ರಾಯೇಲ್ಯರಿಗೆ ಅವರು ದೇವರ ವಿಶ್ರಾಂತಿಯನ್ನು ಸೇರುವದೇ ಇಲ್ಲವೆಂದು ಆಣೆಯಿಟ್ಟನು (ಧರ್ಮೋಪದೇಶಕಾಂಡ 1:34, 35); (3) ಮೋಶೆಗೆ, ಆತನು ಕಾನಾನ್ ದೇಶವನ್ನು ಪ್ರವೇಶಿಸುವದಿಲ್ಲ ಎಂದು ಆಣೆಯಿಟ್ಟನು (ಧರ್ಮೋಪದೇಶಕಾಂಡ 4:21); ಮತ್ತು (4) ದಾವೀದನಿಗೆ, ಆತನ ಸಂತಾನ ಮತ್ತು ಸಿಂಹಾಸನವು ಸದಾಕಾಲವೂ ಇರುವದು ಎಂದು ಆಣೆಯಿಟ್ಟನು (ಕೀರ್ತನೆ 89:3, 4).

ದೇವರು ಆಣೆಯನ್ನು ಇಡುವದು ತಾನು ವಾಗ್ದಾನ ಮಾಡಿದ್ದನ್ನು ಕಾರ್ಯರೂಪಕ್ಕೆ ತರುವನೆಂಬುದನ್ನು ಒತ್ತು ಕೊಟ್ಟು ಖಚಿತಪಡಿಸಿತು. ಹಳೆಯ ಒಡಂಬಡಿಕೆಯ ಯಾಜಕತ್ವವು ಸ್ಥಾಪಿಸಲ್ಪಡುವಾಗ ಒಂದು ಆಣೆಯೊಂದಿಗೆ ಮುದ್ರೆ ಹಾಕಲ್ಪಡಲಿಲ್ಲ. ಲೇವಿಕ ಯಾಜಕತ್ವದ ನ್ಯಾಯಸಮ್ಮತಕ್ಕಾಗಿ ಯಾವದೇ ಆಣೆಯಿಟ್ಟು ಪ್ರಮಾಣ ಮಾಡಲಿಲ್ಲ. ಲೇವಿಯ ಯಾಜಕತ್ವವು ದೇವರ ದೀರ್ಘಾವಧಿಯ ಯೋಜನೆಗಳಿಗೆ ಅವಶ್ಯಕವಾಗಿರಲಿಲ್ಲ ವಾದ್ದರಿಂದ, ಅದು ಮಾರ್ಪಡಿಸಲ್ಪಡಬಹುದಾಗಿತ್ತು. ಯಾಜಕತ್ವವು ಬದಲಾವಣೆ ಯಾಗುವದಕ್ಕೆ

ಸಾಧ್ಯವಿತ್ತಾದ್ದರಿಂದ, ಅದು ಹಳೆಯ ಒಡಂಬಡಿಕೆಯೊಂದಿಗೆ ಬೇರ್ಪಡಿಸ ಲಾಗದಂತಹ ಜೋಡನೆಯನ್ನು ಹೊಂದಿದ್ದರ ಕಾರಣದಿಂದಾಗಿ ಧರ್ಮಶಾಸ್ತ್ರವು ಸಹ ಮಾರ್ಪಡಿಸಲ್ಪಡಬಹುದಾಗಿತ್ತು.

ಈ ವಚನವು ಕೀರ್ತನೆ 110:4ರ ಮೊದಲ ಭಾಗವನ್ನು ಉಲ್ಲೇಖ ಮಾಡುತ್ತದೆ, ಅದು 17ನೇ ವಚನದಲ್ಲಿ ಹೊರಗಿಡಲ್ಪಟ್ಟಿತ್ತು: **ನೀನು ಸದಾಕಾಲವೂ ಯಾಜಕನಾಗಿದ್ದೀ ಎಂದು ಕರ್ತನೆಂಬ ನಾನು ಆಣೆಯಿಟ್ಟು ನುಡಿದೆನು; ಪಶ್ಚಾತ್ತಾಪಪಡುವದಿಲ್ಲ.** ದೇವರು ಕ್ರಿಸ್ತನ ಯಾಜಕತ್ವವು ಮೆಲ್ಕಿಜೆದೇಕನ ರೀತಿಯದ್ದಾಗಿರುವದೆಂದು ಒಂದು ಆಣೆಯಿಟ್ಟನು. ಧರ್ಮಶಾಸ್ತ್ರ ಮತ್ತು ಯಾಜಕತ್ವದ ಬದಲಾವಣೆಯ ವಿಷಯದಲ್ಲಿ ಆಣೆಯಿಟ್ಟವನಾಗಿ, ದೇವರು "ಪಶ್ಚಾತ್ತಾಪಪಡುವದಿಲ್ಲ." ರಕ್ಷಣೆಯನ್ನು ತರುವ ಮತ್ತು ದೇವರ ಕಡೆಗೆ ಅಗತ್ಯವಾದ ವಿಜ್ಞಾಪನೆಯನ್ನು ಒದಗಿಸುವ ಈ ಹೊಸ ಯಾಜಕತ್ವವು ಬಯಸುವದಕ್ಕಾಗಿ ಇನ್ನೂ ಹೆಚ್ಚು ಆತ್ಮೀಕ ಮೌಲ್ಯವುಳ್ಳ ಇನ್ನಾವದನ್ನೂ ಉಳಿಸುವದಿಲ್ಲ.

ದೇವರು ಏನಾದರೂ ಒಂದನ್ನು ಹೇಳಿದರೆ ಅದು ಮಾಡಿದಂತೆಯೇ ಆಗಿತ್ತು. ಯೇಸು ಒಂದನ್ನು ಮಾತನ್ನು ಹೇಳಿದರೆ ರೋಮನ್ ಶತಾಧಿಪತಿಯ ಸೇವಕನೊಬ್ಬನು ದೂರದಲ್ಲಿರುವಾಗಲೇ ಗುಣಪಡುವದಕ್ಕೆ ಸಾಧ್ಯವಾಗಿತ್ತೆಂಬುದನ್ನು ಲೂಕ 7:6-10 ತೋರಿಸಿ ಕೊಡುತ್ತದೆ. ಶತಾಧಿಪತಿಯು ಯೇಸುವಿನ ಕುರಿತ ವಾಸ್ತವಾಂಶವನ್ನು ಗುರುತಿಸಿದನಾದ್ದರಿಂದ, ನಮ್ಮ ಕರ್ತನು ಆತನ ನಂಬಿಕೆಯನ್ನು ಇಸ್ರಾಯೇಲ್ಯರಲ್ಲಿ ತಾನು ಯಾವನಲ್ಲಿಯೂ ಕಾಣದಿರುವಷ್ಟು ಬಲವಾದ ನಂಬಿಕೆಯೆಂದು ಪರಿಗಣಿಸಿದನು. ಈ ಮನುಷ್ಯನು ಯೇಸುವಿನ ಮಾತುಗಳನ್ನು ದೇವರ ಮಾತಿನ ಮಟ್ಟದಲ್ಲಿಯೇ ಇಟ್ಟನು. ಅದೇ ರೀತಿಯಲ್ಲಿಯೇ ನಾವು ಸಹ ಮಾಡಬೇಕು.

ದೇವರು ತಾನು ಆಣೆಯಿಟ್ಟಿರುವ ಒಂದು ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವದಿಲ್ಲ, ಆದರೆ ಶರತ್ತಿನ ಮೇಲೆ ಆಧಾರಿತ ವಿಷಯಗಳಲ್ಲಿ ಆತನು ಕೆಲವು ಸಂದರ್ಭಗಳಲ್ಲಿ ತನ್ನ ಮನಸ್ಸನ್ನು ಬೇರೆ ಮಾಡಿಕೊಂಡಿದ್ದಾನೆ. ಕ್ರಿಸ್ತನ ಯಾಜಕತ್ವವನ್ನು ದಾಟಿ ಬೇರೆ ಇನ್ನೇನೂ ಇರುವದಿಲ್ಲ; ಅದರ ಸ್ಥಾನವನ್ನು ಬೇರೆ ಇನ್ನಾವದೂ ವಹಿಸಿಕೊಳ್ಳಲಾಗದು. ಇಬ್ರಿಯ 7ನೇ ಅಧ್ಯಾಯವು ಮೂರು ಸಾರಿ ಆತನ ಯಾಜಕತ್ವವು "ಸದಾಕಾಲವೂ" ಇರುತ್ತದೆಂದು ಹೇಳುತ್ತದೆ (ವಚನಗಳು 3, 17, 21). ಇದು ದೇವರ ಕೃಪೆಯ ಅಂತಿಮ ಯುಗವಾಗಿದೆ; ಇದನ್ನು ದಾಟಿ ನಿತ್ಯತ್ವವನ್ನು ಹೊರತು ಪಡಿಸಿ ಬೇರೆ ಇನ್ನಾವ ಯುಗವೂ ಇರುವದಿಲ್ಲ, ನಿತ್ಯತ್ವವನ್ನು "ಯುಗ" ವೆಂದು ಎಣಿಸುವದಕ್ಕಾಗುವದಿಲ್ಲ. ಕ್ರೈಸ್ತ ಯುಗವನ್ನು ಮೀರಿ ಒಂದು ಸಹಸ್ರವರ್ಷದ ಯುಗಕ್ಕೆ ಯಾವದೇ ಅವಕಾಶವಿರುವದಿಲ್ಲ. ದೇವರ ಆಣೆಯ ಕಾರಣದಿಂದ ಈ ವಿಷಯದಲ್ಲಿ ನಾವು ಎರಡರಷ್ಟು ಖಚಿತತೆಯನ್ನು ಹೊಂದಿರಬಹುದು.

**ವಚನ 22.** ಇಬ್ರಿಯರಿಗೆ ಪತ್ರಿಕೆಯ ಪ್ರಧಾನ ಚರ್ಚೆಯಾಂಶದ ಒಂದು ಭಾಗವು ಈ ವಚನದಲ್ಲಿ ಕಂಡು ಬರುತ್ತದೆ: **ಯೇಸು . . . ಎಷ್ಟೋ ಶ್ರೇಷ್ಠವಾದ ಒಡಂಬಡಿಕೆಗೆ ಹೊಣೆಗಾರನಾದನು.** "ಹೊಣೆಗಾರನು" (ἔγγυος, *enguos*) ಎಂಬ ಪದವು ಹೊಸ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಸಿಕ್ಕುವದಿಲ್ಲ. ಈ ಪದವು ಪ್ರಾಚೀನ ಕಾನೂನಾತ್ಮಕ ದಸ್ತಾವೇಜುಗಳಲ್ಲಿ ಒಂದು ಪ್ರಮಾಣ ಅಥವಾ ಜಾಮೀನು ಸಂಬಂಧದಲ್ಲಿ ಅಥವಾ ಜಾಮೀನಿಗೆ ಮೊತ್ತವನ್ನು ಭರಿಸಿದವನನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು. ಅಲ್ಲದೆ ವಿವಾಹವೊಂದನ್ನು ವ್ಯವಸ್ಥೆಗೊಳಿಸುವದರಲ್ಲಿ ಒಬ್ಬ ಮಗಳ ವರದಕ್ಷಿಣೆಗೆ ಕೊಡಲ್ಪಟ್ಟ ಹೊಣೆಗಾರಿಕೆಗೆ ಸಹ ಅನ್ವಯಿಸಲ್ಪಡುತ್ತಿತ್ತು.[36] ಶಾಸ್ತ್ರೀಯ ಗ್ರೀಕ್‌ನಲ್ಲಿ ಒಂದು ಕಾನೂನಾತ್ಮಕ ಕೆಲಸದ

ಸಮರ್ಪಣೆಯೊಂದರ ಹೊಣೆಗಾರಿಕೆ ವಹಿಸುತ್ತಿದ್ದ ವ್ಯಕ್ತಿಯೇ *enguos* ಆಗಿರುತ್ತಿದ್ದನು.

ಯೇಸುವಿನ ಮರಣ ಹಾಗೂ ಪುನರುತ್ಥಾನಗಳ ಮೂಲಕ, ಆತನು ನಮ್ಮ ಪೂರ್ಣ ಕ್ಷಮಾಪಣೆ ಹಾಗೂ ನಿತ್ಯವಾದ ರಕ್ಷಣೆಯನ್ನು ಖಾತ್ರಿಗೊಳಿಸಿದ್ದಾನೆ. ಕ್ರಿಸ್ತನಲ್ಲಿ ಮತ್ತು ಮೂಲಕ ನಮ್ಮ ರಕ್ಷಣೆಯು ಖಚಿತಗೊಳಿಸಲ್ಪಟ್ಟಿದೆ; ಆತನು ನಮಗೆ ಹೊಣೆಗಾರ. ನಾವು ವಿಮೋಚಿಸಲ್ಪಟ್ಟಿದ್ದೇವೆಂಬುದನ್ನು ಬಲ್ಲೆವು ಯಾಕೆಂದರೆ ಕ್ರಿಸ್ತನು ನಮಗೋಸ್ಕರ ವಿಮೋಚನೆಯ ಬೆಲೆಯನ್ನು ಸಂದಾಯ ಮಾಡಿದನು. ಈ ವಿಷಯದಲ್ಲಿ ನಮ್ಮ ದೃಢವಿಶ್ವಾಸವು ನಂಬಿಕೆಯ ಮೂಲಕವೇ ಆಗಿದೆ. ಹೇಗೂ, ಆರಂಭಿಕ ಖಾತ್ರಿಯು ದೇವರ ಆಣೆಯ ಮೂಲಕ ಒದಗಿಸಲ್ಪಟ್ಟಿತು (ವ. 21). ಕ್ರೈಸ್ತರು ಕ್ರಿಸ್ತನಲ್ಲಿ ಒಂದು ಖಾತ್ರಿಯನ್ನು ಹೊಂದಿದ್ದಾರೆಂಬ ಹೇಳಿಕೆಯು ಬಹುಶಃ ಇಬ್ರಿಯರು ಯಾವದೋ ಒಂದು ಕಡಿಮೆಯಾದದ್ದರ ಕಡೆಗೆ – ಧರ್ಮಶಾಸ್ತ್ರ, ಅದು ಅತಿ ಕಡಿಮೆ ನಿಶ್ಚಯತೆಯನ್ನು ಒದಗಿಸಿತ್ತು ಮತ್ತು ಅದು ರಕ್ಷಣೆಯನ್ನು ಹೊಂದಿಕೊಳ್ಳಲು ನಿಷ್ಪ್ರಯೋಜಕವಾಗಿತ್ತು – ಹಿಂದಿರುಗುವರೋ ಎಂಬ ಆತಂಕ ಲೇಖಕನಿಗಿತ್ತೆಂಬುದನ್ನು ಪ್ರತಿಬಿಂಬಿಸುತ್ತದೆ.

ಕ್ರಿಸ್ತನು "ಎಷ್ಟೋ ಶ್ರೇಷ್ಠವಾದ ಒಡಂಬಡಿಕೆಗೆ ಹೊಣೆಗಾರನಾದನು." "ಒಡಂಬಡಿಕೆ" (διαθήκη, *diathēkē*) ಎಂಬ ಪದವು ಪತ್ರಿಕೆಯಲ್ಲಿ ಮೊದಲ ಬಾರಿಗೆ ಇಲ್ಲಿ ಬಳಸಲ್ಪಟ್ಟಿದೆ, ಆದರೆ ಮುಂದೆ ಬರುವಂಥ ಚರ್ಚೆಯಲ್ಲಿ ಇದು ಪ್ರಧಾನ ಪಾತ್ರವನ್ನು ವಹಿಸುತ್ತದೆ. (9:16, 17ರ ಸಂಬಂಧದಲ್ಲಿ "ಒಡಂಬಡಿಕೆ" ಎಂಬ ಪದದ ಅಧ್ಯಯನವನ್ನು ನೋಡಿರಿ.) ಇಬ್ರಿಯರಿಗೆ ಪತ್ರಿಕೆಯು "ಒಡಂಬಡಿಕೆಯ ಪತ್ರಿಕೆ" ಎಂದು ಕರೆಯಲ್ಪಟ್ಟಿದೆ. ವಾಕ್ಯಭಾಗವು "ಮುಂದಿನ ಎರಡು ಅಧ್ಯಾಯಗಳಲ್ಲಿ ಏನು ಬರಲಿದೆ ಎಂಬುದರ ಸುಳಿವು ಕೊಡುತ್ತದೆ, ಮತ್ತು ಅದಕ್ಕಿಂತ ಹೆಚ್ಚೇನೂ ಹೇಳುವದಿಲ್ಲ."[37] ಇದು ನಿಜವಾಗಿಯೂ "ಉತ್ತಮ" – ಇದು ಇಬ್ರಿಯರಿಗೆ ಪತ್ರಿಕೆಯಲ್ಲಿ ಮುಖ್ಯ ಯೋಚನೆಯಾಗಿದೆ, ಹೊಸ ಒಡಂಬಡಿಕೆಯಲ್ಲಿ ಹದಿನಾರು ಸಾರಿ ಈ ಪದವು ಕಂಡು ಬರುವದಾಗಿದ್ದು ಅದರಲ್ಲಿ ಹದಿಮೂರು ಸಾರಿ ಇಬ್ರಿಯರಿಗೆ ಪತ್ರಿಕೆಯು ಅದನ್ನು ಬಳಸುತ್ತದೆ. "ಉತ್ತಮ ಒಡಂಬಡಿಕೆ" ಎಂಬುದು 8:8ರಲ್ಲಿನ "ಹೊಸ ಒಡಂಬಡಿಕೆ" ಯೇ ಆಗಿರುತ್ತದೆ.

## ಕ್ರಿಸ್ತನ ಪರಿಪೂರ್ಣವಾದ ಮತ್ತು ಶಾಶ್ವತವಾದ ಯಾಜಕತ್ವದ ಕೆಲಸ (7:23-28)

**23ಲೇವಿಯರು ಶಾಶ್ವತವಾಗಿ ಉದ್ಯೋಗ ನಡಿಸುವದಕ್ಕೆ ಮರಣವು ಅಡ್ಡಿಯಾದದರಿಂದ ಅವರಲ್ಲಿ ಯಾಜಕರಾದವರು ಅನೇಕರು; 24ಆತನಾದರೋ ಸದಾಕಾಲವಿರುವದರಿಂದ ಆತನ ಯಾಜಕತ್ವವು ಮತ್ತೊಬ್ಬರಿಗೆ ಹೋಗುವಂಥದಲ್ಲ. 25ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.**

**26ಇಂಥವನೇ ನಮಗೆ ಬೇಕಾದ ಮಹಾಯಾಜಕನು. ಈತನು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು. 27ಮೊದಲು ತಮ್ಮ ಪಾಪಪರಿಹಾರಕ್ಕಾಗಿ ಆಮೇಲೆ ಜನರ ಪಾಪಪರಿಹಾರಕ್ಕಾಗಿ ಸಮರ್ಪಣೆಮಾಡುವ ಲೇವಿಕ ಮಹಾಯಾಜಕರಂತೆ ಈತನು ಪ್ರತಿನಿತ್ಯವೂ ಸಮರ್ಪಿಸಬೇಕಾದ ಅವಶ್ಯವಿಲ್ಲ. ಈತನು ತನ್ನನ್ನೇ ಸಮರ್ಪಿಸಿಕೊಂಡು ಒಂದೇ ಸಾರಿ ಆ ಕೆಲಸವನ್ನು ಮಾಡಿ ಮುಗಿಸಿದನು. 28ಧರ್ಮಶಾಸ್ತ್ರವು ನಿರ್ಬಲರಾದ ಮನುಷ್ಯರನ್ನು ಮಹಾಯಾಜಕರನ್ನಾಗಿ ನೇಮಿಸುತ್ತದೆ; ಆದರೆ ಧರ್ಮಶಾಸ್ತ್ರದ ತರುವಾಯ ಆಣೆಯೊಡನೆ**

**ಉಂಟಾದ ವಾಕ್ಯವು ಸದಾಕಾಲಕ್ಕೂ ಸರ್ವಸಂಪೂರ್ಣನಾಗಿರುವ ಮಗನನ್ನೇ ನೇಮಿಸುತ್ತದೆ.**

7:22-28ರಲ್ಲಿನ ದೊಡ್ಡ ಯಾಜಕತ್ವದ ವಾಕ್ಯಭಾಗದಲ್ಲಿ, ಕ್ರಿಸ್ತನ ಮೂರು ಚಿತ್ರಣಗಳನ್ನು ಕೊಡಲಾಗಿದೆ. ಆತನು ನಮಗೆ "ಎಷ್ಟೋ ಶ್ರೇಷ್ಠವಾದ [ಉತ್ತಮವಾದ] ಒಡಂಬಡಿಕೆಗೆ ಹೊಣೆಗಾರನು" ಎಂಬುದನ್ನು ಈಗಾಗಲೆ ನೋಡಿದ್ದೇವೆ (ವ. 22). ಅಲ್ಲದೆ ಆತನು ನಮ್ಮ ನಿತ್ಯನಾದ ಯಾಜಕನು ಮತ್ತು ನಮ್ಮ ಪರಿಣಾಮಕರವಾದ ಯಜ್ಞವು ಸಹ ಆಗಿದ್ದಾನೆಂಬುದನ್ನು ನೋಡುತ್ತೇವೆ (ವಚನಗಳು 26, 27). Raymond Brown ಗಮನಕ್ಕೆ ತರುವದೇನೆಂದರೆ ಕ್ರಿಸ್ತನ ಯಾಜಕತ್ವದ ಕೆಲಸ ಮತ್ತು ಯಜ್ಞಗಳು ಆತನ "ಶಾಶ್ವತವಾದ ಸಾಧನೆಯನ್ನು, ಮಿತಿಯಿಲ್ಲದ ಶಕ್ತಿ, ವರ್ತಮಾನದ ಸೇವೆ, ಪಾಪರಹಿತ ಗುಣಸ್ವಭಾವ ಮತ್ತು ಪರಿಪೂರ್ಣವಾದ ಕಾಣಿಕೆಗಳನ್ನು ಒಳಗೊಂಡಿರುತ್ತದೆ."[38]

**ವಚನಗಳು 23, 24. ಯಾಜಕರಾದವರು** ಕ್ರಿ.ಶ. 70ರಲ್ಲಿ ಯೆರೂಸಲೇಮ್ ಪತನಗೊಂಡು ದೇವಾಲಯವು ನಾಶಗೊಳಿಸಲ್ಪಟ್ಟು ಅವರ ಯಜ್ಞಗಳು ನಿಂತು ಹೋಗುವ ಮುಂಚೆ, ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ಹೊತ್ತಿನಲ್ಲಿ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಲೇಖಕನು ಪ್ರಾಥಮಿಕವಾಗಿ ದೂರದ ಭವಿಷ್ಯದಲ್ಲಿನ ಒಂದು ತಕ್ಕದಾದ ಕಾಲದ ಕುರಿತು ಮಾತಾಡುತ್ತಿರಬಹುದಾಗಿದೆ, ಆಗ ಆರೋನನ ಸಮರ್ಪಕರಾದ ಮಹಾಯಾಜಕ ಕುಟುಂಬದವರು ಸೇವೆಯನ್ನು ಮಾಡುತ್ತಿದ್ದಿರಬಹುದಾಗಿದೆ. ಇಬ್ರಿಯರಿಗೆ ಪತ್ರಿಕೆಯಲ್ಲಿ ದೇವಾಲಯವು ನಿರ್ದಿಷ್ಟವಾಗಿ ಪ್ರಸ್ತಾಪಿಸಲ್ಪಡದಿರುವದಕ್ಕೆ ಇದು ಕಾರಣವಾಗಿರಬಲ್ಲದು.

ಮರಣದ ಅಥವಾ ಉದ್ಯೋಗದಲ್ಲಿ ಅವರು ಮಿತಿಯುಳ್ಳ ಕಾಲದ ತನಕ ಇರುತ್ತಿದ್ದ ಕಾರಣದಿಂದ ಅಸಂಖ್ಯಾತರು ಅಥವಾ **ಅನೇಕರು** ಮಹಾಯಾಜಕರು ಧರ್ಮಶಾಸ್ತ್ರದಡಿಯಲ್ಲಿ ಸೇವೆ ಮಾಡಿದರು, ಆದರೆ ನಮಗಾದರೋ ಸಭೆಯಲ್ಲಿ ಸರ್ವಕಾಲಕ್ಕೂ ಒಬ್ಬನೇ ಮಹಾಯಾಜಕನಿದ್ದಾನೆ. Josephusನ ಪ್ರಕಾರವಾಗಿ, ಯೆರೂಸಲೇಮಿನ ಪತನಕ್ಕೆ ಮುನ್ನ ಎಂಭತ್ತು ಮೂರು ಮಹಾಯಾಜಕರಿದ್ದರು.[39] ಇನ್ನು ಅನೇಕ ಯಾಜಕರು ಸೇವೆ ಮಾಡಿದರು, ಯಾವದೇ ಕಾಲಕ್ಕೂ ಒಟ್ಟಾರೆಯಾಗಿ ಹದಿನೈದು ನೂರು ಜನ ಯಾಜಕರಾಗಿದ್ದರು.[40] ಪ್ರತಿಯೊಬ್ಬ ಯಾಜಕನ ದಾಖಲೆಯು "ಆತನು ಮರಣಿಸಿದನು" ಎಂಬುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ಮೋಶೆಯು ಆರೋನನ್ನು ಮತ್ತು ಆತನ ಮಗನಾದ ಎಲ್ಲಾಜಾರನನ್ನು ಹೋರ್ ಬೆಟ್ಟದ ಮೇಲೆ ಕರೆದೊಯ್ದು ಆರೋನನ ಯಾಜಕತ್ವದ ಉಡುಪನ್ನು ತೆಗೆದು ಆತನ ಮಗನಿಗೆ ಕೊಟ್ಟನು. ಆ ಬಳಿಕ ಆರೋನನು ಬೆಟ್ಟದ ಮೇಲೆ ಮರಣಿಸಿದನು. ಹೀಗೆ ಅದು ಮುಂದುವರೆಯುತ್ತಲೇ ಇತ್ತು, ಮುಂಚಿನ ಮಹಾಯಾಜಕನು ಗತಿಸಿ ಹೋದ ಬಳಿಕ ಯಾಜಕತ್ವವನ್ನು ಮತ್ತೊಬ್ಬರಿಗೆ ವಹಿಸುವುದು ಹೀಗೆಯೇ ನಡೆಯುತ್ತಲಿತ್ತು. ಕ್ರಿಸ್ತನ ಮಹಾಯಾಜಕತ್ವದ ಸ್ಥಿರವಾಗಿ ನೆಲೆಯಾಗುವ ಸ್ವಭಾವವು **ಸದಾಕಾಲವಿರುವದರಿಂದ** ಎಂಬ ಮಾತಿನಲ್ಲಿ ಕಂಡು ಬರುತ್ತದೆ (ವ. 24); ಯಾಜಕನಾಗಿ ಆತನ ಅವಧಿಯು ಎಂದಿಗೂ ಅಂತ್ಯಗೊಳ್ಳುವದಿಲ್ಲ. ಕೀರ್ತನೆ 110:4ರ ಪ್ರವಾದನೆಯು ಇಬ್ರಿಯ 7:21ರಲ್ಲಿ ಪುನರಾವರ್ತಿಸಲ್ಪಟ್ಟಿರುತ್ತದೆ: "ನೀನು ಸದಾಕಾಲವೂ ಯಾಜಕನಾಗಿದ್ದೀ . . ." ಯೆಹೂದ್ಯರ ಯಾವ ಯಾಜಕನೂ ಸದಾಕಾಲವೂ ಯಾಜಕನಾಗಿರುವದಕ್ಕೆ ಸಾಧ್ಯವಿರಲಿಲ್ಲ – ಆದರೆ ಕ್ರಿಸ್ತನು ಇರುವನು ಯಾಕೆಂದರೆ ಆತನು ಮತ್ತೆಂದೂ ಸಾಯದಿರುವವನಾಗಿ ಮರಣದಿಂದ ಎಬ್ಬಿಸಲ್ಪಟ್ಟನು.

16ನೇ ವಚನವು ಎರಡು ಯಾಜಕತ್ವಗಳಲ್ಲಿರುವ ವ್ಯತ್ಯಾಸವನ್ನು ಎತ್ತಿ ತೋರಿಸುತ್ತದೆ, ಒಂದು ಭೂಲೋಕದ್ದು, ಅಥವಾ "ಶಾರೀರಿಕ" ಆಗಿರುತ್ತದೆ, ಮತ್ತು ಇನ್ನೊಂದು "ನಿರ್ಲಯವಾದ

ಜೀವದ ಶಕ್ತಿ" ಯನ್ನು ಹೊಂದಿರುವಂಥದ್ದು. 23ನೇ ವಚನವು ಇನ್ನೊಂದು ವಿರುದ್ಧ ಹೋಲಿಕೆಯ ಮೇಲೆ ಗಮನವನ್ನು ಹರಿಸುತ್ತದೆ: ಅನೇಕರು Vs ಒಬ್ಬನು. ಸುವಾರ್ತೆಯು ದೃಢೀಕರಿಸಲ್ಪಟ್ಟ ಬಳಿಕ ಅದ್ಭುತಗಳ ಯುಗವು ನಿಂತುಹೋದಾಗ್ಯೂ, ಕ್ರಿಸ್ತನು ಗುಣಪಡಿಸುತ್ತಾ ಇತರ ಅದ್ಭುತಗಳನ್ನು ಮಾಡುತ್ತಾ ಭೂಮಿಯ ಮೇಲೆ ಪ್ರಯೋಗಿಸಿದ ಶಕ್ತಿಯನ್ನು ಈಗಲೂ ಹೊಂದಿದ್ದಾನೆ (ನೋಡಿರಿ 2:1-4). ಯೇಸು ತನ್ನ ಭೂಲೋಕದ ಸೇವೆಯ ವೇಳೆಯಲ್ಲಿ ಮಾಡಿದ ಅದ್ಭುತಗಳ ಕುರಿತು ಕೇಳಿಸಿಕೊಳ್ಳುವದು ಆದಿ ಕ್ರೈಸ್ತರ ನಂಬಿಕೆಯನ್ನು ಬಲಪಡಿಸಿರಬಹುದಾದರೂ, ಅದು ಸಾಕಾದದ್ದಾಗಿ ಇದ್ದಿರಲಾರದು. ಬಹುಶಃ ಅವರು "ಆ ಕಾಲದಿಂದ ಇಲ್ಲಿಯ ತನಕ ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೆ?" ಎಂದು ಚಕಿತಗೊಂಡಿರಬಹುದು. ಆತನು ಹಿಂದಿನ ಕಾಲದಲ್ಲಿ ಮಾಡಿದ ಅದ್ಭುತಗಳಷ್ಟೇ ಆತನು ಈಗ ಮಾಡುತ್ತಿರುವ ವಿಜ್ಞಾಪನೆಯ ಕೆಲಸವು (ವ. 25) ಮಹತ್ವವಾದದ್ದೆಂಬುದನ್ನು ಅವರು ಅರ್ಥಮಾಡಿಕೊಳ್ಳುವ ಅಗತ್ಯವಿತ್ತು.

ಕ್ರಿಸ್ತನು **ಸದಾಕಾಲವೂ ಇರುವದರಿಂದ ಆತನ ಯಾಜಕತ್ವವು ಮತ್ತೊಬ್ಬರಿಗೆ ಹೋಗುವಂಥದಲ್ಲ** (ಶಾಶ್ವತವಾಗಿರುವದು; ವ. 24). "ಶಾಶ್ವತವಾಗಿರುವದು" ಎಂದು ಅನುವಾದಿಸಲ್ಪಟ್ಟಿರುವ ಪದವು ἀπαράβατος (*aparabatos*), ಇದು "ಮತ್ತೊಬ್ಬರಿಗೆ ಕೊಡಲ್ಪಡಲಾಗದ್ದು" ಎಂದರ್ಥವನ್ನು ಹೊಂದಿದೆ, ಯಾಜಕತ್ವವು ಎಂದಿಗೂ ಮತ್ತೊಬ್ಬರಿಗೆ ಹೋಗುವಂಥದ್ದಲ್ಲ ಎಂಬುದನ್ನು ಸೂಚಿಸುತ್ತದೆ.[41] ಈ ಹೇಳಿಕೆಯ ಬೆಳಕಿನಲ್ಲಿ ಕ್ರಿಸ್ತನ ಸ್ಥಾನವನ್ನು ಯಾವದೋ ಒಂದು ಪಂಗಡದ ಸ್ಥಾಪಕ ಅಥವಾ "ಪ್ರವಾದಿ" ಗೆ ಕೊಡಲ್ಪಡುವದನ್ನು ಊಹಿಸಿಕೊಳ್ಳುವದಕ್ಕೂ ಆಗದು.

**ವಚನ 25.** ಯೆರೂಸಲೇಮಿನ ಕಡೇ ಮಹಾಯಾಜಕನು ಕಟ್ಟಾಶ್ರದ್ಧಾಳುಗಳಿಂದ ಒಂದು ಅಪಹಾಸ್ಯವಾಗಿ ಆ ಸ್ಥಾನದಲ್ಲಿ ಇಡಲ್ಪಟ್ಟಿದ್ದನು. ಆತನು ಮಹಾಯಾಜಕತ್ವವೆಂದರೆ ಏನೆಂಬುದು ಸ್ವಲ್ಪವೂ ಗೊತ್ತಿರದ ಅಯೋಗ್ಯ ವ್ಯಕ್ತಿಯಾಗಿದ್ದನು.[42] ಮಹಾಯಾಜಕನ ಅಸಮಂಜತೆಯು **ಸಂಪೂರ್ಣವಾಗಿ** [ಸದಾಕಾಲವೂ] **ರಕ್ಷಿಸುವದಕ್ಕೆ** ಕ್ರಿಸ್ತನಿಗಿರುವ ಸಾಮರ್ಥ್ಯದೊಂದಿಗೆ ತೀಕ್ಷ್ಣವಾಗಿ ತದ್ವಿರುದ್ಧವಾಗಿರುತ್ತದೆ. ಆತನ ಮರಣವು ಆತನ ಮಹಾಯಾಜಕತ್ವವನ್ನು ಮೊಟಕುಗೊಳಿಸಲಿಲ್ಲ, ಯಾಕೆಂದರೆ ಆತನು ಅನಂತರದಲ್ಲಿ ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ಸದಾಕಾಲವೂ ಜೀವಿಸುವವನಾದನು. "ಮರಣವು ಇನ್ನೂ ಆತನನ್ನು ಆಳುವದಿಲ್ಲ" (ರೋಮಾ 6:9). ಯೇಸು ಕ್ರಿಸ್ತನು ಮಹಾಯಾಜಕತ್ವವನ್ನು ಶಾಶ್ವತವಾಗಿ ಹೊಂದಿರುತ್ತಾನೆ, ಮತ್ತು ಯಾವನೊಬ್ಬನೂ ಆತನನ್ನು ಮೀರಿಸಲಾರನು.

ಕ್ರಿಸ್ತನು ರಕ್ಷಿಸುವದಕ್ಕೆ ಶಕ್ತನು, ಅದಕ್ಕೆ ಭಾಗಶಃ ಕಾರಣವು, ಆತನು ನಮ್ಮ ಮಹಾಯಾಜಕನಾಗಿರುವದೇ. ಆತನು ಹಿಂದಿನ ಕಾಲದಲ್ಲಿ ತೋರಿದ ಶಕ್ತಿಯ ಪ್ರದರ್ಶನಗಳು ಇನ್ನು ಮೇಲೆ ಗೋಚರವಾಗುವದಿಲ್ಲ, ಅದರೆ ಈಗ ಆತನು ಮಾಡುವದು ಕಾಲ ಅಥವಾ ನಿತ್ಯತ್ವದಲ್ಲಾಗಲಿ ಮಿತಿಯೇ ಇಲ್ಲದಂಥ ಶಕ್ತಿಯನ್ನು ಪ್ರದರ್ಶಿಸುವದೇ ಆಗಿರುತ್ತದೆ. ನಮಗೆ **ಶಕ್ತನಾದ,** ಶಕ್ತಿಯುಳ್ಳ ಒಬ್ಬ ರಕ್ಷಕನೊಬ್ಬನ ಅಗತ್ಯವಿದೆ. ಕ್ರಿಸ್ತನು ನಿತ್ಯವಾದ ಮರಣದಿಂದ ನಮ್ಮನ್ನು ರಕ್ಷಿಸುವದಕ್ಕೆ ಅವಶ್ಯಕವಾದ ಶಕ್ತಿಯನ್ನು ಹೊಂದಿದ್ದಾನೆ. ಕಲ್ವಾರಿಯ ಮೇಲಿನ ಆತನ ಯಜ್ಞದ ಮೂಲಕ, ಆತನು ವಿಧೇಯರಾಗುವವರನ್ನು ಪಾಪಕ್ಕೆ ಬರಬೇಕಾಗಿರುವ ದಂಡನೆಯಿಂದ ರಕ್ಷಿಸಬಲ್ಲನು (5:8, 9).

"ರಕ್ಷಿಸುವದಕ್ಕೆ" ಎಂಬುದಕ್ಕಿರುವ ಪದವು ವರ್ತಮಾನಕಾಲರೂಪದಲ್ಲಿ ಇರುತ್ತದೆ; ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ನಿರಂತರವಾಗಿ ರಕ್ಷಿಸುತ್ತಿರುವನು. ಅದೇ ರೀತಿಯಲ್ಲಿ,

ಯೇಸು ಯಾವದೇ ಶೋಧನೆಯಿಂದ ತಪ್ಪಿಸಿಕೊಳ್ಳುವದಕ್ಕೆ (ಅಥವಾ "ರಕ್ಷಿಸುವದಕ್ಕೆ") ಒಂದು ದಾರಿಯನ್ನು ಮಾಡಲು ಶಕ್ತಿಯನ್ನು ಹೊಂದಿದ್ದಾನೆಂದು 1 ಕೊರಿಂಥ 10:13 ಹೇಳುತ್ತದೆ. ಆತನು ಅದನ್ನು ದೇವದೂತರ ಮೂಲಕ ಮಾಡಬಹುದು (1:14), ಆದರೆ ಕ್ರಿಸ್ತನು ಅವರ ಮುಖಾಂತರ ಕಾರ್ಯಮಾಡುವವನಾಗಿದ್ದಾನೆ. ಆತನ ಜೀವನದ ಶಾಶ್ವತತನ ಹಾಗೂ ಆತನ ಮಹಾಯಾಜಕತ್ವದ ಸ್ವಭಾವದ ಮೂಲಕ, ತನಗೆ ನಂಬಿಗಸ್ತರಾಗಿ ಉಳಿಯುವವರನ್ನು ಆತನು ನಿರಂತರವಾಗಿ ರಕ್ಷಿಸುತ್ತಲೇ ಇರುವನು. ಕ್ರೈಸ್ತರಿಗೆ ಈಗಲೂ "ರಕ್ಷಿಸುವಿಕೆ" ಅಗತ್ಯವಿರುತ್ತದೆ.[43] ಕ್ರಿಸ್ತನು ನಮ್ಮನ್ನು ತಂದೆಯ ಮುಂದೆ ಈ ಮುಂಚೆ ಊಹಿಸಿಕೊಳ್ಳುವದಕ್ಕೂ ಸಾಧ್ಯವಿಲ್ಲದ ರೀತಿಯಲ್ಲಿ ನಿಲ್ಲಿಸುವನು: "ಆತನು ಎಡವಿಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿದ್ದಾನೆ" (ಯೂದನು 24). ಆತನು ನಮಗೋಸ್ಕರ ವಿಜ್ಞಾಪನೆ ಮಾಡುವದು ನಮಗೆ ನಿರಂತರವಾಗಿ ಸಹಾಯದ ಮೂಲವಾಗಿರುತ್ತದೆ.

NASB ಅನುವಾದಕರು ನಾವು ಎಷ್ಟರ ಮಟ್ಟಿಗೆ ರಕ್ಷಿಸಲ್ಪಟ್ಟಿದ್ದೇವೆಂಬುದನ್ನು ಬಣ್ಣಿಸುವದಕ್ಕೆ "ಸದಾಕಾಲವೂ" (παντελής, *pantelēs*) ಎಂಬ ಪದವನ್ನು ಆರಿಸಿಕೊಂಡರು, ಆದರೆ NKJV ಮತ್ತು ASV ತರ್ಜುಮೆಗಳು "ಕಟ್ಟ ಕಡೆಯ ತನಕ" ಎಂಬದಾಗಿ ಹೇಳುತ್ತವೆ. ಕ್ರಿಸ್ತನು ಕೆಲಸವನ್ನು ಅರ್ಧದಲ್ಲಿಯೇ ಬಿಟ್ಟು ಬಿಡುವದಿಲ್ಲ, ಆದರೆ ನಮಗೆ ಆತನ ಶಕ್ತಿಯ ಅಗತ್ಯತೆಯು ಇರುವಷ್ಟು ಕಾಲ ಮುಂದುವರೆಸುವವನಾಗಿದ್ದಾನೆ. ಈ ಕಾರಣಕ್ಕಾಗಿ ಆತನು ನಮಗೋಸ್ಕರ ವಿಜ್ಞಾಪನೆ ಮಾಡುತ್ತಾನೆ. ಆತನ ವಿಜ್ಞಾಪನೆಯ ಕೆಲಸದ ಬಗ್ಗೆ ಪೌಲನು ಒತ್ತಿ ಹೇಳಿದನು (ರೋಮಾ 8:33, 34). ನಮಗೆ ಈ ಮಹಾಯಾಜಕನ ಅಗತ್ಯವಿದೆ ಯಾಕೆಂದರೆ, ಆತನು "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರಲಾರರು" ಎಂದು ಆತನು ಹೇಳಿದನು (ಯೋಹಾನ 14:6). ಕ್ರಿಸ್ತನು ನಮ್ಮ ವಿಜ್ಞಾಪನೆಗಾರನು ಎಂದು ಹೇಳಿಕೊಳ್ಳುವದು ಶಾಸ್ತ್ರಗಳಲ್ಲಿರುವ ಅತ್ಯಂಥ ಶ್ರೇಷ್ಠವಾದ ಹೇಳಿಕೆಗಳಲ್ಲೊಂದಾಗಿದೆ.

ರೋಮಾ 8:33, 34ರ ಮಾತುಗಳು "ಆದಿ ಕ್ರೈಸ್ತರ ಒಂದು ನಂಬಿಕೆಯ ಅರಿಕೆಯನ್ನು ಪ್ರತಿಧ್ವನಿಸುತ್ತದೆ" ಅದು ಯೇಸುವಿನ ಮರಣ, ಪುನರುತ್ಥಾನ, ಸಿಂಹಾಸನಕ್ಕೇರಿಸ ಲ್ಪಡುವಿಕೆ, ಮತ್ತು ವಿಜ್ಞಾಪನೆಯ ಕೆಲಸಗಳ ಬಗ್ಗೆ ಸಾಕ್ಷಿ ಕೊಡುತ್ತದೆ ಎಂದು Bruce ಅಭಿಪ್ರಾಯ ಪಡುತ್ತಾನೆ.[44] ಖಂಡಿತವಾಗಿಯೂ, ಪರಲೋಕದಲ್ಲಿ ನಮ್ಮ ಅಗತ್ಯತೆಗಳನ್ನು ನೋಡಿಕೊಳ್ಳುವ ಅಂಥ ಸಹಭಾಗಿಯು ಇರುವದಕ್ಕೆ ಕ್ರೈಸ್ತರು ಹೆಚ್ಚಳಪಟ್ಟುಕೊಳ್ಳಬಹುದು. ಈ ಕೆಲಸವು ಯೆಶಾಯ 53:12ರಲ್ಲಿ ಮುಂತಿಳಿಸಲ್ಪಟ್ಟಿತು. ಕ್ರಿಸ್ತನಲ್ಲಿ ದೇವರ ಸಮೀಪಕ್ಕೆ ಬರುವವರಿಗೆ ಆಶ್ಚರ್ಯಕರವಾದ ಮಹಾನ್ ಆಶೀರ್ವಾದಗಳು ಕಾಯ್ದಿರಿಸಲ್ಪಟ್ಟಿವೆ. ಲೇವಿಕ ಯಾಜಕರು ತನ್ನ ಕೆಲಸದ ಮೂಲಕವಾಗಿ ಇದನ್ನು ಸಂಭವಿಸುವಂತೆ ಮಾಡಿರುವದಕ್ಕೆ ಸಾಧ್ಯವಿರಲಿಲ್ಲ. ಬಳಲಿದವರಿಗೆ ವಿಶ್ರಾಂತಿ ಇರುತ್ತದೆ (ಮತ್ತಾಯ 11:28-30), ಮತ್ತು ತಂದೆಯಾದ ದೇವರ ಬಳಿಗೆ ಹೋಗುವದಕ್ಕೆ ದಾರಿಯು ತೆರೆಯಲ್ಪಟ್ಟಿರುವ ಧೈರ್ಯವಿರುತ್ತದೆ (ಯೋಹಾನ 14:6). ಬೇರೆ ಇನ್ನಾವ ದಾರಿಯೂ ಒದಗಿಸಲ್ಪಟ್ಟಿರುವದಿಲ್ಲ.

**ವಿಜ್ಞಾಪನೆ** ಎಂದು ಅನುವಾದಿಸಲ್ಪಟ್ಟಿರುವ ಪದವು ἐντυγχάνω (*entugchanō*) ಈ ಪತ್ರಿಕೆಯೊಳಗೆ ಬೇರೆ ಇನ್ನೆಲ್ಲಿಯೂ ಸಿಕ್ಕುವದಿಲ್ಲ, ಆದರೆ ಇದು ಪವಿತ್ರಾತ್ಮನು ಹಾಗೂ ಕ್ರಿಸ್ತನು ವಿಜ್ಞಾಪನೆ ಮಾಡುವರೆಂಬ ವಿಷಯದಲ್ಲಿ ಪೌಲನು ಅದನ್ನು ಬಳಸಿರುತ್ತಾನೆ (ರೋಮಾ 8:26, 34). ಯೇಸುವು ಯೋಹಾನ 17:6-26ರಲ್ಲಿ ಅಪೊಸ್ತಲರಿಗೆ ಮಾಡಿದ ಕಾರ್ಯವನ್ನು ನಮಗೋಸ್ಕರ ನಿರಂತರವಾಗಿ ಮಾಡಬಲ್ಲನು. ಇದು ನಮ್ಮ ಮಾತಿಲ್ಲದ ನರಳಾಟಗಳನ್ನು

ಬೇಡಿಕೆಗಳ ದೈವಿಕ ಸಂದೇಶಗಳನ್ನಾಗಿ ಮಾರ್ಪಡಿಸಿ ದೇವರಿಂದ ಉತ್ತರ ಸಿಕ್ಕುವ ಭರವಸೆಯನ್ನುಂಟು ಮಾಡುವ ಪವಿತ್ರಾತ್ಮನ ಕಾರ್ಯಕ್ಕಿಂತಲೂ ಇದು ಒಂದು ರೀತಿಯಲ್ಲಿ ವ್ಯತ್ಯಾಸವಾದದ್ದು. ಇದು ತಮ್ಮ ಪಾಪಗಳ ದಂಡನೆಯು "ಮುಂದೂಡಲ್ಪ ಡುವಂತೆ" ಬಂದ ಆರಾಧಕರಿಗೋಸ್ಕರ ಅವರ ಯಜ್ಞಗಳೊಂದಿಗೆ ತನ್ನ ಸ್ವಂತ ವಿಜ್ಞಾಪನೆಯನ್ನು ಸೇರಿಸಿ ಯಜ್ಞಗಳನ್ನು ಅರ್ಪಿಸುತ್ತಿದ್ದ ಹಳೆಯ ಒಡಂಬಡಿಕೆಯ ಮಹಾಯಾಜಕನ ಕೆಲಸಕ್ಕೆ ಸಮಾನಾರ್ಥ ಹೊಂದಿರಬಹು ದಾಗಿದೆ.[45]

ಪೌಲ ಮತ್ತು ಇಬ್ರಿಯರಿಗೆ ಪತ್ರಿಕೆಯ ಲೇಖಕ ಇಬ್ಬರೂ ಕ್ರಿಸ್ತನ ವಿಜ್ಞಾಪನೆಯ ಕೆಲಸವನ್ನು ಕೀರ್ತನೆ 110ರೊಂದಿಗೆ ಜೋಡಿಸುತ್ತಾರೆ. ಯೆಶಾಯ 53:12 ಸಹ ಈ ಭಾವನೆಗೆ ತಳಹದಿಯೆಂದು ಕಾಣಿಸುತ್ತದೆ, ಕ್ರಿಸ್ತನನ್ನು ಅಪರಾಧಿಗಳಿಗಾಗಿ ವಿಜ್ಞಾಪನೆ ಮಾಡುವವನೆಂದು ಗುರುತಿಸುತ್ತದೆ.

**ವಚನಗಳು 26, 27.** ಪರಿಸ್ಥಿತಿಗಳಿಗೆ ಅಗತ್ಯವಾಗುವಂತೆ, ಪಾಪದಿಂದ ಸಂಪೂರ್ಣವಾಗಿ ಮುಕ್ತನಾಗಿರುವ ಅಂತಹ ಒಬ್ಬ **ಮಹಾಯಾಜಕನು** ನಮಗೆ ಕೊಡಲ್ಪಡುವದು ಸೂಕ್ತವಾಗಿತ್ತು. ಆತನು **ಪರಿಶುದ್ಧನು** (ὅσιος, *hosios*) ಆಗಿರಬೇಕಿತ್ತು, ಅಂದರೆ "ನಿಷ್ಠೆ, ಭಕ್ತಿ, ದೇವರಿಗೆ ಮೆಚ್ಚಿಕೆಯಾದವನು."[46] ಈ ಪದವು "ಯಾವಾಗಲೂ ದೇವರಿಗೆ ತನ್ನ ಕೆಲಸವನ್ನು ನಂಬಿಗಸ್ತನಾಗಿಯೂ ಕರಾರುವಾಕ್ಕಿ ನಿಂದಲೂ ಮಾಡುವ ಮನುಷ್ಯನನ್ನು ಬಣ್ಣಿಸುತ್ತದೆ."[47] ಹಳೆಯ ಒಡಂಬಡಿಕೆಯ ಒಬ್ಬ ಯಾಜಕನು ಪರಿಶುದ್ಧನಾಗಿರಬೇಕಿತ್ತು ಯಾಕೆಂದರೆ ಅಂಥ ವ್ಯಕ್ತಿಯು ಮಾತ್ರವೇ ದೇವಾಲಯವನ್ನು ಪ್ರವೇಶಿಸುವದಕ್ಕೆ ಶಕ್ತನಾಗುತ್ತಿದ್ದನು. ಆತನು ಕೇವಲ ಒಂದು ಆರಾಧನಾ ವಿಧಿಯನ್ನು ಸಮರ್ಪಕವಾಗಿ ನಡಿಸುವವನು ಮಾತ್ರವೇ ಆಗಿರದೆ, ಹೃದಯದಲ್ಲಿ ನಿರ್ಮಲನಾಗಿರಬೇಕಿತ್ತು. ಯೇಸುವು ಪಾಪದ ಕಲೆಗಳಿಲ್ಲದವನಾಗಿದ್ದನು, ಮತ್ತು ನಾವು ಸಹ ಹಾಗೆಯೇ ಇರತಕ್ಕದ್ದು. ಯೇಸುವನ್ನು "ಪರಿಶುದ್ಧನು" ಎಂದು ಗುರುತಿಸುವದರಲ್ಲಿ ಪೇತ್ರ ಮತ್ತು ಪೌಲ ಇಬ್ಬರೂ ಕೀರ್ತನೆ 16:10ನ್ನು ಉಲ್ಲೇಖಿಸುತ್ತಾರೆ (ಅಪೊಸ್ತಲರ ಕೃತ್ಯಗಳು 2:27; 13:35). ನಮಗೆ ಅಗತ್ಯವಿರುವ ಎಲ್ಲಾ ಅರ್ಹತೆಗಳನ್ನು ಆತನೊಬ್ಬನನೇ ಸಂಧಿಸುತ್ತಾನೆ. ಕ್ರೈಸ್ತರು ಪರಿಶುದ್ಧರಾಗಿರಬೇಕು, ಆದರೆ ನಮ್ಮನ್ನು "ಪವಿತ್ರ ಮಾಡುವ" (ಇಬ್ರಿಯ 2:11), ಅಥವಾ ಪರಿಶುದ್ಧಗೊಳಿಸುವ ಕ್ರಿಸ್ತನ ಮೂಲಕ *ಮಾತ್ರವೇ* ಇದನ್ನು ಸಾಧಿಸಬಲ್ಲೆವು.

ನಮ್ಮ ಕರ್ತನು **ನಿರ್ದೋಷಿಯು** (ἄκακος, *akakos*), ಅಥವಾ ಮನುಷ್ಯನೊಂದಿಗಿನ ತನ್ನ ವ್ಯವಹಾರಗಳಲ್ಲೆಲ್ಲಾ ಕೆಡುಕುತನವಿಲ್ಲದವನು ಆಗಿದ್ದಾನೆ. ಯೇಸುವು ಹಗೆತನ ಅಥವಾ ದ್ವೇಸದಿಂದ ಮುಕ್ತವಾದ ಜೀವಿತವೊಂದನ್ನು ತೋರ್ಪಡಿಸಿದನು; ಆತನು ಎಲ್ಲರಿಗೂ ದಯೆಯುಳ್ಳವನೂ ಉಪಕಾರಿಯೂ ಆಗಿದ್ದನು. ಆತನು ಯಾವದು ಒಳ್ಳೇದೋ ಅದನ್ನು ಮಾತ್ರವೇ ಮಾಡಿದನು. ಹಣ ವಿನಿಮಯಗಾರರನ್ನು ದೇವಾಲಯದಿಂದ ಓಡಿಸುವದರಲ್ಲಿ ಆತನು ಕೇವಲ ಅದನ್ನು "ಶುದ್ಧಗೊಳಿಸುತ್ತಿದ್ದನು" ಅಷ್ಟೆ, ಅದು ಖಂಡಿತವಾಗಿಯೂ ಒಳ್ಳೇದಾಗಿತ್ತು. ಆತನ ಕ್ರಿಯೆಯು ಕಳ್ಳತನದ ವಿಷಯದಲ್ಲಿ ಒತ್ತಾಯಪೂರ್ವಕವಾಗಿ ಗಮನವನ್ನು ಕೊಡುವಂತೆ ಮಾಡಿತ್ತು (ಯೋಹಾನ 2:14, 15). ಬಹುಶಃ ಅದರ ಫಲಿತವಾಗಿ ಕೆಲವರಲ್ಲಿ ಪಶ್ಚಾತ್ತಾಪ ಉಂಟಾಗಿರಬಹುದಾಗಿದೆ.

**ನಿಷ್ಕಳಂಕನು** (ἀμίαντος, *amiantos*) ಎಂಬ ಪದವು ಯೇಸುವಿನಲ್ಲಿ ಯಾವದೇ ನೈತಿಕ ಅಶುದ್ಧತೆಯು ಇರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಈ ಪದವು ಶಾರೀರಿಕವಾಗಿ ನಿರ್ಮಲರಾಗಿರುವದಕ್ಕೆ ಬಳಸಬಹುದಾಗಿದೆ; ಯಾಜಕರು ಯಾವದೇ ಹೊರಗಿನ ಕಳಂಕ ಹೊಂದಿರದವರಾಗಿರುವದು ಅಗತ್ಯವಾಗಿತ್ತು. ನೈತಿಕ ನಿರ್ಮತೆಯನ್ನು ಹೊಂದಿರುವದು ಇನ್ನು ಎಷ್ಟೋ ಪ್ರಾಮುಖ್ಯವಾದದ್ದು! ನಿಷ್ಕಳಂಕವಾಗಿರುವದೆಂದರೆ ಲೇವಿಕ ಕ್ರಮದಲ್ಲಿರು ವವರು

ಮಾಡಬೇಕಾಗಿದ್ದ ಧಾರ್ಮಿಕ ಆಚಾರಿಕ ಹೊಲೆಯನ್ನು ಮಾಡುವದರಿಂದ ದೂರವಿದ್ದನೆಂದಷ್ಟೆ ಅರ್ಥವಾಗಿರುವದಿಲ್ಲ, ಆದರೆ ಆತನು ಸಂಪೂರ್ಣವಾಗಿ ಯಾವದೇ ನೈತಿಕ ಹೊಲೆಯಿಲ್ಲದವನಾಗಿದ್ದನು. ಯಾಜಕರು ಪಾಪದ ಕಲೆಯನ್ನು ಹೊಂದಿದ್ದರು, ಮತ್ತು ಆ ಮೂಲಕ ಹೊಲೆಯಾಗಿದ್ದರು, ಆದರೆ ನಮ್ಮ ರಕ್ಷಕನು ಹೊಲೆಯಾಗದವ ನಾಗಿರುವದು **ಯುಕ್ತವಾಗಿದೆ**. ನಮ್ಮ ಜೀವಿತಗಳು ಸಹ ಪಾಪಿಗಳ ಜೀವಿತಗಳಿಗಿಂತ ಭಿನ್ನವಾಗಿರತಕ್ಕದ್ದು; ಕೆಲವು ಸಾರಿ ನಾವು ದೈಹಿಕವಾಗಿ ಮಾತ್ರವಲ್ಲದೆ ನೈತಿಕವಾಗಿ ಸಹ ಪ್ರತ್ಯೇಕವಾಗಿರಬೇಕಾದ ಅಗತ್ಯವಿದೆ (2 ಕೊರಿಂಥ 6:14-7:1).

ಯೇಸುವು **ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನು** ಆಗಿದ್ದನು, ಅದೇ ವೇಳೆಯಲ್ಲಿ ತನ್ನ "ಸಹೋದರರ" ಸಂಗಡ ಗುರುತಿಸಿಕೊಂಡವನಾಗಿಯೂ ಉಳಿದನು (2:11-18). ಆತನು ನಮಗೆ ನಿಕಟವಾಗಿದ್ದಾನೆ, ಆದರೂ ಲೋಕದ ಕೆಟ್ಟತನಕ್ಕೆ ದೂರವಾಗಿದ್ದಾನೆ. ಆತನು ಭೂಮಿಯ ಮೇಲಿರುವಾಗ ಎಲ್ಲಾ ವಿಧವಾಗ ಜನರೊಂದಿಗೆ ಮುಕ್ತ ಮನಸ್ಸಿನಿಂದ ಅನ್ಯೋನ್ಯವಾಗಿದ್ದನು, ಆದಾಗ್ಯೂ "ಅಂಧಕಾರ" ಎಂದು ಬಣ್ಣಿಸಲಾಗಿರುವ ಜೀವನ ರೀತಿಯಿಂದ "ಪ್ರತ್ಯೇಕವಾಗಿ" ಉಳಿದನು.[48]

ಅತನಂತಲ್ಲದೆ, ನಾವು ಕೆಲವು ಸಾರಿ ಅಂಧಕಾರಕ್ಕೆ ಬಲಿಯಾಗುತ್ತೇವೆ. ನಾವು ಪಾಪ ಮಾಡಿದಾಗ, ನಾವು ನಮ್ಮ ಪಾಪಗಳನ್ನು ದೇವರಿಗೆ ಅರಿಕೆ ಮಾಡಬೇಕು ಮತ್ತು ನಮ್ಮ ಕರ್ತನ ಕರುಣೆಯ ಮೂಲಕ ಕ್ಷಮಾಪಣೆಯನ್ನು ಕೋರಬೇಕು. ಈ ವಿಧದಲ್ಲಿ, ನಾವು ನಿರಂತರವಾಗಿ "ಬೆಳಕಿನಲ್ಲಿ ನಡೆಯಬಹುದು" (ನೋಡಿರಿ 1 ಯೋಹಾನ 1:7-10), ನಿರಂತರವಾಗಿ ಯೇಸುವಿನ ರಕ್ತದಿಂದ ತೊಳೆಯಲ್ಪಡುತ್ತೇವೆ.

27ನೇ ವಚನವು **ಮೊದಲು ತಮ್ಮ ಪಾಪಪರಿಹಾರಕ್ಕಾಗಿ ಸಮರ್ಪಣೆ ಮಾಡುವ ಮಹಾಯಾಜಕರಂತೆ** ಎಂದು ಸೇರ್ಪಡೆಗೊಳಿಸುತ್ತದೆ, ಕ್ರಿಸ್ತನ ವಿಷಯದಲ್ಲಿ ಅದು ಸತ್ಯವಾಗಿರುವದಿಲ್ಲ. ದೋಷಪರಿಹಾರಕ ದಿನದಂದು ಮಹಾಯಾಜಕನು ಹೀಗೆ ಪ್ರಾರ್ಥಿಸುವನು,

> ಓ ದೇವರೇ, ನಾನು ದುಷ್ಟತನ ನಡಿಸಿದ್ದೇನೆ, ಅಪರಾಧ ಮಾಡಿದ್ದೇನೆ, ಮತ್ತು ನಿನ್ನ ಮುಂದೆ ನಾನು ಮತ್ತು ನನ್ನ ಮನೆಯವರು ಪಾಪ ಮಾಡಿದ್ದೇವೆ. ಓ ದೇವರೇ, ನಾನು ಮಾಡಿರುವ ದುಷ್ಟತನಗಳನ್ನು ಮತ್ತು ಅಪರಾಧಗಳನ್ನು ಕ್ಷಮಿಸು ಮತ್ತು ನಿನ್ನ ದಾಸನಾದ ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದಿರುವಂತೆ ನಾನು ನನ್ನ ಮನೆಯವರು ಮಾಡಿದ ಪಾಪವನ್ನು ಕ್ಷಮಿಸು . . .[49]

ಯೇಸು ಆ ವಿಧವಾದ ಯಾವದನ್ನೂ ಹೇಳಲಿಲ್ಲ, ಯಾಕೆಂದರೆ ಆತನು ಪಾಪರಹಿತನಾಗಿದ್ದನು.

ಕ್ರಿಸ್ತನು ನಿಜವಾಗಿಯೂ ನಮ್ಮ "ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿ" ಆಗಿರುತ್ತಾನೆ (1 ಪೇತ್ರ 1:19). ಆತನ ಮೂಲಕವಾದ ನಮ್ಮ ವಿಮೋಚನೆಯು ಎಷ್ಟೊಂದು ಉತ್ತಂಗವಾದದ್ದು ಮತ್ತು ಅದ್ಭುತಕರವಾದದ್ದೆಂದರೆ ನಾವು ಸಹ ಪಾಪದಿಂದ ಕಳಂಕಿತರಾಗದೆ ಇರುತ್ತೇವೆ. ಆತನು "ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನು" (ವ. 26) ಯಾಕೆಂದರೆ ಆತನು ಪಾಪರಹಿತವಾಗಿದ್ದಾನೆ (4:15). ಆದಕಾರಣ ಆತನು ಯಾವದೇ ಮಾನವ ಜೀವಿಗಿಂತಲೂ ಎಷ್ಟೋ ಎತ್ತರದಲ್ಲಿದ್ದಾನೆ **ಮತ್ತು ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನು** (ವ. 26). ಆತನು ಪರಲೋಕದ ನಿವಾಸಿಗಳಿಗಿಂತ, ದೇವದೂತರಿಗಿಂತ ಉನ್ನತವು. ಇದು ಸ್ವಾಭಾವಿಕವಾಗಿಯೇ ಸತ್ಯವಾದದ್ದು ಯಾಕೆಂದರೆ ಸಮಸ್ತವೂ ಆತನಿಗೆ ಅಧೀನಪಡಿಸಲ್ಪಟ್ಟಿದೆ (ಎಫೆಸ 1:22, 23). ಆತನು ಉನ್ನತ್ತಕ್ಕೇರಿಸಲ್ಪಟ್ಟಿದ್ದರಲ್ಲಿ ಆತನನ ಪುನರುತ್ಥಾನ,

ಪರಲೋಕಾರೋಹಣ, ಮತ್ತು ಮಹಿಮೆಕರಣಗಳು ಸೇರಿರುತ್ತವೆ. “ಅದು ಮೇಲಿನ ದೇವಸಾನಿಧ್ಯದಲ್ಲಿ ನಮ್ಮ ಸದಾಕಾಲವೂ ಜೀವಿಸುವ ನಮ್ಮ ಮಹಾಯಾಜಕನ ಸರ್ವೋಚ್ಛವಾದ ಪರಿಪೂರ್ಣತೆಯನ್ನು ವರ್ಣಿಸುತ್ತದೆ.”[50] ಆತನು ದೇವರೊಂದಿಗೆ ಪರಲೋಕದಲ್ಲಿ ಆಳ್ವಿಕೆ ಮಾಡುತ್ತಾನೆ ಮತ್ತು ಆ ಮೂಲಕ ಆತನು “ಆಕಾಶಮಂಡಲಗಳಿಗಿಂತ” ಉನ್ನತನಾಗಿರುವದು ಸ್ಪಷ್ಟವಾಗಿರುತ್ತದೆ. ಆತನ ಸ್ಥಾನವು ಈಗ ಇಂದ್ರಿಯ ಮಿತಿಗಳನ್ನು ಮೀರಿ ಇರುತ್ತದೆ; ಅಂದರೆ, ನಾವು ಅದನ್ನು ನಂಬಿಕೆಯಿಂದ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಗಮನಿಸುವದರ ಮೂಲಕ ಅಥವಾ ಶಾರೀರಿಕ ಅನುಭವದ ಮೂಲಕ ಅದನ್ನು “ಇಂದ್ರಿಯ ಅನುಭವ” ಮಾಡುವದಿಲ್ಲ.

ಮಹಾಯಾಜಕನು ಕೇವಲ ದೋಷಪರಿಹಾರಕ ದಿನದಂದು ಮಾತ್ರವೇ ಸೇವೆ ಮಾಡುತ್ತಾನೆಂಬದಾಗಿ ನಾವು ಯೋಚಿಸುವ ಪ್ರವೃತ್ತಿ ತೋರುತ್ತೇವೆ (ವ. 27), ಆದರೆ ಮಹಾಯಾಜಕನು “ಪ್ರತಿ ದಿನವೂ ಇಡೀ ಜನಾಂಗದ ಪರವಾಗಿ ಪ್ರಾರ್ಥನೆಗಳನ್ನು ಮತ್ತು ಯಜ್ಞಗಳನ್ನು ಸಮರ್ಪಿಸುತ್ತಿದ್ದನು. . .” ಎಂದು Philo ಹೇಳುತ್ತಾನೆ.[51] Thomas Hewittನು ಈ ವಚನದ ಬಗ್ಗೆ ಹೀಗೆ ಹೇಳಿದ್ದು ಸರಿಯಾಗಿಯೇ ಇರಬಹುದಾಗಿದೆ, “ಲೇಖಕನು ಮಹಾಯಾಜಕನು ಮಾಡುತ್ತಿದ್ದ ವಾರ್ಷಿಕ ಯಜ್ಞಾರ್ಪಣೆ ಮತ್ತು ಯಾಜಕರು ಸಮರ್ಪಿಸುತ್ತಿದ್ದ ದೈನಂದಿನ ಯಜ್ಞಗಳನ್ನು ಒಂದಾಗಿ ಸೇರಿಸಿದ್ದಾನಷ್ಟೇ.”[52] ನಮ್ಮ ಯಜ್ಞವಾಗಿ ಯೇಸುವಿನ ಸೇವೆಯು ಪುನರಾವರ್ತಿಸುವ ಅಗತ್ಯವಿರಲಿಲ್ಲ; ಅದು **ಒಂದೇ ಸಾರಿ ಮಾಡಿ ಮುಗಿಸಿದ** ಯಜ್ಞ (ἐφάπαξ, *ephapax*; 9:12; 10:10) ಮತ್ತು “ಒಂದೇ ಸಾರಿ” (ἅπαξ, *hapax*; 9:28) ಮಾಡಲ್ಪಟ್ಟದ್ದು ಆಗಿದೆ ಎಂದು ಹೇಳಲಾಗಿರುತ್ತದೆ. ಇವುಗಳು ಇಬ್ರಿಯರಿಗೆ ಪತ್ರಿಕೆಯಲ್ಲಿನ ಮುಖ್ಯ ಪದಗಳಾಗಿವೆ. ಕ್ರಿಸ್ತನು ನಿರಂತವಾಗಿ ಯಜ್ಞಮಾಡುತ್ತಿರುವನು ಎಂಬ ಯೋಚನೆಯು ಹೊಸ ಒಡಂಬಡಿಕೆಯ ಸಂಪೂರ್ಣ ಉಲ್ಲಂಘನೆ ಮತ್ತು ತದ್ವಿರುದ್ಧತೆಯಲ್ಲಿರುತ್ತದೆ. ಹಳೆಯ ಒಡಂಬಡಿಕೆಯು ಮಹಾಯಾಜಕನು ಪದೇ ಪದೇ ಸಮರ್ಪಣೆಗಳನ್ನು ಮಾಡಿದನು, ತನ್ನ ಸ್ವಂತ ಪಾಪಕ್ಕಾಗಿ ಸಹ ಅರ್ಪಿಸುತ್ತಿದ್ದನು (ಯಾಜಕಕಾಂಡ 16:6, 11); ಆದರೆ ಕ್ರಿಸ್ತನ ಸಮರ್ಪಿಸುವಿಕೆಯು “ಒಂದೇ ಸಾರಿ ಮಾಡಿ ಮುಗಿಸಿದ” ಕಾರ್ಯವಾಗಿತ್ತು. ಬೇರೆಯವರಿಗೋಸ್ಕರ ಮತ್ತೊಬ್ಬರು ಸಾಯುವ ಯೋಚನೆಯು ಯೆಹೂದ್ಯರಲ್ಲಿ ಈಗಾಗಲೇ ಅಂಗೀಕರಿಸಲ್ಪಟ್ಟ ವಿಚಾರವಾಗಿತ್ತು ಯಾಕೆಂದರೆ “Maccabaean ದಿನಗಳ ರಕ್ತಸಾಕ್ಷಿಗಳು ತಾವು ಜೊತೆಯ ಇಸ್ರಾಯೇಲ್ಯರ ಪರವಾಗಿ ಒಂದು ದೋಷಪರಿಹಾರಕವೆಂದು ಅಂಗೀಕರಿಸಲ್ಪಡುವವೆಂಬ ದೃಢವಿಶ್ವಾವುಳ್ಳವರಾಗಿ ತಮ್ಮ ಜೀವಗಳನ್ನು ಒಪ್ಪಿಸಿಕೊಂಡಿದ್ದರು . . .”[53] ಯೇಸು **ತನ್ನನ್ನೇ ಸಮರ್ಪಿಸಿಕೊಂಡನು**, ಅದು ಆತನ ಮತ್ತು ಲೇವಿ ಕುಲದ ಸಾಮಾನ್ಯ ಯಾಜರ ನಡುವಿನ ಇನ್ನೊಂದು ವ್ಯತ್ಯಾಸವಾಗಿತ್ತು. ಈ ವಿರುದ್ಧ ಹೋಲಿಕೆಯನ್ನು ಮೊದಲ ಬಾರಿಗೆ 7:27ರಲ್ಲಿ ಮಾಡಲಾಗಿರುತ್ತದೆ, ಆದರೆ ಇಬ್ರಿಯರಿಗೆ ಪತ್ರಿಕೆಯ ನಂತರದ ಭಾಗದಲ್ಲಿ ವಿಸ್ತಾರವಾಗಿ ತಿಳಿಸಲ್ಪಟ್ಟಿರುತ್ತದೆ.

**ವಚನ 28.** ಹಳೆಯ ಒಡಂಬಡಿಕೆಯ **ಯಾಜಕರು** ನಿರ್ಬಲತೆಗಳನ್ನು ಅಥವಾ ಬಲಹೀನತೆಗಳನ್ನು (5:2) ಹೊಂದಿದ್ದರು. ಕ್ರಿಸ್ತನಲ್ಲಿ ನಾವು ಆದರ್ಶವಾದ ಯಾಜಕತ್ವವನ್ನು ಹೊಂದಿದ್ದೇವೆ. 28ನೇ ವಚನವು ಮುಂಚಿನ ಎರಡು ವಚನಗಳ ಸಾರಾಂಶವಾಗಿರುತ್ತದೆ. ಹಳೆಯ ಒಡಂಬಡಿಕೆಯ ಯಾಜಕರು **ದುರ್ಬಲರಾಗಿದ್ದರು**, ಪಾಪಭರಿತರಾಗಿದ್ದರು, ಮತ್ತು ಮರಣ ಹೊಂದುವವರಾಗಿದ್ದರು. ಕೆಲವರು ವ್ಯರ್ಥವಾದವರು ಮತ್ತು ಗರ್ವಿಷ್ಠರು ಆಗಿದ್ದರು. ಕ್ರಿಸ್ತನಲ್ಲಿ ಇವುಗಳೊಳಗೆ ಯಾವ ಗುಣಸ್ವಭಾವವೂ ಇರಲಿಲ್ಲ; ಆತನು ಭೂಲೋಕದಲ್ಲಿನ ಜೀವನದ ವೇಳೆಯಲ್ಲಿ ಆತನ ಮೇಲೆ ಹೊರಸಲಾಗಿದ್ದ ಸಕಲ ಮಾನವ ಬಲಹೀನತೆಗಳ ಮೇಲೆ ಮತ್ತು ನಮ್ಮಂತಹ ಸ್ವಭಾವದ ಮೇಲೆ ಜಯ ಸಾಧಿಸಿದ್ದಾನೆ. “ದುರ್ಬಲ” ಎಂಬ ಪದವು

ಬಲಹೀನತೆಯಿಂದ ಮಾಡಲ್ಪಟ್ಟ ಪಾಪ ಹಾಗೂ ಬೇಕೆಂದು ಮಾಡಿದ ಪಾಪಗಳ ನಡುವೆ ವ್ಯತ್ಯಾಸವನ್ನು ಸೂಚಿಸುತ್ತಿರಬಹುದಾಗಿದೆ. "ಉದ್ದೇಶಪೂರ್ವಕವಾಗಿ ಪಾಪ ಮಾಡಿದ ಒಬ್ಬ ಮಹಾಯಾಜಕನು ಹುದ್ದೆಯಲ್ಲಿ ಉಳಿಯುವದಕ್ಕೆ ಸಾಧ್ಯವಿರಲಿಲ್ಲ."[54]

ಕೀರ್ತನೆ 2:7 ಮತ್ತು 110:4, ಎರಡು ಪ್ರಮುಖ ಪ್ರವಾದನೆಗಳ ಆಲೋಚನೆಗಳನ್ನು ಇಲ್ಲಿ ಒಂದುಗೂಡಿಸಲಾಗಿದೆ, ಯಾಕೆಂದರೆ ಕ್ರಿಸ್ತನು ನಮ್ಮ **ಸಂಪೂರ್ಣನಾಗಿರುವವನು**. ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಟ್ಟು ದೀರ್ಘಕಾಲದ ಬಳಿಕ ಬರೆಯಲ್ಪಟ್ಟದ್ದಾಗಿದ್ದು, ಕೀರ್ತನೆ 110:4 ಹೀಗೆ ಹೇಳುತ್ತದೆ, "ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು ಎಂದು ಯೆಹೋವನು ಆಣೆಯಿಟ್ಟು ನುಡಿದಿದ್ದಾನೆ; ಪಶ್ಚಾತ್ತಾಪಪಡುವದಿಲ್ಲ." ಹಳೆಯ ವ್ಯವಸ್ಥೆಯು ಬದಲಿಸಲ್ಪಡುವದು ಎಂಬುದನ್ನು ಈ ಹೇಳಿಕೆಯು ಖಡಾಖಂಡಿತವಾಗಿ ತೀಳಿಸುತ್ತದೆ. ಆ ಧರ್ಮಶಾಸ್ತ್ರ ಮತ್ತು ಯಾಜಕತ್ವಗಳು ಬೇರ್ಪಡಿಸಲಾರದವುಗಳಾಗಿದ್ದವು ಮತ್ತು ಪುನಃ ಸ್ಪಷ್ಟವಾದ ರೀತಿಯಲ್ಲಿ ಸೂಚಿಸಲ್ಪಟ್ಟ ಪ್ರಕಾರ ಒಟ್ಟಾಗಿ ರದ್ದುಗೊಂಡವು. **ಧರ್ಮಶಾಸ್ತ್ರದ ತರುವಾಯ ಆಣೆ . . .** ಬಂದಿತು ಮತ್ತು ನಿಜವಾದ ಅರ್ಥದಲ್ಲಿ ಧರ್ಮಶಾಸ್ತ್ರದ ಭಾಗವಾಗಿರಲಿಲ್ಲ. ಹೀಗೆ ಕೀರ್ತನೆ 110:4ರಲ್ಲಿ ಪ್ರಸ್ತಾಪಿಸಲಾಗಿರುವ ದೇವರ ಆಣೆಯು ಕ್ರಿಸ್ತನ ಹೊಸ ಒಡಂಬಡಿಕೆಗಾಗಿ ದಾರಿಯನ್ನು ಸಿದ್ಧಗೊಳಿಸಿತು. "ಕಾಲದ ಘಟನಾವಳಿಯು ಸ್ವತಃ ಮೋಶೆಯ ಅಧೀನದಲ್ಲಿ ಪ್ರತಿಷ್ಠಾಪನೆ ಮಾಡಲಾದ ಯಾಜಕತ್ವವು ತಾನು ಮುನ್ನೆಚ್ಚರಿಕೆ ಕೊಟ್ಟದ್ದನ್ನು ಒದಗಿಸುವದಕ್ಕೆ ಅಸಮರ್ಥವಾಗಿತ್ತೆಂಬುದನ್ನು ತೋರಿಸುತ್ತದೆ."[55]

26ರಿಂದ 28 ವಚನಗಳು ಇದುವರೆಗೆ ಪತ್ರಿಕೆಯು ಚರ್ಚಿಸಿದ ಪ್ರಮುಖ ಅಂಶಗಳ ಒಂದು ಸಾರಾಂಶವನ್ನು ಕೊಡುತ್ತವೆ: ಧರ್ಮಶಾಸ್ತ್ರದ ಕೆಳಗಿನ ಯಾಜಕತ್ವವು ರದ್ದಗೊಳಿಸಲ್ಪಟ್ಟು ಪರಿಪೂರ್ಣನಾದ ಮಹಾಯಾಜಕನು, ದೇವರ **ಮಗನು** ಬಂದನು, ಆತನ ಸ್ಥಾನವನ್ನು ಬೇರೊಬ್ಬರಿಗೆ ಎಂದಿಗೂ ಕೊಡುವದಕ್ಕೆ ಸಾಧ್ಯವಿರುವದಿಲ್ಲ. 7ನೇ ಅಧ್ಯಾಯದಲ್ಲಿ ವಾದವಿವಾದದ ಒಂದು ಭಾಗವು ಇಂದು ನಮಗೆ ವಿಚಿತ್ರವೆಂದು ತೋರಬಹುದು, ಆದರೆ ಲೇಖಕನು ಆರೋನನ ಯಾಜಕತ್ವವು ಸದಾಕಾಲವೂ ಇರುತ್ತದೆಂದು ನಂಬಿದ್ದ ಇಬ್ರಿಯರಿಗೆ ಬರೆಯುತ್ತಿದ್ದಾನೆಂಬುದನ್ನು ನೆನಪಿಟ್ಟುಕೊಳ್ಳಿರಿ. ಆತನು ಶ್ರದ್ಧಾಭಕ್ತಿಯುಳ್ಳ ಇಬ್ರಿಯರಿಗೆ ಅಂಥ ಸಂದೇಶವೊಂದನ್ನು ಬರೆಯುವ ಧೈರ್ಯವನ್ನು ಮಾಡಿದನು.

## ಅನ್ವಯಿಸುವಿಕೆ

### ಶಾಸ್ತ್ರಗಳ ಅರ್ಥನಿರೂಪಣೆ ಮಾಡುವದು (7:1, 2)

ಮೆಲ್ಕಿಜೆದೇಕನು ರೊಟ್ಟಿ ಮತ್ತು ದ್ರಾಕ್ಷಾರಸಗಳೊಡನೆ ಬಂದು ಅಬ್ರಹಾಮನನ್ನು ವಂದಿಸಿದನು ಎಂದು ಆದಿಕಾಂಡ 14:18 ವರದಿ ಮಾಡುತ್ತದೆ. ಅನೇಕ ಆರಂಭಿಕ ವ್ಯಾಖ್ಯಾನಕಾರರು ಈ ವಸ್ತುಗಳನ್ನು ಕರ್ತನ ಭೋಜನದ ಮಾದರಿ ಎಂದು ಹೇಳಿದರು, ಕರ್ತನ ಭೋಜನವನ್ನು ಪ್ರತಿಷ್ಠಾಪಿಸುವ ವೇಳೆ ಯೇಸುವು ಅದೇ ವಸ್ತುಗಳನ್ನು ಬಳಸಿದನೆಂಬುದನ್ನು ಗಮನಕ್ಕೆ ತರುತ್ತಾರೆ. ಇದು Philo ಮತ್ತು ಅಲೆಗ್ಸಾಂಡ್ರಿಯನ್ ತತ್ವಸಿದ್ಧಾಂತದ ಪ್ರಕಾರವಾಗಿದ್ದು – ಶಾಸ್ತ್ರದಲ್ಲಿರುವ ಎಲ್ಲವನ್ನೂ ಒಂದು ಸಾಧೃಶ್ಯವಾಗಿ ಪರಿವರ್ತಿಸುವದು. ದೇವರ ವಾಕ್ಯವನ್ನು ಆ ರೀತಿಯಲ್ಲಿ ನಡಿಸಿಕೊಳ್ಳುವದು ಅನ್ಯಾಯಕರವಾದದ್ದು. ನಿಶ್ಚಯವಾಗಿಯೂ, ಬೈಬಲಿನಲ್ಲಿ ನಂತರದ ಸಂದರ್ಭಗಳಲ್ಲಿ ಮತ್ತು ವ್ಯಕ್ತಿಗಳಲ್ಲಿ ನೆರವೇರಿರುವಂತಹ ಮಾದರಿಗಳು ಮತ್ತು ಪ್ರತಿಮಾದರಿಗಳು, ಸಂಕೇತಗಳು ಮತ್ತು ಘಟನೆಗಳು ಇರುತ್ತವೆ. ಹೇಗೂ, ಶಾಸ್ತ್ರವು

ಅವುಗಳನ್ನು ಕೇವಲ ರೂಪಕವಾಗಿ ಅಥವಾ ಸಾಂಕೇತಿಕವಾಗಿ ಹೇಳುವದಾದರೆ ಅಥವಾ ಸೂಚ್ಯಾರ್ಥವಾಗಿ ತಿಳಿಸುವದಾದರೆ ನಾವು ಅವುಗಳನ್ನು ಹಾಗೇ ಮಾತ್ರವೇ ಪರಿಗಣಿಸಿಕೊಳ್ಳಬೇಕು. ಪೇತ್ರನು ನೀರಿನಿಂದ ನೋಹನು ರಕ್ಷಿಸಲ್ಪಟ್ಟದ್ದನ್ನು ದೀಕ್ಷಾಸ್ನಾನದ ಒಂದು ಅನುರೂಪ ಎಂದು ಬಳಸಿದನು (1 ಪೇತ್ರ 3:20, 21). ಪೌಲನು ಇಸ್ರಾಯೇಲ್ಯರ ಆರಂಭಿಕ ಇತಿಹಾಸವನ್ನು ಕೊರಿಂಥದ ಕ್ರೈಸ್ತರಿಗೆ ಒಂದು ಪಾಠವಾಗಿ ಬಳಸಿದನು (1 ಕೊರಿಂಥ 10:1-12). ಹಳೆಯ ಒಡಂಬಡಿಕೆಯಡಿಯಲ್ಲಿ ಸಮರ್ಪಿಸಲಾದ ಪ್ರತಿಯೊಂದು ಕುರಿಯು, ದೇವರ ಕುರಿಮರಿಯಾಗಿರುವ ಕ್ರಿಸ್ತನಿಗೆ ಒಂದು ಸಂಕೇತ ಅಥವಾ ಅನುರೂಪ ಎಂದು ಕರೆಯಲ್ಪಡಬಹುದು (ನೋಡಿರಿ ಯೋಹಾನ 1:29). ಇಬ್ರಿಯ 8:2, 5 ವಚನಗಳು ಭೂಲೋಕದ ಆಲಯವು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವಾಗಿದ್ದು ಅಲ್ಲಿ ಯೇಸು ತನ್ನ ಮಹಾಯಾಜಕತ್ವದ ಕೆಲಸವನ್ನು ಮಾಡುತ್ತಾನೆಂಬುದನ್ನು ತೋರಿಸುತ್ತವೆ.

ಹೇಗೂ, ಒಬ್ಬನು ಪ್ರತಿಯೊಂದು ಮಾತು, ಯೋಚನೆ, ಮತ್ತು ಘಟನೆಯನ್ನು ಒಂದು ಪ್ರತಿರೂಪ ಎಂದು ಅರ್ಥೈಸಿಕೊಳ್ಳುವದಾದರೆ, ಆತನು ಶೀಘ್ರವೇ ಶಾಸ್ತ್ರಗಳನ್ನು ಅರ್ಥವಿಲ್ಲದವುಗಳನ್ನಾಗಿ ಮಾಡುತ್ತಾನೆ. ಕೆಲವರು "ಬೈಬಲನ್ನು ಬಳಸಿಕೊಂಡು ನೀವು ಏನನ್ನಾದರೂ ಸಾಭಿತುಪಡಿಸಬಹುದು" ಎಂದು ಹೇಳುವದರಲ್ಲಿ ಆಶ್ಚರ್ಯವೇನಿಲ್ಲ. ನಾವು ಸಾರುವ ಮತ್ತು ಬೋಧಿಸುವ ವೇಳೆ, ಒಂದು ವಚನವು ಯಾವ ಅರ್ಥ ಕೊಡಬೇಕೆಂಬುದಕ್ಕಾಗಿ ಇರುತ್ತದೋ ಅದನ್ನು ಬಿಟ್ಟು ಆ ವಚನವು ಬೇರೆ ಅರ್ಥವನ್ನು ಕೊಡುವ ರೀತಿಯಲ್ಲಿ ಪ್ರಯತ್ನಿಸುವ ಅಪರಾಧ ಮಾಡದಿರೋಣ.

ಇನ್ನೊಂದೆಡೆಯಲ್ಲಿ, ದೇವರ ಪ್ರಕಟನೆಯ ಪ್ರತಿಯೊಂದು ವಾಕ್ಯವು ಮಹತ್ವಪೂರ್ಣವಾದದ್ದೆಂಬುದನ್ನು ನಾವು ಗುರುತಿಸಬೇಕು. ಯಾವ ಪದವೂ ಅರ್ಥವಿಲ್ಲದ್ದಾಗಿರುವದಿಲ್ಲ. ಪ್ರತಿಯೊಬ್ಬ ಕ್ರೈಸ್ತನು ಶಾಸ್ತ್ರಗಳನ್ನು ಜಾಗರೂಕತೆಯಿಂದ ವಿಶ್ಲೇಷಣೆ ಮಾಡುವವನಾಗಿರಬೇಕು. ಮೂಲ ಭಾಷೆಯಿಂದ ಪದಗಳ ನಿಖರವಾದ ಅರ್ಥಗಳನ್ನು ನಿರ್ಧರಿಸುವದು ಸಹಾಯಕವಾಗುತ್ತದೆ. ಸ್ವಭಾವಿಕವಾಗಿಯೇ, ಪದಗಳು ಮತ್ತು ಪದಗುಚ್ಛಗಳಿಗೆ ಅರ್ಥನಿರೂಪಣೆಯ ಅಗತ್ಯವಿರುತ್ತದೆ, ಸ್ವತಃ ಲೇಖಕರೇ ಕೆಲವು ಸಾರಿ ಅರ್ಥನಿರೂಪಣೆಗಳನ್ನು ಒದಗಿಸಿರುತ್ತಾರೆ, ಉದಾಹರಣೆಗೆ ἐφφαθά (*ephphatha*), "ತೆರೆಯಲಿ" (ನೋಡಿರಿ ಮತ್ತಾಯ 27:46; ಮಾರ್ಕ 7:34).

## ಒಂದು ದೊಡ್ಡ ಸಂಧಿಸುವಿಕೆ (7:1-10)

ಅಬ್ರಹಾಮನು ಪೂರ್ವ ದಿಕ್ಕಿನಲ್ಲಿದ್ದ ಐದು ರಾಜರನ್ನು ಸಂಹರಿಸಿ ಸೊದೋಮ ಮತ್ತು ಬಯಲು ಭೂಮಿಯಲ್ಲಿನ ಪಟ್ಟಣಗಳಲ್ಲಿ ಕೊಳ್ಳೆ ಹೊಡೆದ ಅಪಾರ ಸ್ವತ್ತುಗಳನ್ನು ಗಾಡಿಗಳಲ್ಲಿ ಅಥವಾ ಒಂಟೆಗಳ ಮೇಲೆ ಹೇರಿಕೊಂಡು ಹಿಂದಿರುಗಿ ಬಂದನು. ಸೊದೋಮಿನ ಅರಸನು ಆತನು ಆತನಿಗೆ ಪಟ್ಟಣದಲ್ಲಿ ಒಂದು ಪ್ರಧಾನ ಸ್ಥಾನವನ್ನು ಮತ್ತು ಬಹಳಷ್ಟು ಐಶ್ವರ್ಯ ಹಾಗೂ ಅಂತಸ್ತನ್ನು ಕೊಟ್ಟಿರಬಹುದಾಗಿದೆ. ಬಳಲಿದ್ದ ಅಬ್ರಹಾಮನು ಯೆರೂಸಲೇಮಿನಲ್ಲಿ ನಿಂತನು, ಅಲ್ಲಿ ಆತನಿಗೆ ನೀತಿರಾಜನು ಭೇಟಿಯಾದನು, ಆತನಿಂದ ದಣಿವಾರಿಸಲ್ಪಟ್ಟನು, ಆತನು ಅಬ್ರಹಾಮನಿಗೂ ಆತನ 318 ಸೇವಕರಿಗೂ ಮತ್ತು ಅವರ ಹಿಂದಿರುಗಿ ಕರೆ ತರಲಾಗಿದ್ದ ಸೆರೆಯಾಳುಗಳಿಗೆ ಆಗಾಧವಾದ ಸಭ್ಯತೆಯನ್ನು ತೋರಿದನು. ಮೆಲ್ಕಿಜೆದೇಕನು ಸ್ವತಃ ತಾನು ಉದ್ದೇಶಿಸಿದ್ದದಕ್ಕಿಂತಲೂ ಅತ್ಯಧಿಕವಾದದ್ದನ್ನು ಸಾಧಿಸಿದನು.

ಆಧುನಿಕ ಕಾಲಕ್ಕೆ ಅನ್ವಯಿಸಬಹುದಾದ ಈ ಸಾಧ್ಯತೆಯನ್ನು ಪರಿಗಣಿಸಿರಿ: ನಿಮಗೆ ಈಗ

ಸಿಗುತ್ತಿರುವ ಸಂಬಳಕ್ಕಿಂತಲೂ ಅಧಿಕ ಸಂಬಳವಿರುವ ಉದ್ಯೋಗವೊಂದನ್ನು ಕೊಡುತ್ತೇವೆಂದು ಹೇಳಲಾಗುತ್ತದೆ. ಧಣಿಯು ಹೀಗೆ ಹೇಳುತ್ತಾನೆ, ಏನೆಂದರೆ ಉದ್ಯೋಗವು ನಿಮ್ಮದು, ಆದರೆ ಒಂದು ಶರತ್ತು ಇರುತ್ತದೆ: "ಒಬ್ಬ ಕ್ರೈಸ್ತನಾಗಿ ನಿನ್ನ ಜೀವನವು ಎಲ್ಲರಿಗೂ ಪರಿಚಿತವಿದೆ, ಮತ್ತು ನೀನು ಈ ವ್ಯಾಪಾರವು ಯಶಸ್ಸುಗೊಳ್ಳು ವದನ್ನು ಖಾತ್ರಿಪಡಿಸುವದಕ್ಕೆ ನಿನ್ನ ತತ್ವಗಳನ್ನು ಬಗ್ಗಿಸಿಕೊಳ್ಳಬೇಕಾಗುತ್ತದೆ." ನಿಮಗೆ ಶೋಧನೆಯಾಗುತ್ತದೆ, ಮತ್ತು ನಿಮಗೊಬ್ಬ ಪ್ರೋತ್ಸಾಹಗಾರನ ಅಗತ್ಯವಿರುತ್ತದೆ. ಆಗ ಒಬ್ಬ ಉದಾತ್ತನಾದ ಮತ್ತು ಸತ್ಯವಂತನಾದ ವ್ಯಕ್ತಿ ನಿಮ್ಮ ಪಕ್ಕದಲ್ಲಿ ಬರುತ್ತಾನೆ; ಆತನ ಸ್ಥಾನವು ನೀವು ಹೊಂದಿಕೊಳ್ಳಬೇಕೆಂದು ನಿರೀಕ್ಷಿಸುವದಕ್ಕಿಂತಲೂ ಹೆಚ್ಚಿನದ್ದಾಗಿದೆ. ಆತನು ನೀತಿವಂತನು ಮತ್ತು ಮುಚ್ಚುಮರೆಯಿಲ್ಲದವನು; ಆತನು ವೈಯಕ್ತಿಕ ಲಾಭಕ್ಕಾಗಿ ಸುಳ್ಳು ಹೇಳುವಂಥ ವ್ಯಕ್ತಿಯಲ್ಲ. ಆತನ ಸಹವಾಸದಲ್ಲಿರುವದು, ಆತನ ಅನ್ಯೋನ್ಯತೆಯನ್ನು ಆನಂದಿಸುವದು, ಮತ್ತು ಆತನ ಅನುಮೋದನೆಯನ್ನು ಸ್ವೀಕರಿಸಿಕೊಳ್ಳುವದು ಶೋಧನೆಯ ಕೆಸರಿನ ಬಳಿಯಲ್ಲಿ ಒಂದು ತಾಜಾ ಗಾಳಿಯಿದ್ದಂತಿರುತ್ತದೆ. ನೀವು ಸರಿಯಾದದ್ದನ್ನೇ ಮಾಡಬೇಕೆಂದು ಬಲಗೊಳಿಸಲ್ಪಡುತ್ತೀರಿ, ಮತ್ತು ಹೀಗೆ ಆ ಕೊಡುಗೆಯನ್ನು ನಿರಾಕರಿಸುವಿರಿ.

ನಮ್ಮಲ್ಲಿ ಎಷ್ಟು ಜನರು ಇದನ್ನು ಮಾಡಲು ಶಕ್ತರು? ನಮ್ಮೆಲ್ಲರಿಗೂ ಮೆಲ್ಕಿಜೆದೇಕನ ರೀತಿಯ ಒಬ್ಬ ಮಿತ್ರನ ಅಗತ್ಯವಿರುತ್ತದೆ. ಯೇಸು ನಮಗೆ ಮಾಡುವ ರೀತಿಯಲ್ಲಿಯೇ, ಆತನು ಅಬ್ರಹಾಮನ ದಣಿವಾರಿಸಿದನು ಮತ್ತು ಚೈತನ್ಯಗೊಳಿಸಿದನು (ಇಬ್ರಿಯ 4:16).

## ಮಹತ್ವವಿರುವ ಎರಡು ಹೆಸರುಗಳು (7:1-10)

ಹೆಸರುಗಳು ಯೆಹೂದ್ಯರು ಬಹಳ ಮಹತ್ವವನ್ನು ಹೊಂದಿದ್ದವು. ಒಂದು ಹೆಸರು ಅನೇಕ ಸಾರಿ ಒಬ್ಬನ ಸ್ವಭಾವವನ್ನು, ಮಾತ್ರವಲ್ಲದೆ ಆತನ ಗುರುತನ್ನು ಬಯಲುಪಡಿಸುವದಾಗಿತ್ತು. "ಮೆಲ್ಕಿಜೆದೇಕ" ಎಂದರೆ "ನೀತಿರಾಜ," ನಿರ್ದಿಷ್ಟವಾಗಿ ಮೆಸ್ಸೀಯನಿಗೆ ಒಂದು ಉತ್ತಮ ಸಂಕೇತವಾಗಿರುತ್ತದೆ. ಯೇಸು "ನೀತಿಯನ್ನು ಪ್ರೀತಿಸಿದನು" (1:9; ಕೀರ್ತನೆ 45:6), ಮತ್ತು ಆತನು ಸಮಾಧಾನದ ಪ್ರಭುವಾಗಿದ್ದನು (ಯೆಶಾಯ 9:6). ಕ್ರಿಸ್ತನು ನಮಗೆ ಸಮಾಧಾನವಾಗಿದ್ದಾನೆ (ಎಫೆಸ 2:14); ಎಲ್ಲಾ ನಿಜವಾದ ಸಮಾಧಾನವು ಆತನಿಂದಲೇ ಹೊರಹೊಮ್ಮುತ್ತದೆ. ನಾವು ನಮ್ಮ ಚಿಂತೆಗಳನ್ನು ಆತನ ಮೇಲೆ ಹಾಕುವ ಮೂಲಕ ಅಂಥ ಸಮಾಧಾನವನ್ನು ಕಂಡುಕೊಳ್ಳಬಹುದು (ಫಿಲಿಪ್ಪಿ 4:4-8). ಆ ಸಮಾಧಾನಕ್ಕೆ ಮುಂಚೆ ನಂಬಿಕೆಯ ಮೂಲಕ ನೀತಿವಂತರೆಂಬ ನಿರ್ಣಯವು ಬರುತ್ತದೆಂಬುದನ್ನು ರೋಮಾ 5:1, 2 ತೋರಿಸುತ್ತದೆ.

ಯೇಸು ಮತ್ತು ಮೆಲ್ಕಿಜೆದೇಕರು ಏಕರೀತಿಯಾಗಿದ್ದಾರೆ, ಇಬ್ಬರೂ ಅರಸರು ಮತ್ತು ಯಾಜಕರು ಆಗಿದ್ದಾರೆ. ಹಳೆಯ ಒಡಂಬಡಿಕೆಯಲ್ಲಿ ದೇವರ ಜನರ ಅರಸರು ಯಜ್ಞಗಳನ್ನು ಅರ್ಪಿಸುವದರಲ್ಲಿ ಆರಾಧಕರಾಗಿ ಭಾಗಿಯಾಗುತ್ತಿದ್ದರಾದರೂ, ಅವರು ಆ ಧಾರ್ಮಿಕ ವಿಧಿಗಳನ್ನು ಯಾಜಕರಾಗಿ ನಡಿಸಿ ಕೊಡುವದಕ್ಕೆ ಸಾಧ್ಯವಿರಲಿಲ್ಲ. ಉಜ್ಜೀಯನು ತನಗೆ ತಾನೇ ಯಾಜಕನಾಗಿ ನಡೆದುಕೊಳ್ಳಲು ಪ್ರಯತ್ನಿಸಿದನು ಮತ್ತು ಅದಕ್ಕೆ ದಂಡನೆಯನ್ನು ಅನುಭವಿಸಿದನು (2 ಪೂರ್ವಕಾಲವೃತ್ತಾಂತ 26:16–21). ಆತನು ಸೌಲನಿಂದ ಪಾಠವನ್ನು ಕಲಿತಿರಬೇಕಾಗಿತ್ತು (1 ಸಮುವೇಲ 13:2–14; 15:10–35). ಯೇಸುವಿಗೆ ಮುಂಚೆ "ಯಾವ ಅರಸನು ಯಾಜಕನಾಗಬಾರದು" ಎಂಬ ನಿಯಮಕ್ಕೆ ಹೊರತಾದವನೆಂದು ದಾಖಲಿಸಲ್ಪಟ್ಟವರಲ್ಲಿ ಮೆಲ್ಕಿಜೆದೇಕನು ಮಾತ್ರವೇ ಆಗಿದ್ದಾನೆ. ಖಂಡಿತವಾಗಿಯೂ,

ಮೂಲಪಿತೃಗಳ ಯುಗದಲ್ಲಿ ಇನ್ನು ಕೆಲವರು ಇದ್ದಿರಬಹುದು ಮತ್ತು ಅವರ ಕಥೆಗಳು ಜ್ಞಾಪಕದಲ್ಲಿ ಉಳಿಯದೆ ಹೋಗಿರಬಹುದಾಗಿದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಮೆಲ್ಕಿಜೆದೇಕನನ್ನು ಕ್ರಿಸ್ತನ ಛಾಯೆಯಾಗಿದ್ದಾನೆಂಬದನ್ನು ಗುರುತಿಸುತ್ತಾನೆ. ಆತನ ಕಾರಣದಿಂದಾಗಿ ನಾವು ಮೆಲ್ಕಿಜೆದೇಕನನ್ನು ಅತ್ಯಂಥ ಗೌರವದಿಂದ ಮತ್ತು ಆಶ್ಚರ್ಯದಿಂದ ನೆನಪಿಸಿಕೊಳ್ಳಬಹುದಾಗಿದೆ. ಮೆಲ್ಕಿಜೆದೇಕನು ಭೂಮಿಯ ಮೇಲಿದ್ದ ಯೇಸುವಿಗೆ ಹೋಲಿಸಲ್ಪಟ್ಟಿಲ್ಲ, ಆದರೆ ಪರಲೋಕದಲ್ಲಿರುವ ನಿತ್ಯನಾದ ಮತ್ತು ಅತ್ಯಂಥ ಗೌರವಕ್ಕೆ ಪಾತ್ರಗೊಳಿಸಲ್ಪಟ್ಟಿರುವ ದೇವರ ಮಗನಿಗೆ ಹೋಲಿಸಲ್ಪಟ್ಟಿದ್ದಾನೆ. ಆತನು ನಿಶ್ಚಯವಾಗಿಯೂ, ಆತನು ಯಾಜಕ/ಅರಸನ ಹುದ್ದೆಯಲ್ಲಿ ತನ್ನ ಹೆಚ್ಚು ಶ್ರೇಷ್ಠನಾದ ಉತ್ತರಾಧಿಕಾರಿಗೆ ಹೋಲಿಕೆ ಮಾಡಲ್ಪಡಲು ಅರ್ಹನಾಗಿದ್ದನು.

ಮೆಲ್ಕಿಜೆದೇಕನು ಅಬ್ರಹಾಮನನ್ನು ಆಶೀರ್ವದಿಸಿದನು, ಮತ್ತು ಯೇಸು ಲೋಕವನ್ನು ಆಶೀರ್ವದಿಸಿದನು. ತಮ್ಮ ಮಕ್ಕಳನ್ನು ಆಶೀರ್ವದಿಸುವಂತೆ ಮೂಲಪಿತೃಗಳಿಗೆ (ಆದಿಕಾಂಡ 9:24-27; 48:15) ಮತ್ತು ಜನರನ್ನು ಆಶೀರ್ವದಿಸುವಂತೆ ಯಾಜಕರಿಗೆ (ಅರಣ್ಯಕಾಂಡ 6:24-26) ಅನುಮತಿಯನ್ನು ಕೊಟ್ಟಿದ್ದನಾದರೂ, ದೈವಿಕ ಶಕ್ತಿಯು ಮಾತ್ರವೇ ನಿಜವಾಗಿಯೂ ಆಶೀರ್ವದಿಸಬಲ್ಲದು. ಯೇಸು ಮಕ್ಕಳನ್ನು ಆಶೀರ್ವದಿಸುವ ದಕ್ಕಾಗಿ ಅವರ ತಲೆಯ ಮೇಲೆ ಕೈಗಳನ್ನಿಟ್ಟದ್ದು ಎಂಥ ಅದ್ಭುತವಾದ ಸಂಗತಿ (ಮಾರ್ಕ 10:13-16)! ತಾಯಿಯರು ತಮ್ಮ ಉಳಿದ ಜೀವಿತವೆಲ್ಲಾ ಕರ್ತನು ಅವರನ್ನು ಹೇಗೆ ಆಶೀರ್ವದಿಸಿದನೆಂಬ ಬಗ್ಗೆ ತಮ್ಮ ಸಂತತಿಯರಿಗೆ ಜ್ಞಾಪಿಸುತ್ತಲೇ ಇರಬಲ್ಲವರಾಗಿದ್ದರು. ಅಂಥ ಆಶೀರ್ವಾದಕ್ಕೆ ತಕ್ಕಂತೆ ಜೀವಿಸುವಂತೆ ಅವರಿಗೆ ಕೊಡಲ್ಪಟ್ಟ ಎಂಥ ಒಂದು ಜವಾಬ್ದಾರಿ! ನಾವು ಸಹ ಯೇಸುವಿನಿಂದ ಅಳೆಯಲಾಗದಷ್ಟು ಆಶೀರ್ವದಿಸಲ್ಪಡಬಲ್ಲೆವು ಮತ್ತು ಆ ಆಶೀರ್ವಾದಗಳನ್ನು ನಿತ್ಯಕಾಲಕ್ಕೂ ಹೃದಯದಲ್ಲಿಟ್ಟುಕೊಂಡು ನೆನಪಿಸಿಕೊಳ್ಳಬಲ್ಲೆವು. ಭೂಮಿಯ ಮೇಲಿನ ತನ್ನ ಕಡೇ ಕೆಲಸವಾಗಿ ತನ್ನ ಹಿಂಬಾಲಕರನ್ನು ಆಶೀರ್ವದಿಸುವದು ಕ್ರಿಸ್ತನ ವೈಶಿಷ್ಟ್ಯತೆಯಾಗಿರುತ್ತದೆ (ಲೂಕ 24:50). ಪರಲೋಕದಿಂದ, ಆತನು ಈಗಲೂ ಅದನ್ನೇ ಮಾಡುತ್ತಾನೆ.

## ಯಾಜಕ, ಒಬ್ಬ ಸೇತುವೆ-ನಿರ್ಮಾಣಿಕ

ಒಬ್ಬ ಯಾಜಕನ ಉದ್ದೇಶವೇನು? "ಯಾಜಕ" ಎಂಬುದಕ್ಕೆ ಲ್ಯಾಟಿನ್ ಪದವು *pontifex*, ಅದರ ಅಕ್ಷರಶಃ ಅರ್ಥವು ಒಬ್ಬ "ಸೇತುವೆ-ನಿರ್ಮಾಣಿಕ" ಎಂದಾಗಿರುತ್ತದೆ. ಯೇಸು ನಮಗಾಗಿ ಈ ಲೋಕದಿಂದ ಸ್ವತಃ ದೇವರ ಸನ್ನಿಧಿಗೆ ಒಬ್ಬ ಸೇತುವೆ – ನಿರ್ಮಾಣಿಕನಾಗಿದ್ದಾನೆ. ಆತನು ಒಂದು ಜೀವವುಳ್ಳ ಹೊಸ ದಾರಿಯನ್ನು ತೆರೆದನು (ಇಬ್ರಿಯ 10:20). ಒಂದು ಕಾಲದಲ್ಲಿ ಬಹಳ ದೂರವಿರುವವನಂತೆ ತೋರಿದ ನಮ್ಮ ತಂದೆಯು, ಈಗ ಸಮೀಪವಾಗಿದ್ದಾನೆ. ಯೇಸು ನಮ್ಮ ವಿಮೋಚನೆಯನ್ನು ಸಂಪಾದಿಸಿಕೊಂಡನು, ಅದು ಆತ್ಮನಲ್ಲಿ ನಮ್ಮನ್ನು ದೇವರ ಸನ್ನಿಧಿಯೊಳಗೆ ಪ್ರವೇಶಿಸುವಂತೆ ಮಾಡಿರುತ್ತದೆ. ಆತನ ಸಮೀಪ ಹೋಗಲು (ಇಬ್ರಿಯ 4:15, 16) ಮತ್ತು ಆತನೊಂದಿಗೆ ಹಾಗೂ ಆತನ ಮಗನೊಂದಿಗೆ ಅನ್ಯೋನ್ಯತೆಯನ್ನು ಆನಂದಿಸುವದಕ್ಕೆ ಹೆದರದಿರೋಣ (1 ಯೋಹಾನ 1:3).

## "ಪರಾತ್ಪರನಾದ ದೇವರು" (7:1)

ಪ್ರಾಚೀನ ಜಗತ್ತಿನಲ್ಲಿ, ವಿವಿಧ ಪ್ರಾಂತ್ಯಗಳಲ್ಲಿ ಜನರು ಅನೇಕ ದೇವರುಗಳನ್ನು ಆರಾಧಿಸುತ್ತಿದ್ದರು. ಸ್ಥಳೀಯ ದೇವರುಗಳು ಆಯಾ ಪಟ್ಟಣ ಅಥವಾ ಪ್ರಾಂತ್ಯದ ಜನರನ್ನು

ಕಾಪಾಡುವ ಮತ್ತು ಆಶೀರ್ವದಿಸುವ ಮೂಲಕ ತನ್ನ ಯೋಗ್ಯತೆಯನ್ನು ಸಾಭಿತುಪಡಿಸಿದವು. ಯೆಹೋವನಿಗೆ ಮಾತ್ರವೇ "ಪರಾತ್ಪರನಾದ ದೇವರು" ಎಂಬ ಬಿರುದು ಕೊಡಲ್ಪಟ್ಟಿರುತ್ತದೆ (ಆದಿಕಾಂಡ 14:18; ನೋಡಿರಿ ಧರ್ಮೋಪದೇಶಕಾಂಡ 32:8). ಈ ಮಾತು ಸ್ವತಃ ವಿರಳವಾದದ್ದಾದರೂ, ಅದರ ಯೋಚನೆಯು ಶಾಸ್ತ್ರಗಳನ್ನೆಲ್ಲಾ ತುಂಬಿಕೊಂಡಿರುತ್ತದೆ. ಸಮಸ್ತವನ್ನು ಉಂಟು ಮಾಡಿದವನು ಆತನೇ ಆಗಿದ್ದಾನೆ. ನಿನೆವೆಯನ್ನು ರಕ್ಷಿಸುವದಕ್ಕೆ ಸಹಾಯ ಮಾಡೆಂದು ಆಜ್ಞಾಪಿಸಲ್ಪಟ್ಟವನಾಗಿ ದೇವರಿಂದ ಓಡಿ ಹೋಗುತ್ತಿದ್ದ ಯೋನನು ಸಹ ವಿಗ್ರಹಾರಾಧಕ ನಾವಿಕರಿಗೆ ದೇವರಾದ ಯೆಹೋವನೇ ಎಲ್ಲವನ್ನೂ ಉಂಟು ಮಾಡಿದವನೆಂಬುದಾಗಿ ಅರಿಕೆ ಮಾಡಿದನು (ಯೋನನು 1:9).

ನಿರ್ದಿಷ್ಟವಾಗಿ ತನ್ನನ್ನು ಶಕ್ತಿಶಾಲಿಯೆಂದು ಪರಿಗಣಿಸಿಕೊಳ್ಳುವ ಅರಸನೊಬ್ಬನು ಒಬ್ಬ "ರಾಜಾಧಿರಾಜನು" ಎಂದು ಕರೆಯಿಸಿಕೊಳ್ಳಲು ಇಷ್ಟಪಡುತ್ತಾನೆ. ಇಸ್ರಾಯೇಲ್ಯರಿಗೆ ಇನ್ನು ಉತ್ತಮವಾಗಿ ಗೊತ್ತಿತ್ತು ಮತ್ತು ದೇವರನ್ನು "ರಾಜಾಧಿರಾಜ" ಎಂದು ಕರೆದರು. ಯಾವನೂ ಉನ್ನತನಲ್ಲ, ಮತ್ತು ತಮ್ಮ ಉತ್ತಮ ದಿನಗಳಲ್ಲಿ ಇಸ್ರಾಯೇಲ್ಯರು ಅದನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದರು. ಸತ್ಯನಾದ ಏಕೈಕ ದೇವರನ್ನು ಯಾವನೊಬ್ಬನೂ ಮೀರಿಸುವದಕ್ಕಾಗುವದಿಲ್ಲ.

## ಶ್ರೇಷ್ಠತೆಯು ವಿಶ್ಲೇಷಿಸಲ್ಪಟ್ಟದ್ದು (7:4)

ಅಬ್ರಹಾಮನಿಗೆ ಹೋಲಿಸಿದಾಗ ಮೆಲ್ಕಿಜೆದೇಕನು ಅಷ್ಟೊಂದು ಶ್ರೇಷ್ಠನಾಗಿದ್ದಲ್ಲಿ, ಏಕೆ ಈತನನ್ನು ನಂಬಿಗಸ್ತರಿಗೆ ಪಿತೃವಾಗಿರುವಂತೆ ಆರಿಸಿಕೊಳ್ಳಲಿಲ್ಲ? ಅಬ್ರಹಾಮನು ತನ್ನ ಬಲಹೀನತೆಗಳನ್ನು ಹೊಂದಿದ್ದನು, ಆದರೆ ಆತನ ನಂಬಿಕೆಯು – ದೇವರು ಮತ್ತು ಆತನ ವಾಕ್ಯದಲ್ಲಿದ್ದ ಸ್ಪುಟವಾದ ವಿಶ್ವಾಸ – ಆತನ ಅತ್ಯಂಥ ಪ್ರಧಾನವಾದ ಗುಣಸ್ವಭಾವವಾಗಿತ್ತು. ಮೆಲ್ಕಿಜೆದೇಕನು "ಪರಾತ್ಪರನ ಮಹಾಯಾಜಕ" ನಂತಹ ಗೌರವಾನ್ವಿತ ಪಾತ್ರಕ್ಕೆ ಏರಿಸಲ್ಪಡಬೇಕಾದರೆ ಅಂತಹದ್ದೇ ನಂಬಿಕೆಯನ್ನು ಹೊಂದಿದ್ದನೆಂದು ತೋರುತ್ತದೆ.

ಅಬ್ರಹಾಮನ ಇನ್ನೊಂದು ಗಮನಾರ್ಹವಾದ ವೈಶಿಷ್ಟತೆಯೆಂದರೆ ಆತನ ನೈತಿಕ ಗುಣಸ್ವಭಾವ. ಆತನು ತನ್ನ ಮಕ್ಕಳಿಗೆ ತನ್ನನ್ನು ಹಿಂಬಾಲಿಸುವಂತೆ "ಆಜ್ಞಾಪಿಸುವದಕ್ಕೆ" ಶಕ್ತನಾಗಿದ್ದನು (ಆದಿಕಾಂಡ 18:19). ಆ ಗುಣಸ್ವಭಾವದ ಶಕ್ತಿಯನ್ನು ಅನೇಕರು ಆಶಿಸುತ್ತಾರೆ, ಆದಾಗ್ಯೂ ಕೆಲವರು ಮಾತ್ರವೇ ಅದನ್ನು ಹೊಂದಿರುವಂತೆ ಕಾಣಿಸುತ್ತದೆ. ಆತನ ಪ್ರಭಾವವು ದೇವರನ್ನು ಪ್ರೀತಿಸುವ ಕನಿಷ್ಠ ನಾಲ್ಕನೆಯ ಪೀಳಿಗೆಯ ತನಕವು ತಲುಪಿತ್ತು. (ಯೋಸೇಫನ ಉದಾಹರಣೆಯನ್ನು ಪರಿಗಣಿಸಿರಿ.) ವಂಶಾವಳಿಯ ದಾಖಲೆಯನ್ನು ಹೊಂದಿಲ್ಲದೆ ಇರುವ ಮೆಲ್ಕಜೆದೇಕನು ಮಕ್ಕಳನ್ನು ಹೊಂದಿರಲಿಲ್ಲ. ಆ ಕಾರಣದಿಂದ ಆತನು ಅಬ್ರಹಾಮನಿಗಿದ್ದ ಆಜ್ಞಾಪಿಸುವ ಪ್ರಭಾವವನ್ನು ಹೊಂದಿರುವದ ಕ್ಕಾಗಲಿಲ್ಲ.

## ದಶಮಾಂಶ ಕೊಡುವದು (7:4-8)

ಅಬ್ರಹಾಮನು ಮೆಲ್ಕಿಜೆದೇಕನಿಗೆ ನೀಡಿದ ಉಡುಗೋರೆಯು ಹೊಸ ಒಡಂಬಡಿಕೆಯ ಸಭೆಯು ದಶಮಾಂಶ ಕೊಡಬೇಕೆಂಬ ಆಜ್ಞೆಯಂತಾಗಿ ಮಾಡುವದಿಲ್ಲ. ಹೇಗೂ, ನಂಬಿಗಸ್ತ ಕ್ರೈಸ್ತನು ಜೀವವನ್ನು ಪಡೆದುಕೊಂಡು ಪಾಪದ ಬಂಧನದಿಂದ ಬಿಡಿಸಲ್ಪಟ್ಟವನಾಗಿ, ದೇವರ ಕೆಲಸಕ್ಕೋಸ್ಕರ ವಾರದ ಕಾಣಿಕೆಯನ್ನು ಪ್ರತ್ಯೇಕಿಸಿಡುವನು.

ಕ್ರೈಸ್ತನು ತನಗೆ ಬಂದ "ಸಂಪಾದನೆಯ" ಮೇರೆಗೆ ಒಂದು ಭಾಗವನ್ನು ಕೊಡತಕ್ಕದ್ದು

(1 ಕೊರಿಂಥ 16:2). ನಿಶ್ಚಯವಾಗಿಯೂ, ಒಬ್ಬನು ಕನಿಷ್ಠ ಒಂದು ದಶಮ ಭಾಗವನ್ನಾದರೂ ಕೊಡದಿದ್ದಲ್ಲಿ ಆತನು ಉದಾರವಾಗಿ ಕೊಡುವವನಾಗಿರಲಿಕ್ಕೆ ಸಾಧ್ಯವಿಲ್ಲ. ಸುವಾರ್ತೆಯ ಬರವಣಿಗೆಗಳ ಬಳಿಕ ಹೊಸ ಒಡಂಬಡಿಕೆಯಲ್ಲಿ ದಶಮಾಂಶ ಕೊಡುವಿಕೆಯ ಬಗ್ಗೆ ನಿರ್ದಿಷ್ಟವಾಗಿ ಕಲಿಸಲ್ಪಟ್ಟಿಲ್ಲವಾದರೂ, ತ್ಯಾಗಮಯವಾಗಿ ಕೊಟ್ಟದ್ದಕ್ಕಾಗಿ ಕೆಲವರು ಪ್ರಶಂಸಿಸಲ್ಪಟ್ಟಿದ್ದಾರೆ (ನೋಡಿರಿ 2 ಕೊರಿಂಥ 8:1-5). ಯೆಹೂದ್ಯರು ಧರ್ಮಶಾಸ್ತ್ರದ ಇತರ ಭಾಗಗಳನ್ನು ನಿರ್ಲಕ್ಷಿಸದೆ ತಮ್ಮ ದಶಮಾಂಶವನ್ನು ಕೊಟ್ಟಿರಬೇಕಿತ್ತೆಂದು ಯೇಸು ಹೇಳಿದನು (ಮತ್ತಾಯ 23:23). ಖಂಡಿತವಾಗಿಯೂ, ಅದು ಶಿಲುಬೆಯ ಮುಂಚೆ ಮತ್ತು ಸಭೆಯನ್ನು ಸ್ಥಾಪಿಸುವದಕ್ಕಾಗಿ ಪವಿತ್ರಾತ್ಮನು ಬರುವದಕ್ಕೆ ಮುನ್ನ ಆಗಿತ್ತು. ಹಾಗಿದ್ದರೂ, ದಶಮಾಂಶವು ಒಂದು ಸ್ವೀಕಾರರ್ಹವಾದ ಶೇಕಡಾವಾರು ಲೆಕ್ಕವಾಗಿರುತ್ತದೆಂಬದನ್ನು ನಾವು ಈ ವಾಕ್ಯಭಾಗಗಳಿಂದ ಸೂಕ್ತವಾಗಿ ತೀರ್ಮಾನಕ್ಕೆ ಬರಬಹುದು.

ದೇವರ ವಿಧೇಯತೆಯ ತತ್ವಗಳು ಎಂದಿಗೂ ಬದಲಾಯಿಸಲ್ಪಟ್ಟಿರುವದಿಲ್ಲ. ದಶಮಾಂಶವು ಇಂದು ಒಂದು ಆಜ್ಞೆಯಾಗಿರುವದಿಲ್ಲವಾದರೂ, ಅದನ್ನು ಅಂಥ ಒಂದು "ತತ್ವ" ವಾಗಿ ಕಾಣಬಹುದು. ನಾವು ಈಗಲೂ ಹಳೆಯ ಒಡಂಬಡಿಕೆಯ ವಿಧೇಯತೆಯ ಉದಾಹರಣೆಗಳನ್ನು ಅನುಸರಿಸುತ್ತೇವೆ (ನೋಡಿರಿ ರೋಮಾ 15:4; 1 ಕೊರಿಂಥ 10:1-13). ನಾವು ದೇವರನ್ನು ಆರಾಧಿಸಬೇಕೆಂದು ಉಪದೇಶಿಸುವದರಲ್ಲಿ ಹಳೆಯ ಒಡಂಬಡಿಕೆ ಯಿಂದ ಉಲ್ಲೇಖನವನ್ನು ಮಾಡಿದನು (ಮತ್ತಾಯ 4:10; ನೋಡಿರಿ ಧರ್ಮೋಪದೇಶಕಾಂಡ 6:13), ವಾಕ್ಯಭಾಗಕ್ಕೆ ಸರಿಯಾದ ಅರ್ಥನಿರೂಪಣೆಯನ್ನು ಒದಗಿಸುವದಕ್ಕೆ "ಒಬ್ಬನನ್ನೇ" ಎಂದು ಸೇರ್ಪಡೆಗೊಳಿಸುತ್ತಾನೆ. ಪೌಲನು ಸಭೆಗಳಿಂದ ತನಗೆ ಆರ್ಥಿಕ ಸಹಾಯ ಪಡೆಯುವದನ್ನು ಸಮರ್ಥಿಸಿಕೊಳ್ಳಲು ಹಳೆಯ ಒಡಂಬಡಿಕೆಯ ಪೂರ್ವನಿದರ್ಶನಗಳನ್ನು ನಿಯಮಗಳಾಗಿ ಬಳಸುತ್ತಾನೆ (1 ಕೊರಿಂಥ 9:8-10; ನೋಡಿರಿ ಧರ್ಮೋಪದೇಶಕಾಂಡ 25:4). ಹೇಗೂ, ಇಂದು ಪ್ರಸ್ತುತ ಅನ್ವಯವಾಗತಕ್ಕವುಗಳೆಂದು ಹೊಸ ಒಡಂಬಡಿಕೆಯಲ್ಲಿ ವಿಧಿಸಲ್ಪಡದಿರುವ ಹಳೆಯ ಒಡಂಬಡಿಕೆಯ ಯಾವದೇ ಆಜ್ಞೆಗಳನ್ನು ದೇವಜನರ ಮೇಲೆ ಬೈಬಲಾಧಾರಿಕವಾಗಿ ನಿರ್ಬಂಧಗೊಳಿಸಲು ಆಗದಿರಬಹುದು.

## ಶ್ರೇಷ್ಠವಾದವನು ಮೊದಲು ಬಂದನು (7:9, 10)

ಯೆಹೂದ್ಯರ ದೃಷ್ಟಿಯಲ್ಲಿ, ಅಬ್ರಹಾಮನು ಆತನ ಸಂತತಿಯವರಿಗಿಂತಲೂ ಹೆಚ್ಚು ಪ್ರಾಮುಖ್ಯನಾಗಿದ್ದನು ಯಾಕೆಂದರೆ ಆತನು ಮೊದಲು ಬಂದವನು. ಲೇವಿಯು ಅಬ್ರಹಾಮನಿಗಿಂತ ತಡವಾಗಿ ಬಂದನಾದ್ದರಿಂದ, ಆತನು ತನ್ನ ಮುತ್ತಾತನಿಗಿಂತಲೂ ಕಡಿಮೆ ಪ್ರಾಮುಖ್ಯನೆಂದು ಪರಿಗಣಿಸಲ್ಪಟ್ಟನು. ಇಂದು ನಾವು ಆ ವಿಧದಲ್ಲಿ ಯೋಚಿಸುವದಿಲ್ಲ, ವಾಸ್ತವದಲ್ಲಿ, ನಮ್ಮ ಪೀಳಿಗೆಯು ಹಿಂದಿನ ಎಲ್ಲಾ ಪೀಳಿಗೆಗಳಿಗಿಂತಲೂ ಹೆಚ್ಚು ಬುದ್ಧಿಶಾಲಿ ಎಂದು ಊಹಿಸಿಕೊಳ್ಳುವ ಪ್ರವೃತ್ತಿ ತೋರುತ್ತೇವೆ. ಹೇಗೂ, ತಂತ್ರಜ್ಞಾನವು ನಮ್ಮನ್ನು ನೈತಿಕವಾಗಿ ಅಥವಾ ಆತ್ಮೀಕವಾಗಿ ಮುಂದುವರೆದವರನ್ನಾಗಿಸುವದಿಲ್ಲ. ಉನ್ನತ ನೈತಿಕತೆ ಮತ್ತು ಜೀವನದ ಉದ್ದೇಶವನ್ನು ಅರ್ಥಮಾಡಿಕೊಳ್ಳುವದು ಜನರನ್ನು ಮಹತ್ವಪೂರ್ಣಗೊಳಿಸುವ ಗುಣಲಕ್ಷಣಗಳಾಗಿವೆ. ಆಧುನಿಕ ಜಗತ್ತಿನ ಕುರಿತು ಒಂದು ಸರಿಯಾದ ಬಾಹ್ಯನೋಟವನ್ನು ಪಡೆದುಕೊಳ್ಳಬೇಕಾದರೆ ಗತಕಾಲವನ್ನು ಹೆಚ್ಚು ಗೌರವಿಸುವ ಅಗತ್ಯವಿರುತ್ತದೆ.

ಆಧುನಿಕ ತತ್ವಜ್ಞಾನಗಳು ಇರುವದಕ್ಕಿಂತಲೂ ಅಧಿಕವಾಗಿ ಶಾಸ್ತ್ರಗಳು ನಿಜವಾದ ಮೌಲ್ಯಗಳೊಂದಿಗೆ ಏಕಾಭಿಪ್ರಾಯದಿಂದ ಇರುತ್ತವೆ. ದಾವೀದನು ದೇವರ ವಿಧಿಗಳ

ಅಮೋಘವಾದ ಮೌಲ್ಯವನ್ನು ಗುರುತಿಸುವವನಾಗಿ ಹೀಗೆ ಹೇಳಿದನು, "ಅವು ಬಂಗಾರಕ್ಕಿಂತಲೂ ಅಪರಂಜಿರಾಶಿಗಳಿಗಿಂತಲೂ ಅಪೇಕ್ಷಿಸತಕ್ಕವುಗಳು. ಅವು ಜೇನಿಗಿಂತಲೂ ಶೋಧಿಸಿದ ಜೇನು ತುಪ್ಪಕ್ಕಿಂತಲೂ ಸಿಹಿಯಾಗಿವೆ" (ಕೀರ್ತನೆ 19:10). ಕೀರ್ತನೆಗಾರನು ಹೀಗೆ ಘೋಷಿಸಿದನು, "ನೀನು ಉಸಿರಿದ ಧರ್ಮಶಾಸ್ತ್ರವು ಸಾವಿರಾರು ಚಿನ್ನಬೆಳ್ಳಿಯ ನಾಣ್ಯಗಳಿಗಿಂತಲೂ ನನಗೆ ಅತಿಪ್ರಿಯವಾಗಿದೆ" (ಕೀರ್ತನೆ 119:72). ನಿಜವಾಗಿಯೂ ಪ್ರಾಮುಖ್ಯವಾದದ್ದರ ಗ್ರಹಿಕೆಯೊಂದಿಗೆ ಲೋಕವು ಒಂದು ಎಷ್ಟೋ ಉತ್ತಮವಾದ ಸ್ಥಳವಾಗುವದು.

## ದೇವರ ಮೌನವನ್ನು ಗೌರವಿಸುವದು (7:12-14)

ಬಹಳಷ್ಟು ಸಾರಿ ಜನರು ಹೀಗೆ ಹೇಳುತ್ತಾರೆ ಅಥವಾ ಯೋಚಿಸುತ್ತಾರೆ, "ಇದು ಶಾಸ್ತ್ರಗಳಿಂದ ಅಧಿಕಾರ ಕೊಡಲ್ಪಟ್ಟದ್ದಲ್ಲವಾದಾಗ್ಯೂ ಇಂಥದನ್ನು ಮಾಡಬಾರದೆಂದು ದೇವರು ಎಲ್ಲಿಯೂ ಹೇಳಲಿಲ್ಲವಾದ್ದರಿಂದ ನಾವು ಸಭೆಯಲ್ಲಿ ಇದನ್ನು ಮಾಡೋಣ." ವಾಸ್ತವದಲ್ಲಿ ದೇವರು ತಾನು ಅನುಮೋದನೆ ಮಾಡದ ಎಲ್ಲದರ ಪಟ್ಟಿಯೊಂದನ್ನು ಮಾಡಿದ್ದರೆ ಹೇಗಿರುತ್ತಿತ್ತು? ನಾವು ನಮ್ಮ ಮಕ್ಕಳಿಗೋಸ್ಕರ ಅಂತಹ ಪಟ್ಟಿಯೊಂದನ್ನು ಮಾಡಬೇಕಾಗಿದ್ದರೆ ಹೇಗಿರುತ್ತಿತ್ತು? ಅಂಥ ಪಟ್ಟಿಯು ಅತಿ ಉದ್ದವಾಗಿರುತ್ತಿತ್ತು ಮತ್ತು ಯಾವನಿಗೂ ಓದಲಾಗದಷ್ಟು ವಿವರವಾಗಿರುತ್ತಿತ್ತು. ಬೈಬಲ್ ಅಧಿಕಾರವನ್ನು ಈ ವಿಧದಲ್ಲಿ ಕಾಣುವವರು ಜಾಗರೂಕತೆಯಿಂದ ಯೋಚಿಸುತ್ತಿಲ್ಲವೆಂದಾಗುತ್ತದೆ; ಅವರ ತರ್ಕವು ಕೇವಲ ಕಲ್ಪನೆಯನ್ನು ಆಧರಿಸಿದ್ದಾಗಿದೆ. ಒಂದು ಆಚಾರದ ಬಗ್ಗೆ ಶಾಸ್ತ್ರದಲ್ಲಿ ಮಾಡಬಾರ ದೆಂದು ನಿರ್ದಿಷ್ಟವಾಗಿ ಪ್ರಸ್ತಾಪಿಸಲ್ಪಟ್ಟಿಲ್ಲವೆಂದ ತಕ್ಷಣ ಅದು ಸ್ವೀಕಾರರ್ಹವೆಂದು ಕಲ್ಪಿಸಿಕೊಳ್ಳಬಾರದು. ನಾವು ಯಾವಾಗಲೂ ಹೀಗೆ ಕೇಳಿಕೊಳ್ಳಬೇಕು, "ಇದು ನಮ್ಮನ್ನು ಸಕಲ ಸತ್ಕಾರ್ಯಕ್ಕಾಗಿ ಸನ್ನದ್ಧುಗೊಳಿಸುವಂತಹ ದೇವರ ವಾಕ್ಯದಿಂದ ಅಧಿಕಾರ ಕೊಡಲ್ಪಟ್ಟಿರುವಂತದ್ದೋ?" (ನೋಡಿರಿ 2 ತಿಮೊಥೆ 3:16, 17). ನಿರ್ದಿಷ್ಟವಾದ ಹೇಳಿಕೆ, ಸೂಚ್ಯಾರ್ಥ, ಪೂರ್ವನಿದರ್ಶನದ ಮೂಲಕ ಅಧಿಕಾರ ಕೊಡಲ್ಪಡದ ಯಾವದೇ ಆಗಲಿ ಅದೊಂದು ಮಾನವನ ನವೀನಕಲ್ಪನೆ ಆಗಿರುತ್ತದೆ.

ವ್ಯಕ್ತಿಗಳು ಸಭೆಯ ಆರಾಧನೆಗಳಲ್ಲಿ ಮನುಷ್ಯ-ನಿರ್ಮಿತವಾದ ನವೀನಕಲ್ಪನೆಗಳನ್ನು ತಂದಿರುತ್ತಾರೆ, ಅಂತಹ ಪ್ರತಿಯೊಂದು ಆಚಾರಕ್ಕೆ ಬೈಬಲ್ ಅಧಿಕಾರವೇನೆಂದು ಹೇಳಬೇಕೆಂದು ಕೇಳುವವರನ್ನು ಹೊರ ಹಾಕಲಾಗುತ್ತಿದೆ. ಒಂದು ಸಾಮಾನ್ಯವಾದ ಪ್ರಕರಣವೆಂದರೆ ಸಭೆಯಲ್ಲಿ ಸಂಗೀತ ವಾದ್ಯಗಳ ಬಳಕೆ ಮಾಡುವದು. ತಾಂತ್ರಿಕ ಸಂಗೀತ ವಾದ್ಯಗಳ ಬಳಕೆಗೆ ಅಧಿಕಾರವನ್ನು ಕಂಡುಕೊಳ್ಳಲು ಯಾವನಿಗೂ ಸಾಧ್ಯವಿಲ್ಲ ಯಾಕೆಂದರೆ ಸಭೆಯ ಆರಾಧನೆಗೆ ಸಂಬಂಧಿಸಿದಂತೆ ಹೊಸ ಒಡಂಬಡಿಕೆಯು ಇದರ ಬಗ್ಗೆ ಏನನ್ನೂ ಹೇಳುವದಿಲ್ಲ. ಹಳೆಯ ಒಡಂಬಡಿಕೆಯು ಅದನ್ನು ಆಜ್ಞಾಪಿಸಿತ್ತು (2 ಪೂರ್ವಕಾಲವೃತ್ತಾಂತ 29:25), ಆದರೆ ಹೊಸ ಒಡಂಬಡಿಕೆಯ ಸಭೆಯು ಸಾರ್ವಜನಿಕ ಆರಾಧನೆಗಳಲ್ಲಿ ಎಂದಿಗೂ ಸಂಗೀತ ವಾದ್ಯಗಳನ್ನು ಬಳಕೆ ಮಾಡಲಿಲ್ಲ ಎಂದು ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ.

ಹತ್ತೊಂಬತ್ತನೆಯ ಶತಮಾನದಲ್ಲಿರುವಾಗಲೇ ಸಭೆಯ ಆರಾಧನೆಗಳಲ್ಲಿ ಸಂಗೀತ ವಾದ್ಯಗಳ ಬಳಕೆಯು ಬಹುಪಾಲು ಪ್ರೊಟೆಸ್ಟೆಂಟ್ ಸಭೆಗಳಲ್ಲಿ ಒಂದು ವಿವಾದದ ಅಂಶವಾಗಿತ್ತು, ಆದರೆ ಅದು ಕ್ರಮೇಣದಲ್ಲಿ ಬಹುತೇಕ ಪಂಗಡಗಳಲ್ಲಿ ತನ್ನ ದಾರಿಯನ್ನು ಸಾಧಿಸಿಕೊಂಡಿತು. ನಾವು ನಮ್ಮ ಸುತ್ತಲಿನ ಜನಾಂಗಗಳಂತೆ ಇರುತ್ತೇವೆಂದು ಕೂಗದಿರೋಣ (1 ಸಮುವೇಲ 8:5)! ವಾದ್ಯಗಳು ಅನೇಕ ಸಾರಿ ದೇವರು ಆಜ್ಞಾಪಿಸಿರುವ ಸಂಗೀತವನ್ನು ಮಂದಗೊಳಿಸುತ್ತವೆ.

ಸಭೆಯ ಕೂಟದಲ್ಲಿ, ಹಾಡುವವರು ಮಾತ್ರವೇ ಹಾಡಿ ಉಪದೇಶ ಮತ್ತು ಬುದ್ಧಿಹೇಳಿರಿ ಎಂಬ ಆಜ್ಞೆಗೆ ವಿಧೇಯರಾಗುವವರಾಗಿದ್ದಾರೆ (ಎಫೆಸ 5:19; ಕೊಲೊಸ್ಸೆ 3:16).

7:12-14ರ ವಾಕ್ಯಭಾಗವು ತಿಳಿಸುವ ವಿಷಯವೇನು? "ದೇವರು ಒಂದು ಕುಲವನ್ನು ಹೆಸರಿಸಿದನಾದ್ದರಿಂದ, ಅಧಿಕಾರ ಕೊಡಲ್ಪಡದ ಬೇರೆ ಯಾವ ಕುಲವು ಅನುಮೋದಿಸಲ್ಪಡುವದಿಲ್ಲ." ಬೈಬಲ್ ಎಲ್ಲಿ ಮೌನವಾಗಿರುತ್ತದೋ ಅಲ್ಲಿ ಮೌನವಾಗಿರುವದಕ್ಕೆ ಕಲಿತುಕೊಳ್ಳೋಣ. ಮೌನದ ತತ್ವ, ಅಥವಾ ಅನಧಿಕಾರಯುತ ನಿಯಮವು ದೇವರ ವಾಕ್ಯವನ್ನು ತುಂಬಿರುತ್ತದೆ. ಯೆಹೂದಿಕರಣಗೊಳಿಸುವವರು ಅನ್ಯಜನರಿಗೆ ಸುನ್ನತಿ ಮಾಡಿಸಿಕೊಳ್ಳುವದು ಅಗತ್ಯವೆಂದು ಹೇಳುವದು ತಪ್ಪಾದದ್ದಾಗಿತ್ತು ಯಾಕೆಂದರೆ ಅಂಥ ಉಪದೇಶ ಮಾಡುವಂತೆ ಅಪೊಸ್ತಲರಿಂದ ಅವರು "ಅಪ್ಪಣೆ ಹೊಂದಿರಲಿಲ್ಲ" (ಅಪೊಸ್ತಲರ ಕೃತ್ಯಗಳು 15:24). ಅದನ್ನು ನಿಷೇಧಿಸುವದಕ್ಕೆ ಅಪೊಸ್ತಲಿಕ ಮೌನವು ಸಾಕಾಗಿತ್ತು.

ವಾಕ್ಯಭಾಗದ ಈ ಕೆಳಗಿನ ಅನ್ವಯಿಕೆಯನ್ನು ಪರಿಗಣಿಸಿರಿ. ನೋಹನಿಗೆ ತುರಾಯಿ ಮರದಿಂದ ನಾವೆಯನ್ನು ನಿರ್ಮಿಸಬೇಕೆಂದು ಹೇಳಲಾಯಿತು; ಬೇರೆ ಇನ್ನಾವದನ್ನಾಗಲಿ ಬಳಸುವ ಅಧಿಕಾರ ಕೊಡಲ್ಪಟ್ಟಿರಲಿಲ್ಲ, ಆದ್ದರಿಂದ ಆತನು ಬೇರೆ ಯಾವದೇ ವಿಧವಾದ ಮರವನ್ನು ಬಳಸುವದಕ್ಕೆ ಧೈರ್ಯಮಾಡಲಿಲ್ಲ. ಇಂದು ಬೈಬಲ್ ಅಧಿಕಾರವನ್ನು ನಿರ್ಧರಿಸುವದಕ್ಕೆ ಅದೇ ಪ್ರಕ್ರಿಯೆಯನ್ನು ಅನುಸರಿಸಬೇಕು. ದೇವರು ಒಂದು ವೇಳೆ ಜಾತಿವಿಶಿಷ್ಟವಾದ "ಮರ" ಎಂಬ ಪದವನ್ನು ಬಳಸಿದ್ದರೆ, ನೋಹನು ಯಾವದೇ ವಿಧವಾದ ಮರವನ್ನು ಬಳಸಿರಬಹುದಿತ್ತು. ಕೆಲವರು ಈ ರೀತಿಯಾದ ತರ್ಕವನ್ನು ಆಕ್ಷೇಪಿಸುತ್ತಾರೆ, ಆದರೆ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಅದೇ ವಿಧವಾದ ತರ್ಕವನ್ನೇ ಬಳಸಿದನು. ದೇವರ ಮೌನವನ್ನು ಗೌರವಿಸಬೇಕೆಂಬ ತತ್ವವು ಈಗಲೂ ಅನ್ವಯವಾಗುತ್ತದೆ. ಹೊಸ ಒಡಂಬಡಿಕೆಯು ಒಂದು ಆಜ್ಞೆಯನ್ನು ಕೊಟ್ಟಿದ್ದರೆ ಅಥವಾ "ಅವರು ಸಭೆಯಲ್ಲಿ *ಸಂಗೀತ* ಹೊಂದಿದ್ದರು" ಎಂಬ ಮಾತುಗಳಿಂದ ಉದಾಹರಣೆಯನ್ನು ಕೊಟ್ಟಿದ್ದರೆ, ನಾವು ಇಷ್ಟಪಡುವಂತಹ ಯಾವದೇ ವಿಧವಾದ ಸಂಗೀತವನ್ನು ಹೊಂದಿರಬಹುದಿತ್ತು. ಹೇಗೂ, ಆರಾಧನೆಯಲ್ಲಿ ಸಂಗೀತದ ವಿಷಯದಲ್ಲಿ ಮಾತಾಡುವ ಹೊಸ ಒಡಂಬಡಿಕೆಯ ಏಳು ವಾಕ್ಯಭಾಗಗಳು ಕೇವಲ ಹಾಡುವದನ್ನು ಮಾತ್ರವೇ ಪ್ರಸ್ತಾಪಿಸುತ್ತವೆ.[56] ಅಧಿಕಾರ ಕೊಡಲ್ಪಟ್ಟಿರುವ ಏಕೈಕ ಸಂಗೀತವೆಂದರೆ *acappella* – ಇದೊಂದು ಇಟಾಲಿಯನ್ ಪದವಾಗಿದ್ದು ಅಕ್ಷರಶಃ "ಪ್ರಾರ್ಥನಾ ಮಂದಿರದ ಶೈಲಿಯಲ್ಲಿ" ಎಂದಾಗಿರುತ್ತದೆ – ಮಾತ್ರವೇ ಆಗಿರುತ್ತದೆ. ನಾವು ಒಂದು ವಾದ್ಯವನ್ನು ಬಳಸುವವರಾಗಿ, ಅಂದರೆ ಹೃದಯವನ್ನು ಬಳಸಿ ದೇವರಿಗೆ "ಗಾನ" (*ψάλλω*, *psallō*) ಮಾಡಬೇಕಾಗಿರುತ್ತದೆ (ಎಫೆಸ 5:19).

## "ನಮ್ಮ ಕರ್ತನು" (7:14)

14ನೇ ವಚನದಲ್ಲಿ "ನಮ್ಮ ಕರ್ತನು" ಎಂದು ಕರೆಯಲ್ಪಟ್ಟಿರುವ ವ್ಯಕ್ತಿಯು ಸ್ಪಷ್ಟವಾಗಿ ಯೇಸು ಕ್ರಿಸ್ತನು ಆಗಿರುತ್ತಾನೆ. ಯೇಸುವು ಕೀರ್ತನೆ 110:1ರಲ್ಲಿನ ಪ್ರವಾದನೆಯಲ್ಲಿ ಹೆಸರಿಸಲ್ಪಟ್ಟಿರುವ ಎರಡನೆಯ "ಕರ್ತನು" ಎಂದು ಪೇತ್ರನ ನಿರ್ಭಿತವಾದ ಒತ್ತಿ ಹೇಳುವಿಕೆಯ ಬಳಿಕ (ಅಪೊಸ್ತಲರ ಕೃತ್ಯಗಳು 2:34, 35ರಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ), ನಾವು ಆತನನ್ನು ನಮ್ಮ ಜೀವಿತಗಳ ಕರ್ತನೆಂದು ಗುರುತಿಸಿಕೊಳ್ಳತಕ್ಕದ್ದು. ಹೇಗೂ, ಹಳೆಯ ಒಡಂಬಡಿಕೆಯ ಪ್ರಾಥಮಿಕ "ಕರ್ತನು" ಆಗಿರುವ ತಂದೆಯಾದ ದೇವರಿಗೆ ಆ "ಕರ್ತನ" ಮೂಲಕವಾಗಿ ಪ್ರಾರ್ಥನೆ ಮಾಡುವವರಾಗಿದ್ದೇವೆ. ಯೇಸುವು ಹೊಸ ಒಡಂಬಡಿಕೆಯ ಕರ್ತನಾಗಿದ್ದಾನೆ.[57]

ನಾವು ಇಹಲೋಕದ ನಡವಳಿಕೆಯನ್ನು ಅನುಸರಿಸದೆ ಇರುವ ಮೂಲಕ ಯೇಸುವನ್ನು ನಮ್ಮ ಜೀವಿತಗಳ ಕರ್ತನನ್ನಾಗಿ ಮಾಡಿಕೊಳ್ಳತಕ್ಕದ್ದು (ರೋಮಾ 12:1, 2). ನಾವು ಅದನ್ನು ಮಾಡುವಾಗ, ನಾವು "ದೇವರ ಚಿತ್ತವೇನೆಂದು" *ಋಜುವಾತು ಮಾಡುವ* ದೊಡ್ಡದಾದ ಗುರಿಯನ್ನು ಸಾಧಿಸಿಕೊಳ್ಳುವೆವು (ರೋಮಾ 12:2). ಅಲ್ಲದೆ ನಮ್ಮ ಕರ್ತನ ಸೇವೆ ಮಾಡುವದರಲ್ಲಿರುವ ಅದ್ಭುತವಾದ ಆನಂದವನ್ನು ನಮಗೆ ಮತ್ತು ಬೇರೆಯವರಿಗೆ ಸಾಬೀತುಪಡಿಸುವೆವು. ಆತನು ನಿಮ್ಮ ಜೀವನದ ಕರ್ತನಾಗಿರುತ್ತಾನೋ? ನೀವು ಅದನ್ನು ಸಾಬೀತುಪಡಿಸಿದ್ದೀರೋ? ನಂಬಿಕೆಯ ಕುರಿತಾಗಿ ಸಮರ್ಪಕವಾಗಿ ಪ್ರತಿವಾದ ಮಾಡುವ ಮೂಲಕವಾಗಿ ಬೇರೆಯವರನ್ನು ಕ್ರಿಸ್ತನ ಬಳಿಗೆ ನಡಿಸುವದಕ್ಕೆ ಶಕ್ತರಾಗಬೇಕೆಂದರೆ, ನಾವು "ಕ್ರಿಸ್ತನನ್ನು ಕರ್ತನೆಂದು [ನಮ್ಮ] ಹೃದಯಗಳಲ್ಲಿ ಪ್ರತಿಷ್ಠೆಪಡಿಸಿ" ಕೊಳ್ಳಬೇಕು (1 ಪೇತ್ರ 3:15). ನಮ್ಮ ಜೀವಿತಗಳಲ್ಲಿ ಕ್ರಿಸ್ತನನ್ನು ನಮ್ಮ ಕರ್ತನನ್ನಾಗಿ ಹೊಂದಿದವರಾಗಿ ನಮಗೆ ಅತ್ಯಗತ್ಯವಾಗಿ ಬೇಕಾಗಿರುವ ಸಮಾಧಾನವನ್ನು ತಿಳಿಯುವೆವು. ನಾವು ಜೀವನವನ್ನು ಧೈರ್ಯದಿಂದ ಎದುರಿಸುವಂತೆ ದೃಢವಿಶ್ವಾಸವನ್ನು ಹೊಂದಿಕೊಳ್ಳುವೆವು ಮತ್ತು ನಮ್ಮ ನಂಬಿಕೆಯು ದುರ್ಬಲವಾಗಿರುವ ವೇಳೆಯಲ್ಲಿ ಜಯ ಹೊಂದಲು ಶಕ್ತಿಯನ್ನು ಪಡಕೊಳ್ಳುವೆವು. ಶುದ್ಧಗೊಳಿಸಲ್ಪಟ್ಟ ಕ್ರಿಸ್ತನು ನಮ್ಮ ಹೃದಯಗಳಲ್ಲಿ ಇರುವದಾದರೆ, ನಮಗೆ ಅಗತ್ಯವಿರುವ ಹಾಗೂ ನಾವು ಬಯಸುವ "ಸಮೃದ್ಧಿಯಾದ ಕೃಪೆ" ಯು ನಮ್ಮದಾಗಬಲ್ಲದು (ಅಪೊಸ್ತಲರ ಕೃತ್ಯಗಳು 4:33). ಅಳೆಯಲಾಗದಂಥಹ ಕೃಪೆಯು ಈಗಲೂ ಸಹ ನಮ್ಮ ನಿಕ್ಷೇಪವಾಗಿರುತ್ತದೆ.

## ದೇವರ ಸಮೀಪಕ್ಕೆ ಬರುವದು (7:19)

ದೇವರ ಸಮೀಪಕ್ಕೆ ಬನ್ನಿರಿ ಎಂದು ನಮಗೆ ಆಜ್ಞಾಪಿಸಲಾಗಿರುತ್ತದೆ (ಯಾಕೋಬ 4:8). ಆತನು ಈಗಾಗಲೆ ನಮಗೆ ಸಮೀಪವಾಗಿ ಬಂದಿದ್ದಾನೆ; ನಮ್ಮ ಪಾತ್ರವನ್ನು ಮಾಡುವದಕ್ಕೆ ನಮಗೆ ಸಿಕ್ಕಿರುವ ಸದವಕಾಶವನ್ನು ನಾವು ನಿರಾಕರಿಸಬಾರದು. ನಾವು ಆತನ ಸಮೀಪಕ್ಕೆ ಬಂದರೆ ಆತನು ನಮ್ಮ ಸಮೀಪಕ್ಕೆ ಬರುವನೆಂಬುದಾಗಿ ಯಾಕೋಬನು ಪರೋಕ್ಷವಾಗಿ ಸೂಚಿಸುತ್ತಾನೆ. ಮತ್ತಾಯ 11:28-30ರ ಮಹಾ ಆಮಂತ್ರಣವು ದೇವರಿಂದ ಬಂದದ್ದಾಗಿದೆ, ಕ್ರಿಸ್ತನ ಮೂಲಕವಾಗಿ ತನ್ನ ಬಳಿಗೆ ಬರುವಂತೆ ನಮ್ಮನ್ನು ಬೇಡಿಕೊಳ್ಳುತ್ತಿದ್ದಾನೆ. ನಾವು ಪ್ರಕಟನೆ 22:17ರಲ್ಲಿನ ಆಜ್ಞೆಗೆ ವಿಧೇಯರಾಗತಕ್ಕದ್ದು: "ಬಾಯಾರಿದವನು ಬರಲಿ . . ."

ಕನಿಷ್ಠ ಎರಡು ಕಾರ್ಯಗಳು ಒಬ್ಬ ವ್ಯಕ್ತಿಯನ್ನು ದೇವರಿಂದ ದೂರವಿರಿಸುತ್ತವೆ. ಮೊದಲನೆಯದು *ಪಾಪ*. ನಮ್ಮ ಪರಿಶುದ್ಧ ದೇವರ ಸದ್ಗುಣವೇ ಪಾಪಿಯನ್ನು ಆತನ ಸನ್ನಿಧಿಯೊಳಗೆ ಪ್ರವೇಶವನ್ನು ನಿರಾಕರಿಸುತ್ತದೆ (ಯೆಶಾಯ 59:1, 2; ಪ್ರಕಟನೆ 21:27). ಮಾನವ ಜೀವಿಗಳು ಅದನ್ನು ಗ್ರಹಿಸುವಂತೆ ತೋರುತ್ತದೆ. ಎರಡನೆಯದು *ಭಯ*. ನಮ್ಮ ಆತ್ಮಗಳ ಮೇಲೆ ಅಪರಾಧವನ್ನು ಹೊತ್ತವರಾಗಿ ದೇವರನ್ನು ಎದುರುಗೊಳ್ಳಬೇಕೆಂಬ ಹೆಚ್ಚುಕಡಿಮೆ ನಮ್ಮಲ್ಲಿ ಅಂತರ್ಗತವಾಗಿರುವ ಪ್ರಜ್ಞೆಯು ಭಯವನ್ನು ತರುತ್ತದೆ. ಯೆಶಾಯನು ಯೆಹೋವನ ಮಹಿಮೆಯನ್ನು ಕಣ್ಣಾರೆ ನೋಡಿದಾಗ ತಾನು "ಹೊಲಸು ತುಟಿಗಳುಳ್ಳ" ಒಬ್ಬ ಪಾಪಿ ಎಂಬದನ್ನು ಗುರುತಿಸಿಕೊಂಡನು (ಯೆಶಾಯ 6:5). ತಮಗೆ ಕ್ಷಮಾಪಣೆಯು ಇರುತ್ತದೆಂಬದಾಗಿ ವಾಕ್ಯದಿಂದ ಕಲಿತುಕೊಂಡಿರುವವರು ಮರಣವನ್ನು ಭಯವಿಲ್ಲದೆ ಎದುರಿಸಬಲ್ಲರು (ಇಬ್ರಿಯ 2:14, 15). ಕಾಲದಲ್ಲಿ, ನಂಬಿಕೆಯಿಂದ ತುಂಬಿದ ಹೃದಯವುಳ್ಳವನಾಗಿ ಒಬ್ಬ ವ್ಯಕ್ತಿಯು ಇಹವನ್ನು ತ್ಯಜಿಸಿ ಮನೆಗೆ ಹೋಗಲು ಮತ್ತು ದೇವರ ಜೊತೆಯಲ್ಲಿರುವದಕ್ಕೆ ಸಿದ್ಧನಾಗಿರಬಲ್ಲನು ಯಾಕೆಂದರೆ ಆತನು ಆ ಭಯವನ್ನು ಜಯಿಸಿದವನಾಗಿದ್ದಾನೆ ಮತ್ತು ತನ್ನ ಪರಲೋಕದ ತಂದೆಗೆ

ಸಮೀಪಿಸಲು ನಿರೀಕ್ಷಿಸುತ್ತಾನೆ.

**ನಿರ್ಬಂಧಗೊಳಿಸುವ ಸುನ್ನತಿ (7:20, 21)**

ಯೆಹೂದಿಕರಣಗೊಳಿಸುವವರು ಅನ್ಯಜನಾಂಗದ ಕ್ರೈಸ್ತರನ್ನು ಸುನ್ನತಿ ಮಾಡಿಸಿಕೊಳ್ಳಬೇಕೆಂದು ನಿರ್ಬಂಧಗೊಳಿಸಲು ಪ್ರಯತ್ನಿಸಿದ ಕುರಿತಾಗಿ ಗಲಾತ್ಯ 5:1-5 ಮತ್ತು ರೋಮಾ 2:25-28 ವಾಕ್ಯಭಾಗಗಳು ಕಲಿಸುತ್ತವೆ. ಪೌಲನು ಆ ಕೃತ್ಯವನ್ನು ಖಂಡಿಸಿದನು, ಧರ್ಮಶಾಸ್ತ್ರದ ಒಂದು ಭಾಗವನ್ನು ಅನುಸರಿಸಬೇಕೆಂದು ವಿಧಿಸುವದಾದರೆ ದೇವರಿಂದ ನೀತಿವಂತರೆಂದು ನಿರ್ಣಯಿಸಲ್ಪಡಬೇಕಾದರೆ ಇಡೀ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಬೇಕೆಂಬದಾಗಿ ಒಬ್ಬನು ಹೇಳುವದು ತಾರ್ಕಿಕವಾಗಿಯೇ ಇರುವದು ಎಂಬುದನ್ನು ತೋರಿಸಿ ಕೊಡುತ್ತಾನೆ. ಅದೇ ರೀತಿಯಲ್ಲಿಯೇ, ಧರ್ಮಶಾಸ್ತ್ರದ ಒಂದು ಭಾಗವನ್ನು ನೆರವೇರಿಸಿದರೆ ಮತ್ತು ತೆಗೆದು ಹಾಕಲ್ಪಟ್ಟರೆ ಅದರಲ್ಲಿರುವ ಎಲ್ಲವೂ ಹಾಗೆಯೇ ಮಾಡಲ್ಪಡಬೇಕು ಎಂಬುದು ತಾರ್ಕಿಕವಾಗಿರುತ್ತದೆ. ಇಬ್ರಿಯರಿಗೆ ಪತ್ರಿಕೆಯು ಯೆಹೂದಿ ವಿಶ್ವಾಸಿಗಳಿಗೆ ಬರೆಯಲ್ಪಟ್ಟಿತ್ತಾದ್ದರಿಂದ, ಸುನ್ನತಿ ವಿಷಯವನ್ನು ಪ್ರಸ್ತಾಪಿಸುವ ಅಗತ್ಯವಿರಲಿಲ್ಲ. ಅನ್ಯಜನಾಂಗದ ಕ್ರೈಸ್ತರ ವಿಷಯದಲ್ಲಿ ಈ ಮುಂಚಿನ ಬರಹಗಳಲ್ಲಿ ಈ ಸಮಸ್ಯೆಯು ಇತ್ಯರ್ಥಗೊಳಿಸಲ್ಪಟ್ಟದ್ದಾಗಿತ್ತು.

**ಒಂದು ಶಾಶ್ವತವಾದ ಯಾಜಕತ್ವ (7:20, 21)**

ಹೊಸ ಒಡಂಬಡಿಕೆಯ ಯಾಜಕತ್ವದ ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವದಿಲ್ಲ ಎಂದು ದೇವರು ಆಣೆಯಿಟ್ಟು ಹೇಳಿರುತ್ತಾನೆ. ಇದು ಕ್ರಿಸ್ತನ ಬಳಿಕ ಒಬ್ಬ ಹೊಸ "ಪ್ರವಾದಿ" ಯ ನಾಯಕತ್ವದಲ್ಲಿ ಒಂದು ಕಡೆಯ ವ್ಯವಸ್ಥೆಗೆ ಅವಕಾಶವನ್ನೇ ಕೊಡುವದಿಲ್ಲ. ಅಲ್ಲದೆ ಆರೋನನ ಅಥವಾ ಮೆಲ್ಕಿಜೆದೇಕನ ಯಾಜಕತ್ವಗಳನ್ನು ಪುನರುಜ್ಜೀವನಗೊಳಿಸುವದನ್ನು ಯಾವನೂ ಸಮರ್ಥಿಸಿಕೊಳ್ಳುವದಕ್ಕೂ ಸಾಧ್ಯವಿಲ್ಲ. ಎರಡು ಸಾವಿರ ವರ್ಷಗಳಲ್ಲಿ ಶಾಸ್ತ್ರಗಳ ಸಿದ್ಧಾಂತವು ಮಾರ್ಪಟ್ಟಿರುವದಿಲ್ಲ.

ಈ ವಿಷಯವಾಗಿ, ಎಂದಿಗೂ "ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವದಿಲ್ಲ" ಎಂಬ ದೇವರ ಯೋಜನೆಯು ಆತನು ಅಬ್ರಹಾಮನನ್ನು ಆಶೀರ್ವದಿಸುವಕ್ಕೆ ಮುಂದುವರೆಸುವ ಒಂದು ದಾರಿಯನ್ನು ಸೂಚಿಸುತ್ತದೆ. ದೊಡ್ಡ ಶಾರೀರಿಕ ಆಶೀರ್ವಾದಗಳು ಉದ್ದೇಶಿಸಲ್ಪಟ್ಟಿದ್ದವಾದರೂ, ಅವೆಲ್ಲವುಗಳಿಗಿಂತೂ ಅತ್ಯಂಥ ದೊಡ್ಡದೆಂದರೆ ಆತ್ಮೀಕವಾದದ್ದು. ನಂಬಿಗಸ್ತರ ತಂದೆಯಾಗಿ (ನೋಡಿರಿ ರೋಮಾ 4:16), ಅಬ್ರಹಾಮನು ಸಭೆಯ ಮೂಲಕವಾಗಿ ಆಶೀರ್ವಾದ ಪಡೆದುಕೊಳ್ಳುವದನ್ನು ಮುಂದುವರೆಸಿರುತ್ತಾನೆ. ಅದಕ್ಕೆ ತದ್ವಿರುದ್ಧವಾಗಿ, ಇಸ್ರಾಯೇಲ್ಯರಿಗೆ ಮಾಡಲಾದ ದೇಶಗಳ ವಾಗ್ದಾನಗಳೆಲ್ಲಾ ಬಾಬಿಲೋನಿಗೆ ಸೆರೆಯಾಳುಗಳಾಗಿ ಹೋಗುವ ಮುನ್ನ ಅಥವಾ ಆ ವೇಳೆಯಲ್ಲಿ ಮಾಡಲ್ಪಟ್ಟಿರುತ್ತವೆ. ಇಸ್ರಾಯೇಲ್ಯರಿಗಾಗಿ ನೆರವೇರದ ಉಳಿದಿರುವ ಯಾವದೆ ಬೈಬಲ್ ವಾಗ್ದಾನಗಳಿರುವದಿಲ್ಲ, ಒಂದು ಜನಾಂಗೀಯ ಅಥವಾ ದೇಶವಾಗಿ ಅವರಿಗೆ ಪುನಃ ಒಪ್ಪಿಸಲ್ಪಡಬೇಕಾಗಿರುವ ಯಾವದೇ ಭೂಮಿಯು ಇರುವದಿಲ್ಲ.

**ಮತ್ತೊಬ್ಬನಿಗಾಗಿ ಒಂದು ಹೊಣೆಗಾರಿಕೆ (7:20-22)**

ಇಬ್ರಿಯ 7:22ನೇ ವಚನವು ಯೇಸುವನ್ನು ಹೊಸ ಮತ್ತು ಶ್ರೇಷ್ಠವಾದ ಒಡಂಬಡಿಕೆಗೆ ಒಬ್ಬ "ಹೊಣೆಗಾರ" ಎಂದು ಕರೆಯುತ್ತದೆ. ಗ್ರೀಕ್-ರೋಮನ್ ಸಂಪ್ರದಾಯದಲ್ಲಿ ಸಾಲಗಾರನು ಒಂದು ವೇಳೆ ಹಿಂದಕ್ಕೆ ಕೊಟ್ಟು ತೀರಿಸಲು ವಿಫಲನಾಗುವದಾದರೆ ಯಾರಾದರೊಬ್ಬರು ಹೊಣೆಗಾರ

ಅಥವಾ ಜಾಮೀನು ಆಗಬೇಕೆಂಬ ಒಂದು ಸಾಮಾನ್ಯವಾದ ಆಚಾರವಿತ್ತು. ಯೇಸು ನಮ್ಮ ಹೊಣೆಗಾರನಾಗಿ, ದೇವರ ಕಡೆಗಿರುವ ಹೊಣೆಗಳು ನೆರವೇರಿಸಲ್ಪಡುವಂತೆ ಖಾತ್ರಿಪಡಿಸುವನು.

ದೇವರು ನಮ್ಮ ಕಡೆಗಿರುವ ವಾಗ್ದಾನಗಳಲ್ಲಿ ತಪ್ಪುವದಿಲ್ಲ ಎಂಬುದನ್ನು ಯೇಸು ನಿಶ್ಚಯಪಡಿಸುತ್ತಾನೆಂಬ ಅರ್ಥವನ್ನು ಸಹ ಈ ವಾಕ್ಯಭಾಗವು ಕೊಡಬಲ್ಲದು. ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುತ್ತಿಲ್ಲವೆಂದು ನಾವು ನಂಬುವದಾದರೆ, ನಾವು ಕ್ರಿಸ್ತನ ಕಡೆಗೆ ತಿರುಗಿಕೊಳ್ಳಬಹುದಿತ್ತು, ಆತನು ಪ್ರತಿಯೊಂದು ವಾಗ್ದಾನವು ನೆರವೇರುವದನ್ನು ಖಾತ್ರಿಪಡಿಸುತ್ತಾನೆ. ಯಾವ ರೀತಿಯಲ್ಲಿದ್ದರೂ ಸರಿಯೇ, ದೇವರಿಂದ ಮಹಾ ಆಶೀರ್ವಾದಗಳಿಗೆ ಹೊಣೆಗಾರಿಕೆಯ ಕೆಲಸವು ಒಂದು ಸುಂದರವಾದ ಯೋಚನೆಯಾಗಿರುವದು.

## ಒಂದು ಖಾತ್ರಿಪಡಿಸಲ್ಪಟ್ಟಿರುವ ಒಡಂಬಡಿಕೆ (7:22)

ಯೇಸುವು ಒಂದು ಉತ್ತಮವಾದ ಒಡಂಬಡಿಕೆಗಾಗಿ ನಮಗೆ ಹೊಣೆಗಾರನಾಗಿದ್ದಾನೆ. ಒಬ್ಬ ಹೊಣೆಗಾರ, ಅಥವಾ ಜಾಮೀನುಗಾರನ ಕುರಿತಾದ ಮನಃಮುಟ್ಟುವ ಕಥೆಯು ಶಾಸ್ತ್ರಗಳಲ್ಲಿ ಕೊಡಲ್ಪಟ್ಟಿದೆ. ಯೆಹೂದನು ತನ್ನನ್ನು ಬೆನ್ಯಾಮೀನನಿಗಾಗಿ ಹೊಣೆಗಾರ ನನ್ನಾಗಿ ಮಾಡಿಕೊಂಡನು, ಬೆನ್ಯಾಮೀನನು ಸುರಕ್ಷಿತವಾಗಿ ಐಗುಪ್ತದಿಂದ ಹಿಂದಿರುಗಿ ಬರುವನೆಂದು ಆತನು ತನ್ನ ತಂದೆಗೆ ಖಾತ್ರಿ ಪಡಿಸಿದನು (ಆದಿಕಾಂಡ 43:8, 9). ಯೆಹೂದನು ಹೀಗೆ ಹೇಳಿದನು, "ನಾನು ಅವನನ್ನು ತಿರಿಗಿ ಕರಕೊಂಡು ಬಂದು ನಿನ್ನೆದುರಿನಲ್ಲಿ ನಿಲ್ಲಿಸದೆ ಹೋದರೆ ಆ ದೋಷ ಎಂದೆಂದಿಗೂ ನನ್ನ ಮೇಲೆ ಇರಲಿ." ಯೇಸುವಿನ ಅರ್ಪಣೆಯ ಕುರಿತು ಎಂತಹ ಒಂದು ಸರಿಸಾಟಿಯಿಲ್ಲದ ಪೂರ್ವನಿದರ್ಶನ! ತತ್ಪರಿಣಾಮವಾಗಿ, ಯೇಸು ತನ್ನ ತಂದೆಗೆ ಹೀಗೆ ಹೇಳುವನು, "ನೀನು ಪ್ರೀತಿಸುವಂಥ ಆ ನಾಶನದಲ್ಲಿರುವ ಆತ್ಮಗಳಿಗಾಗಿ ನಾನು ಭೂಮಿಗೆ ಹೋಗಿ ಅತ್ಯಂಥ ಅವಮಾನಕರವಾದ ಮತ್ತು ನೋವುಕರವಾದ ಮರಣಗಳಲ್ಲೊಂದನ್ನು ಶಿಲುಬೆಯ ಮೇಲೆ ಅನುಭವಿಸುವೆನು. ನೀನು ಅವರನ್ನು ರಕ್ಷಿಸುವದರಲ್ಲಿ ನೀತಿಯುಳ್ಳವನಾಗುವಂತೆ ನಿರಪರಾಧಿಯಾಗಿ ಅಪರಾಧಿಗಳಿಗೋಸ್ಕರ ಮರಣಿಸುವ ಮೂಲಕ ನಾನೇ ವೈಯಕ್ತಿಕವಾಗಿ ವಿಮೋಚನೆಯ ಒಂದು ದಾರಿಯನ್ನು ಒದಗಿಸುವೆನೆಂದು ಹೊಣೆಗಾರಿಕೆಯನ್ನು ತೆಗೆದುಕೊಳ್ಳುತ್ತೇನೆ. ನಾನು ಸದಾಕಾಲಕ್ಕೂ ಅವರ ದೋಷವನ್ನು ಹೊತ್ತುಕೊಳ್ಳುವೆನು" (ನೋಡಿರಿ ರೋಮಾ 3:23-26). ದೇವರ ನ್ಯಾಯದ ಶರತ್ತುಗಳನ್ನು ನಾವು ಎಂದಿಗೂ ನೆರವೇರಿಸುವದಕ್ಕೆ ಶಕ್ತರಾಗಿರುತ್ತಿರಲಿಲ್ಲ, ಆದರೆ ಯೇಸುವಿಗೆ ಸಾಧ್ಯವಿತ್ತು ಮತ್ತು ಆತನು ಮಾಡಿದನು. ಈಗ, ನಮ್ಮನ್ನು ರಕ್ಷಿಸುವದರಲ್ಲಿ ದೇವರು ನೀತಿಯುಳ್ಳವನಾಗಿರಬಲ್ಲನು, ಆತನು ನಮ್ಮ ಮೇಲಿಟ್ಟಿರುವ ಪ್ರೀತಿಯ ನಿಮಿತ್ತವಾಗಿ ಅದನ್ನು ಮಾಡಬೇಕೆಂದು ಹಂಬಲಿಸುತ್ತಿದ್ದನು (ಯೋಹಾನ 3:16). ಈ ವ್ಯವಸ್ಥೆಯ ವಿಸ್ಮಯಕರ ಸಂಗತಿಯೆಂದರೆ ದೇವರಿಂದ ಮಾಡಲ್ಪಡುವ ಎಲ್ಲಾ ಕಾರ್ಯಗಳು ನ್ಯಾಯವಾಗಿರುತ್ತವೆ. ಆತನು ಅನ್ಯಾಯವಾಗಿ ನಡೆದುಕೊಳ್ಳುವದಕ್ಕೆ ಸಾಧ್ಯವಿಲ್ಲ.

## ಸೇವೆಯಿಂದ ಅನರ್ಹಗೊಳಿಸಲ್ಪಟ್ಟರು (7:24, 25)

ಯೇಸುವು ಮೆಲ್ಕಿಜೆದೇಕನ ಕ್ರಮದಲ್ಲಿ ಒಬ್ಬ ಯಾಜಕನಾಗಿ ಅರ್ಹನಾಗಬೇಕಾದರೆ ಆತನು ಸಾಧ್ಯವಾದ ಅತ್ಯಂಥ ಉನ್ನತವಾದ ನೈತಿಕ ಗುಣಸ್ವಭಾವದವನಾಗಿರಬೇಕಿತ್ತು. ಸರಿಯಾದ ಕುಲದಲ್ಲಿ ಹುಟ್ಟಿದ್ದರೂ ಒಬ್ಬನು ಯಾಜಕತ್ವಕ್ಕೆ ವಹಿಸಿಕೊಳ್ಳುವದರಿಂದ ತಿರಸ್ಕರಿಸಲ್ಪಡುವದಕ್ಕೆ ಯೆಹೂದಿ ಧರ್ಮಶಾಸ್ತ್ರ ಮತ್ತು ಸಂಪ್ರದಾಯದಲ್ಲಿ 142 ಕಾರಣಗಳಿದ್ದವು. ಇವೆಲ್ಲವೂ

ದೈಹಿಕವಾಗಿದ್ದವು ಮತ್ತು ಆತನ ಆಂತರ್ಯದ ಸ್ವಭಾವ ಅಥವಾ ಗುಣಲಕ್ಷಣಗಳಿಗೆ ಯಾವದೇ ಸಂಬಂಧ ಹೊಂದಿರಲಿಲ್ಲ. ಆತನು ಹೇಗೆ ಕಾಣಿಸುತ್ತಾನೆ, ಆತನ ಉಡುಪು ಹೇಗಿದೆ, ಮತ್ತು ಆತನು ತನ್ನ ಕೂದಲನ್ನು ಹೇಗೆ ಕತ್ತರಿಸಿಕೊಳ್ಳುತ್ತಾನೆ ಎಂಬ ಇವೆಲ್ಲವೂ ಸರ್ವೋಚ್ಛವಾಗಿ ಪ್ರಾಮುಖ್ಯತೆಯನ್ನು ಹೊಂದಿದ್ದವು. ಒಬ್ಬನು ಯಾಜಕನಾಗಿ ನೇಮಿಸಲ್ಪಡಬೇಕೆಂದರೆ ಹಲವಾರು ಧಾರ್ಮಿಕ ವಿಧಿವಿಧಾನಗಳನ್ನು ಹಾದು ಹೋಗಬೇಕಿತ್ತು.

ಆ ನಿಯಮಗಳ ಬಾಹ್ಯ ಸ್ವಭಾವವು ಎತ್ತಿ ತೋರಿಸುವ ಸತ್ಯವೇನೆಂದರೆ ಧರ್ಮಶಾಸ್ತ್ರಕ್ಕೆ ಮನುಷ್ಯರನ್ನು ದೇವರ ಬಳಿಗೆ ತರುವದಕ್ಕಾಗಲಿ ಮತ್ತು ಅವರನ್ನು ಪಾಪದಿಂದ ಬಿಡಿಸಿ ನಿರ್ಮಲಗೊಳಿಸುವದಕ್ಕಾಗಲಿ ವಿಫಲವಾಯಿತು ಎಂಬದೆ. ಧರ್ಮಶಾಸ್ತ್ರದ ನಿಯಮಗಳ ಮತ್ತು ಆರಾಧನೆಯ ಇಡೀ ಸ್ವಭಾವವು ಬಾಹ್ಯವಾಗಿತ್ತು, ನೋಡುವಿಕೆ, ಮೂಸುವಿಕೆ, ಕೇಳಿಸಿಕೊಳ್ಳುವಿಕೆ, ಮತ್ತು ಸ್ಪರ್ಶದಂತಹ ಶಾರೀರಿಕ ಇಂದ್ರಿಯಗಳ ಮೇಲೆ ಆಧಾರವಾಗಿತ್ತು. ತುತೂರಿಗಳನ್ನು ಊದುವದು ಮತ್ತು ಮಹಾಯಾಜಕನ ಸುಂದರವಾದ ನಿಲುವಂಗಿಗಳಿಗೂ ಮನುಷ್ಯನ ಹೃದಯ ಅಥವಾ ಆತ್ಮಕ್ಕೂ ಯಾವದೇ ಸಂಬಂಧವಿರಲಿಲ್ಲ.

ಕೆಲವು ಯೆಹೂದಿ ಕ್ರೈಸ್ತರು ನಿಜಸ್ವರೂಪವನ್ನು ತೊರೆದು ಬಿಟ್ಟು ಛಾಯೆಯ ಕಡೆಗೆ ಹಿಂದಿರುಗುವದಕ್ಕೆ ಬಯಸಿದ್ದರು (ಇಬ್ರಿಯ 10:1), ಆದರೆ ಛಾಯೆಗಳು ಆರಾಧಕನನ್ನು ದೇವರ ಸಮೀಪಕ್ಕೆ ಬರುವಂತೆ ಅರ್ಹಗೊಳಿಸಲಾಗಲಿಲ್ಲ. ಧರ್ಮಶಾಸ್ತ್ರವು ಮನುಷ್ಯನ ಅಗತ್ಯತೆಗಳಿಗೆ ಆತ್ಮೀಕವಾಗಿ ಸಾಕಾದವುಗಳಾಗಿ ಇರದಂತೆ ಅತಿಯಾಗಿ ಶಾರೀರಿಕ ಮಿತಿಗಳನ್ನು ಹೊಂದಿತ್ತು. ಛಾಯೆ ಹಾಗೂ ನಿಜಸ್ವರೂಪದ ನಡುವಿನ ವ್ಯತ್ಯಾಸವನ್ನು ನೋಡುವದಕ್ಕಾಗದೆ ಇರುವರು ಎಂಥ ಒಂದು ದುರಂತ![58] ಧರ್ಮಶಾಸ್ತ್ರವು ಮನುಷ್ಯನ ಪಾಪವನ್ನು ಮತ್ತು ವಿಫಲತೆಯನ್ನು ಎತ್ತಿ ತೋರಿಸುವದಕ್ಕೆ ಶಕ್ತವಾಗಿತ್ತು, ಆದರೆ ಜನರನ್ನು ಯೇಸುವು ಮಾಡುವ ಪ್ರಕಾರ ಉನ್ನತಗಳಿಗೆ ಎತ್ತುವದಕ್ಕೆ ಅಶಕ್ತವಾಗಿತ್ತು.

## ಯೇಸು ಮತ್ತು ನಮ್ಮ ಸಮಸ್ಯೆಗಳು (7:25)

ಯೇಸು ನಮ್ಮ ಪಾಪ, ಮರಣ, ಮತ್ತು ಸೈತಾನನ ಶೋಧನೆಗಳ ವಿಷಯದಲ್ಲಿ ಹೇಗೆ ವ್ಯವಹರಿಸಿದನೆಂಬುದು ಆಶ್ಚರ್ಯಕರವಾದದ್ದು. ಇವುಗಳು ಯಾವಾಗಲೂ ನಮ್ಮ ಮುಂದಿರುತ್ತವೆ. ನಾವು ಅವಕಾಶ ಕೊಡುವದಾದರೆ ಸೈತಾನನು ನಮ್ಮನ್ನು ನಿರಂತರವಾಗಿ ಶೋಧಿಸುತ್ತಲೇ ಇರುವನು. ನಾವು ನಮ್ಮ ಕಷ್ಟಗಳನ್ನು ದಿನಾಲೂ ಯೇಸುವಿಗೆ ಒಪ್ಪಿಸಿ ಕೊಡಬೇಕು (ಫಿಲಿಪ್ಪಿ 4:4-8), ಆತನು ನಮಗೋಸ್ಕರ ವಿಜ್ಞಾಪನೆ ಮಾಡುವನು. ಯೇಸುವಿನಲ್ಲಿ ನಮಗೆ ಎಂಥ ಮಿತ್ರನಿದ್ದಾನೆ! ನೀವು ವಾಸ್ತವದಲ್ಲಿ ಅನುದಿನದ ಪ್ರಾರ್ಥನೆಗಳು ಮತ್ತು ವಿಧೇಯತೆಯ ಮೂಲಕ ಆತನೊಂದಿಗೆ ಆಪ್ತವಾದ ಸ್ನೇಹ ಬೆಳೆಸಿಕೊಳ್ಳುವದನ್ನು ಊಹಿಸಿಕೊಳ್ಳಬಲ್ಲಿರಾ? ಅದು ಹೆಚ್ಚುಕಡಿಮೆ ಗ್ರಹಿಸಿಕೊಳ್ಳಲಾಗದಷ್ಟು ಮಹಿಮೆಕರವಾದ ಯೋಚನೆಯಾಗಿದೆ, ಆದಾಗ್ಯೂ ನಂಬಿಕೆಯು ಮೂಲಕ ನಾವು ಆತನೊಂದಿಗೆ ಸಹಕಾರ ನೀಡುವದಾದರೆ ಇದು ಸಾಧ್ಯವಿರುತ್ತದೆ (1 ಪೇತ್ರ 1:3-5). ಕ್ರೈಸ್ತೀಯ ಭೂಷಣಗಳನ್ನು ನಮ್ಮ ಜೀವಿತಗಳಿಗೆ ಸೇರ್ಪಡೆಗೊಳಿಸಿಕೊಳ್ಳುವ ಪ್ರಕ್ರಿಯೆಯು ರಕ್ಷಣೆಯ ಪೂರ್ಣ ನಿಶ್ಚಯತೆಯನ್ನು ಈಗ ಮತ್ತು ಅಂತಿಮವಾಗಿ ಒದಗಿಸುತ್ತದೆ (ನೋಡಿರಿ 2 ಪೇತ್ರ 1:5-11). ಕ್ರಿಸ್ತನು ನಮ್ಮ ಸಮಕಾಲೀನನಾಗಿ ಜೀವಿಸುತ್ತಾನೆ, ಅಥವಾ ಆತನು ನಮ್ಮ ಮಧ್ಯಸ್ಥ ಮತ್ತು ಮಹಾಯಜಕನಾಗಿ ಸೇವೆಯನ್ನು ಮಾಡಬಹುದು.

ಯೇಸು ನಮಗೆ ನಮ್ಮ ಪಾಪ ಸಮಸ್ಯೆಯ ವಿಷಯದಲ್ಲಿ ಸಹಾಯವನ್ನು

ಮಾಡುತ್ತಾನಾದರೂ, ನಾವು ಜ್ಞಾನ ಮತ್ತು ನಂಬಿಕೆಯಲ್ಲಿ ಬೆಳೆಯುವದಕ್ಕೆ ಒಂದು ಪ್ರಯತ್ನವನ್ನು ಮಾಡುವ ಹೊರತು ಪಾಪದ ಬಯಕೆಯನ್ನು ಜಯಿಸುವದಕ್ಕೆ ಸಾಧ್ಯವಾಗುವದಿಲ್ಲ (1 ಪೇತ್ರ 2:1-3; 2 ಪೇತ್ರ 3:18). ನಮ್ಮ ಪ್ರಾರ್ಥನೆಗಳ ಮೂಲಕ ನಾವು "ಸಮಯೋಚಿತವಾದ ಸಹಾಯ"ವನ್ನು ಪಡೆಯುತ್ತೇವೆ (ಇಬ್ರಿಯ 4:16), ಆದರೆ ಇದು ಶೋಧನೆಯಿಂದ ತಪ್ಪಿಸಿಕೊಳ್ಳುವ ದಾರಿಯನ್ನು ನಾವು ಹುಡುಕಬೇಕಾದ ಅಗತ್ಯತೆಯನ್ನು ಅಳಿಸಿ ಹಾಕುವದಿಲ್ಲ (1 ಕೊರಿಂಥ 10:13).

ಕೆಲವು ತಮ್ಮ ಪಾಪಭರಿತ ಜೀವನಶೈಲಿಗಳ ಕುರಿತು ಹೀಗೆ ಹೇಳುತ್ತಾರೆ, "ಅದು ನನ್ನ ಸ್ವಭಾವದಲ್ಲಿಯೇ ಇರುವದಷ್ಟೆ. ನಾನು ಎಂದಿಗೂ ಬದಲಾಗುವದಕ್ಕೆ ಸಾಧ್ಯವಿಲ್ಲ." ಕೆಲ ಅತ್ಯಂಥ ಕೆಟ್ಟ ವಿಧವಾದ ಅನೈತಿಕ ಜನರು ಮಾರ್ಪಟ್ಟಿರುತ್ತಾರೆಂಬುದಾಗಿ ಪೌಲನು ಹೇಳಿದನು (1 ಕೊರಿಂಥ 6:9-11). ಕೊರಿಂಥದಲ್ಲಿರುವವರು ಘೋರವಾದ ಲೈಂಗಿಕ ವಿಕೃತಿಯ ಜಾರತ್ವಗಳಿಂದ ಮತ್ತು ಲೋಭದಿಂದ ರಕ್ಷಣೆ ಹೊಂದಿರಬಲ್ಲರಾದರೆ, ಇಂದು ಕೆಲವರು ಬದಲಾಗುವದಕ್ಕೆ ಸಾಧ್ಯವಿಲ್ಲ ಎಂದು ಯಾರು ಹೇಳಬಲ್ಲರು? ಸೈತಾನನು ಆ ಸುಳ್ಳನ್ನು ಕಲಿಸುತ್ತಾನೆ, ಹೀಗೆ ಜನರನ್ನು ನಿರಾಶೆಗೆ ತಳ್ಳುವದು ಆತನ ಉದ್ದೇಶವಾಗಿದೆ. ಯೇಸು ನಿರೀಕ್ಷೆಯನ್ನು ಕೊಡುತ್ತಾನೆ ಮತ್ತು ನಮ್ಮನ್ನು ನಿರಾಶೆಯಿಂದ ಬಿಡಿಸಿ ರಕ್ಷಿಸುತ್ತಾನೆ.

ನಾವು ಪದೇ ಪದೇ ಪಾಪ ಮಾಡಬಹುದು, ಆದರೆ ಯೇಸು ಪುನಃ ತನ್ನ ರಕ್ತವನ್ನು ಅರ್ಪಿಸಿದ್ದಾನೆ ಅಥವಾ ತಂದೆಗೆ ತಾನು ಶಿಲುಬೆಯ ಮೇಲೆ ಅನುಭವಿಸಿದ ಬಾಧೆಯನ್ನು ಜ್ಞಾಪಕಪಡಿಸಿದ್ದಾನೆಂಬ ಕಲ್ಪನೆಯು ಈ ವಾಕ್ಯಭಾಗದಿಂದ ಸಮರ್ಥಿಸಲ್ಪಡದ ಒಂದು ಕಟ್ಟುಕತೆಯಾಗಿದೆ. ಆ ಅಭಿಪ್ರಾಯವು ಭೂಮಿಯ ಮೇಲೆ "ಪವಿತ್ರಬಲೀ" ಅರ್ಪಿಸುವದನ್ನು ಸಮರ್ಥಿಸುವದಾಗಿದೆ, ಆದರೆ ಅದು ಬೈಬಲಾಧಾರಿತವಾದದ್ದಲ್ಲ. ಯೇಸು ಮರಣಿಸುವದಕ್ಕೆ, ಒಂದೇ ಸಾರಿ-ಸರ್ವಕಾಲಕ್ಕೂ ಕ್ರಿಯೆಗೆ ಸಿದ್ಧನಾಗಿರುವದು ಆತನು ತನ್ನನ್ನು ತಾನೇ ನಿರಾಕರಿಸುವದನ್ನು ವ್ಯಕ್ತಪಡಿಸುತ್ತದೆ (ಇಬ್ರಿಯ 9:27, 28). ತಂದೆಯೊಂದಿಗೆ ಆತನ ಸಂಪರ್ಕವು ನೇರವಾದದ್ದು, ಆದರೆ ಮಾನ ಜೀವಿಗಳಿಗೆ ಅಗತ್ಯವಿರುವಂತೆ ದೇವರಿಗೆ ಯೇಸುವಿನ ಯಜ್ಞದ ಬಗ್ಗೆ ಜ್ಞಾಪಕಪಡಿಸುವ ಅಗತ್ಯವಿರುವದಿಲ್ಲ.

## ಒಬ್ಬ ಪಾಪರಹಿತ ಯಾಜಕನು (7:26)

ಧರ್ಮಾಚಾರಣೆಯ ಸಭೆಗಳು ತಮ್ಮ ಪಾಪಗಳನ್ನು ಅರಿಕೆ ಮಾಡುವವರಿಗಾಗಿ ದೇವರ ಬಳಿಗೆ ಹೋಗುತ್ತಾರೆಂದು ಭಾವಿಸಿಕೊಳ್ಳಲಾಗುವ ವಿಶೇಷ ಯಾಜಕರನ್ನು ಹೊಂದಿರುತ್ತವೆ. ನಾವು ಪಾಪ ಮಾಡಿದಾಗ, ನಾವು ಒಬ್ಬ ಅಪರಿಪೂರ್ಣನಾದ ಮಾನವ ಯಾಜಕನ ಹತ್ತಿರ ಅರಿಕೆ ಮಾಡುವ ಅಗತ್ಯವಿಲ್ಲ. ಕ್ರಿಸ್ತನಲ್ಲಿರುವ ಮತ್ತು ಆತನ ಮೂಲಕ ತಂದೆಯ ಬಳಿಗೆ ಬರುವ ನಾವು ನಮ್ಮ ಮಹಾಯಾಜಕನು ನಿಸ್ಸಂಶಯವಾಗಿ ವಿಶ್ವಾಸಿಸತಕ್ಕವನೆಂಬ ದೃಢನಿಶ್ಚಯವನ್ನು ಹೊಂದಿದ್ದೇವೆ. ಆತನು ನಿರ್ಮಲನೂ ಪರಿಶುದ್ಧನೂ ಆಗಿದ್ದಾನೆ. ಆತನು ನಮ್ಮ ವಿಶ್ವಾಸ ಮತ್ತು ಭರವಸಕ್ಕೆ ಯೋಗ್ಯನಾಗಿದ್ದಾನೆ ಮತ್ತು ನಮ್ಮನ್ನು ಪೂರ್ಣವಾಗಿ ಬಿಡಿಸುವದಕ್ಕೆ ಶಕ್ತಿಯನ್ನು ಹೊಂದಿದ್ದಾನೆ. ಆ ಕೆಲಸವನ್ನು ಮಾಡಲು ಯಾವ ಮಾನವನೂ ಸಾಕಾದವನಲ್ಲ.

ಕ್ರಿಸ್ತನು "ನಿರ್ದೋಷಿ" ಆಗಿದ್ದಾನೆ. ಆತನ ನ್ಯಾಯವಿಚಾರಣೆಯು ಎಷ್ಟೊಂದು ಅನ್ಯಾಯಿಂದ ಕೂಡಿತ್ತು! ನ್ಯಾಯಾಧಿಪತಿಗಳು ದೈವದೂಷಣೆಯ ಆರೋಪದ ಮೇಲೆ ಆತನನ್ನು ದೋಷಿಯೆಂದು ಘೋಷಿಸಿದರು. ಪಿಲಾತನು ಅದಕ್ಕೆ ಹೊರತಾಗಿದ್ದನು, ಆತನು ಯೇಸುವು ನಿರಪರಾಧಿ ಎಂಬುದನ್ನು ಗುರುತಿಸಿದನು (ಲೂಕ 23:4, 13-16, 22); ಆದರೆ ಆತನು ರಾಜಕೀಯ ಸಮಯಸಾಧಕತನಕ್ಕೆ ಒಳಗಾದನು. ಯೇಸು ನಮ್ಮ ಅಪರಾಧವನ್ನು ತನ್ನ ಮೇಲೆ

ಹೊತ್ತುಕೊಂಡನು ಮತ್ತು ತನ್ನ ಮರಣದ ಮೂಲಕ ನಮ್ಮ ಆತ್ಮೀಕ ಸ್ವಸ್ಥತೆಯನ್ನು ತಂದನು (1 ಪೇತ್ರ 2:22-24; 3:18). ಅದು "ಅನೀತಿವಂತರಿಗಾಗಿ" ಒಬ್ಬ "ನೀತಿವಂತನು" ಮರಣಿಸಿದಂತಾಗಿತ್ತು. ಆತನು ಗುಣಸ್ವಭಾವವು ಎಲ್ಲಾ ವಿಧದಲ್ಲಿಯೂ ನಿರ್ಮಲವಾದದ್ದು.

## ಪ್ರತ್ಯೇಕವಾದನು, ಆದಾಗ್ಯೂ ಒಬ್ಬ ಮಿತ್ರನು? (7:26)

ತನ್ನ ಜೀವನ ಮತ್ತು ಗುಣಸ್ವಭಾವದಲ್ಲಿ, ಯೇಸು ಪಾಪಿಗಳಿಗಿಂತ ಸಂಪೂರ್ಣ ವ್ಯತ್ಯಾಸವಾದವನು ಮತ್ತು "ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನು" ಆಗಿದ್ದಾನೆ. ಅದೇ ವೇಳೆಯಲ್ಲಿ, ನಮಗೋಸ್ಕರ ತಾನು ಹೊಂದಿರುವ ಕಳಕಳಿಯಲ್ಲಿ, ಆತನು ತನ್ನನ್ನು ಪಾಪಿಗಳಿಗೆ ಒಬ್ಬ ಮಿತ್ರನೆಂಬುದನ್ನು ಸಾಭಿತುಪಡಿಸಿಕೊಳ್ಳಲು ತನ್ನ ಶಕ್ತಿಯಲ್ಲಿರುವದನ್ನೆಲ್ಲಾ ಮಾಡಿದನು. ಆತನು "ಸುಂಕದವರ ಮತ್ತು ಪಾಪಿಗಳ ಸಂಗಡ ಊಟಮಾಡುತ್ತಾನೆ" ಎಂದು ಅಪಹಾಸ್ಯದಿಂದ ಆರೋಪವನ್ನು ಆತನ ಮೇಲೆ ಹೊರಸಲಾಯಿತು (ಮತ್ತಾಯ 9:11), ಅದು ಆತನ ವಿರೋಧಿಗಳಿಗೆ ಒಂದು ಘೋರವಾದ ಸಂಗತಿಯಾಗಿ ಕಂಡಿತು. ಯೇಸು ಆ ಆರೋಪವನ್ನು ನಿರಾಕರಿಸಲಿಲ್ಲ; ವಾಸ್ತವದಲ್ಲಿ ಅವರ ಸಂಪರ್ಕದಲ್ಲಿರುವ ಉದ್ದೇಶಕ್ಕಾಗಿಯೇ ತಾನು ಲೋಕಕ್ಕೆ ಬಂದೆನೆಂದು ಹೇಳುತ್ತಾನೆ (ಮತ್ತಾಯ 9:12, 13). ಆತನು ಅವರಂತೆಯೇ ಇದ್ದಾನೆಂದು ಆರೋಪಿಸಲಾಯಿತು, ಅವರ ಸಹವಾಸದ ಕಾರಣದಿಂದ ಈತನು ಕುಡುಕನು ಎಂದು ಆರೋಪಿಸುವಷ್ಟರ ಮಟ್ಟಿಗೆ ಹೋಯಿತು (ಮತ್ತಾಯ 11:19).

ನಾವು ಸಹ ಪಾಪಿಗಳಿಗೆ ಮಿತ್ರರಾಗಿರಬೇಕು – ಆದರೆ ಅವರು ದುಷ್ಟಕೃತ್ಯಗಳಲ್ಲಿ ಪಾಲುಗೊಳ್ಳುವ ಮಟ್ಟಿಗೆ ಅಲ್ಲ. ನಾವು ಯೇಸುವಿನಂತಲ್ಲ; ನಾವು ದುಷ್ಟರ ಸಹವಾಸದಲ್ಲಿ ಇರುವದಾದರೆ ಅತಿಯಾಗಿ ಶೋಧನೆಗೆ ಒಳಗಾಗಬಹುದು. ಕ್ರಿಸ್ತನು ಮಾಡಿದಂತೆ ನಾವು ಆ ಗುಂಪನ್ನು ನಮ್ಮ ಭಕ್ತಿಯ ಪ್ರಭಾವದಿಂದ ಮಾರ್ಗದರ್ಶಿಸುವದಕ್ಕೆ ಅಶಕ್ತರಾಗಬಹುದು. ನನಗೆ ಒಂದು ಸಮಯದಲ್ಲಿ ಸೇವೆಗೆ ತರಬೇತಿ ಹೊಂದಬೇಕೆಂದು ಒಂದು ಕ್ರೈಸ್ತ ಕಾಲೇಜಿಗೆ ಹೋಗಿದ್ದ ಒಬ್ಬಬ್ಬ ಯುವಕನ ಪರಿಚಯವಿತ್ತು. ಆತನು ಒಬ್ಬ ಗಮನಾರ್ಹವಾದ ಪ್ರಸಂಗಿಯಾದನು. ಆತನು ಒಂದು ಕಾಲೇಜಿನ ವಿದ್ಯಾರ್ಥಿ ಸಮೂಹವನ್ನು ಆನಂದಪರವಶಗೊಳಿಸಿದ್ದನ್ನು ಅನಂತರದಲ್ಲಿ ನಾವನು ಕೇಳಿಸಿಕೊಂಡೆನು. ಆತನು ರಾತ್ರಿಗಳಲ್ಲಿ ವೇಶ್ಯೆಯರ ಸಂಗಡ ಕಾಫಿಯನ್ನು ಕುಡಿಯುವದಕ್ಕೆ ಹೋಗುತ್ತಿದ್ದನು, ಅವರನ್ನು ಕರ್ತನ ಬಳಿಗೆ ನಡಿಸಬಲ್ಲನೆಂದು ಭಾವಿಸಿಕೊಂಡಿದ್ದನು. ಆಗ ನಾನು ನನ್ನಲ್ಲಿ ಅಂದುಕೊಂಡೆನು, "ನೀನು ಅಂಥ ಕೆಲಸವನ್ನು ಮಾಡುವದಕ್ಕೆ ಬಹಳ ಯೌವನಸ್ಥನಾಗಿರುವಿ. ನೀನು ನಿನ್ನ ಕುಟುಂಬ ಮತ್ತು ನಿನ್ನ ಆತ್ಮವನ್ನು ಗಂಡಾಂತರಕ್ಕೀಡು ಮಾಡುತ್ತಿರುವಿ." ಅನಂತರದಲ್ಲಿ ನಾನು ಕೇಳಿಸಿಕೊಂಡದ್ದೇನೆಂದರೆ, ಆತನು ಮತ್ತು ಹೆಂಡತಿಯು ವಿಚ್ಛೇದನ ಪಡೆದುಕೊಂಡರು ಎಂಬದೆ. ಆತನು "ಪಾಪಿಗಳ ಮಿತ್ರನಾಗಿರುವದಕ್ಕೆ" ಅತಿಯಾಗಿಯೇ ಬಯಸಿದ್ದನು ಮತ್ತು ಆತನು ತನ್ನನ್ನು ಹಾನಿಕರವಾದ ದಾರಿಯಲ್ಲಿ ಇಟ್ಟುಕೊಂಡನು. ನಾವು ಉತ್ತಮ ವಿವೇಚನೆಯನ್ನು ಬಳಸಬೇಕು. ನಾವು "ಜಾರತ್ವದಿಂದ ದೂರವಾಗಿ ಓಡಬೇಕು" ಮತ್ತು ಕೆಲವು ಸಾರಿ ಅದರಲ್ಲಿ ತೊಡಗಿಸಿಕೊಂಡಿರುವ ಜನರಿಂದ ಓಡಬೇಕಾಗಿರುತ್ತದೆ (1 ಕೊರಿಂಥ 6:18). ದೇವರ ಖಂಡಿತವಾಗಿಯೂ ಶೋಧನೆಯಿಂದ ತಪ್ಪಿಸಿಕೊಳ್ಳಲು ದಾರಿಯೊಂದನ್ನು ಒದಗಿಸುವನು (1 ಕೊರಿಂಥ 10:13).

## ಲಂಗರನ್ನು ಹಿಡಿದುಕೊಂಡಿರಿ

ನಾವು ವಾಕ್ಯದಿಂದ *ತಪ್ಪಿಹೋಗುವದಕ್ಕೆ* ಆರಂಭಿಸಿದರೆ (2:1-4), ನಾವು *ವಾಕ್ಯವನ್ನು*

*ಸಂಶಯಿಸುವದಕ್ಕೆ* ಆರಂಭಿಸುತ್ತೇವೆ (3:7-4:13). ಶೀಘ್ರದಲ್ಲಿಯೇ, ನಾವು *ವಾಕ್ಯದ ಕಡೆಗೆ ಮಂದಮತಿಗಳಾಗುತ್ತೇವೆ* (5:11-6:20) ಮತ್ತು ಸೋಮಾರಿ ವಿಶ್ವಾಸಿಗಳಾಗುತ್ತೇವೆ. ತಪ್ಪಿಹೋಗುವದರಿಂದ ದೂರವಿರುವದಕ್ಕೆ ಉತ್ತಮವಾದ ದಾರಿಯೆಂದರೆ *ಲಂಗರನ್ನು ಹಿಡಿದುಕೊಳ್ಳುವದು*!

---

## ಅಡಿಟಿಪ್ಪಣಿಗಳು

[1]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 129. [2]Ibid., 127. [3]Arthur W. Pink, *An Exposition of Hebrews* (Grand Rapids, Mich.: Baker Book House, 1954), 356. [4]Kenneth Samuel Wuest, *Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1951), 127. [5]Gareth L. Reeseನು ಇಲ್ಲೊಂದು ಸಂಕೇತಶಾಸ್ತ್ರವಿರಬಹುದಾಗಿದೆ ಎಂದು ಸಲಹೆ ಮಾಡುತ್ತಾನೆ. (Gareth L. Reese, *A Critical and Exegetical Commentary on the Epistle to the Hebrews* [Moberly, Mo.: Scripture Exposition Books, 1992], 104.) [6]"ಮೂಲಪಿತೃ" (πατριάρχης, *patriarchēs*; see v. 4) ಎಂಬ ಪದವು ದೇವರು ತನ್ನನ್ನು ಹಿಂಬಾಲಿಸುವದಕ್ಕೆ ಅಪೇಕ್ಷಿಸಿದ ಪಿತೃಗಳ ಸಂಗಡ ವ್ಯವಹರಿಸಿದ ಕಾಲವನ್ನು ಸೂಚಿಸುತ್ತದೆ, ಅವರನ್ನು ತಮ್ಮ ಕುಟುಂಬಗಳಿಗೆ ಮತ್ತು ಬೇರೆಯವರಿಗೆ ಯಾಜಕರಾಗಿ ಸೇವೆ ಮಾಡುವಂತೆ ಶಕ್ತಗೊಳಿಸಿದನು. ದೇವರು ಅನೇಕ ನೀತಿವಂತರಾದ ಪಿತೃಗಳ ಸಂಗಡ, ಅಥವಾ ನೀತಿವಂತರಾಗಿರಲು ಅಪೇಕ್ಷಿಸಿದವರ ಸಂಗಡ ವ್ಯವಹರಿಸಿರಬಹುದಾಗಿದ ಮತ್ತು ಆತನು ಬೇರೆ ಬೇರೆಯವರಿಗೆ ತನ್ನ ಸತ್ಯಗಳನ್ನು ಪ್ರಕಟಗೊಳಿಸಿದನು. [7]Philo *On Drunkenness* 14. [8]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 249. [9]Josephus *Life* 1. [10]Moses Stuart, *A Commentary on the Epistle to the Hebrews* (London: William Tegg & Co., 1856), 391.

[11]ದೇವರು "ಪರಾತ್ಪರನು" ಎಂಬುದು ಬೇರೊಬ್ಬ ಕಡಿಮೆ ವರ್ಗದ ದೇವರು ಇದ್ದಾನೆಂಬದನ್ನು ಸೂಚಿಸುವದಿಲ್ಲ. [12]ವಿವಿಧ ದೇಶಗಳು ಯುದ್ಧದಲ್ಲಿ ಸುಲುಕೊಂಡದ್ದರಲ್ಲಿ ದಶಮಭಾಗವನ್ನು ಕೊಟ್ಟವು. ಇದು ದೇವರ ಮೂಲ ಆಜ್ಞೆಯ ಬಗ್ಗೆ ಬಾಯಿಂದ ಮತ್ತೊಬ್ಬರಿಗೆ ತಿಳಿಸಲಾದ ಒಂದು ಪ್ರಾಚೀನ ಸಂಪ್ರಾಯವೆಂದು Reeseನು ಭಾವಿಸಿಕೊಳ್ಳುತ್ತಾನೆ. (Reese, 104, n. 8.) ಅಂತಹ ದಶಮಾಂಶ ಕೊಡುವಿಕೆ ಕುರಿತು F. F. Bruce, *The Epistle to the Hebrews,* The New International Commentary on the New Testament (Grand Rapids, Mich.: Wm. B. Eerdmans Publishing Co., 1964), 140, and Craig R. Koester, *Hebrews: A New Translation with Introduction and Commentary*, The Anchor Bible, vol. 36 (New York: Doubleday, 2001), 343-44 ರಲ್ಲಿ ಸಹ ಚರ್ಚಿಸಲ್ಪಟ್ಟಿದೆ. [13]ಇಸ್ರಾಯೇಲ್ಯರು ಲೇವಿಯರಿಗೆ ಹತ್ತರಲ್ಲಿ ಒಂದು ಭಾಗವನ್ನು ಕೊಟ್ಟರು (7:5). ದಶಮಾಂಶವನ್ನು ಕೊಡುವ ಕುರಿತಾದ ಹಳೆಯ ಒಡಂಬಡಿಕೆಯ ಕಟ್ಟಳೆಯು ಯಾಜಕಕಾಂಡ 27:30-33; ಅರಣ್ಯಕಾಂಡ 18:21, 24, 26 - 29; ಧರ್ಮೋಪದೇಶಕಾಂಡ 12:17-19; 14:22; 26:12 - 14 ಗಳಲ್ಲಿ ಸಿಕ್ಕುತ್ತದೆ. ಯಾಜಕರು ಮತ್ತು ಲೇವಿಯರು ಒಂದೇ ರೀತಿಯಾಗಿರಲಿಲ್ಲ (ಲೂಕ 10:31, 32; ಯೋಹಾನ 1:19). [14]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 251, n. 7. [15]"ಆಶೀರ್ವದಿಸು" ಎಂಬ ಪದವು "ಸ್ತೋತ್ರ ಮಾಡುವದು" ಎಂಬ ಅರ್ಥದಲ್ಲಿ ಬಳಸಲ್ಪಟ್ಟಿತು, ಯೇಸುವು ಕರ್ತನ ಭೋಜನದ ಪಾತ್ರೆ ಮತ್ತು ರೊಟ್ಟಿಗಳ ವಿಷಯದಲ್ಲಿ ಮಾಡಿದಂತೆಯೇ, ಅಲ್ಲಿ "ಆಶೀರ್ವದಿಸು" ಮತ್ತು "ಸ್ತೋತ್ರ" ಎಂಬ ಪದಗಳು ಒಂದಕ್ಕೊಂದು ಪರ್ಯಾಯವಾಗಿರುತ್ತವೆ (ಮತ್ತಾಯ 26:26; ಲೂಕ 22:19). [16]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 159. [17]James Thompson, *The Letter to the Hebrews,* The Living Word Commentary (Austin, Tex.: R. B. Sweet Co., 1971), 99. [18]Neil R. Lightfoot, *Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 140. ಈ ಮಾತು ಹೊಸ ಒಡಂಬಡಿಕೆಯೊಳಗೆ ಬೇರೆ ಎಲ್ಲೂ ಬಳಸಲ್ಪಟ್ಟಿಲ್ಲ. [19]Stuart, 396. [20]Albert Barnes, *Notes on the New Testament: Hebrews to Jude* (London: Blackie & Son, 1884-85; reprint, Grand Rapids, Mich.: Baker Book House, 1985), 159.

[21]Koester, 354. [22]"ಆತನಿಗಾದರೋ [ಲೇಖಕನಿಗೆ] ಯಾಜಕತ್ವವು ಎಲ್ಲಾದಕ್ಕೂ ಅಸ್ತಿವಾರ ಆಗಿತ್ತು" (Neil R.

Lightfoot, *Everyone's Guide to Hebrews* [Grand Rapids, Mich.: Baker Books, 2002], 95). [23]Bruce, 145. [24]James Burton Coffman, *Commentary on Hebrews* (Austin, Tex.: Firm Foundation Publishing House, 1971), 157. [25]ಈ ಪದಗುಚ್ಛದ ವಿವಿಧ ಪದಗಳನ್ನು ಮತ್ತಾಯ 1:1; 9:27; 12:23; 15:22; 20:30, 31; ಮತ್ತು 21:9, 15ರಲ್ಲಿ ಬಳಸಲಾಗಿರುತ್ತದೆ (ಅಲ್ಲದೆ ಮತ್ತಾಯ 22:45; ಮಾರ್ಕ 10:47, 48; 12:35; ಲೂಕ 1:32; 18:39 ಸಹ ನೋಡಿರಿ). [26]Hughes, 259. [27]Donald A. Hagner, *Encountering the Book of Hebrews: An Exposition,* Encountering Biblical Studies (Grand Rapids, Mich.: Baker Academic, 2002), 102. [28]Milligan, 260. [29]Hughes, 264. [30]Milligan, 261.

[31]James Macknight, *A New Literal Translation, from the Original Greek of All the Apostolical Epistles with a Commentary and Notes* (Edinburgh: by the author, 1795; reprint, Grand Rapids, Mich.: Baker Book House, 1984), 539. [32]Bruce, 148. [33]NASBಯಲ್ಲಿನ "ನಿಷ್ಪ್ರಯೋಜಕವಾಗಿಯೂ" (7:18) ಎಂಬುದು ಒಂದು ರೀತಿಯಲ್ಲಿ ಕಠೋರವೆಂಬಂತೆ ಕಾಣಿಸುತ್ತದೆ, ಯಾಕೆಂದರೆ ಧರ್ಮಶಾಸ್ತ್ರವು ತಾನು ಕೊಡಲ್ಪಟ್ಟ ಉದ್ದೇಶವನ್ನು ನೆರವೇರಿಸಿತ್ತು, ಅದು ಪಾಪದ ಸ್ವಭಾವವನ್ನು ತೋರಿಸಿ ಕೊಡುವದೇ ಆಗಿತ್ತು. ಹೇಗೂ, ಅದು ನೇರವಾಗಿ ನಿತ್ಯಜೀವವನ್ನು ಒದಗಿಸುವದರಲ್ಲಿ "ನಿಷ್ಪ್ರಯೋಜಕ" ಆಗಿತ್ತು. [34]Ray C. Stedman, Hebrews, The IVP New Testament Commentary Series (Downers Grove, Ill.: InterVarsity Press, 1992), 82-83, n. ಅದು ಯಜ್ಞಗಳ ಬಗ್ಗೆ ಅಷ್ಟಾಗಿ ಆಗಿರದೆ ಆರಾಧಕನ ಹೃದಯದ ಮನೋಭಾವವೇ ದೇವರು ಪಾಪಿಯನ್ನು ನೀತಿವಂತನೆಂದು ಕಾಣುವಂತೆ ಅನುಮತಿಸುವದಾಗಿತ್ತು, ಆದರೆ ಇದು ಸಹ ಕ್ರಮೇಣದಲ್ಲಿ ಸಂಭವಿಸಿದ ಪಾಪಕ್ಕಾಗಿ ಕ್ರಿಸ್ತನ ಮರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತ್ರವೇ ಹೇಳಬಹುದಾಗಿದೆ. [35]Macknight, 539. [36]Guthrie, 165. [37]Lightfoot, *Jesus Christ Today*, 145. [38]Brown, 134. [39]Josephus *Antiquities* 20.10.1. [40]Josephus *Against Apion* 1.22.

[41]William Barclay, *The Letter to the Hebrews*, 2d ed., The Daily Study Bible Series (Philadelphia: Westminster Press, 1957), 87. [42]Josephus *Antiquities* 20.10.1; *Wars* 4.3.7-8. [43]Reese, 119. [44]Bruce, 154. [45]ಇಲ್ಲಿ ಬಳಸಲಾಗಿರುವ ವರ್ತಮಾನಕಾಲ ಧಾತ್ವರ್ಥವಾಚಿಯು ಆತನು ವಿಜ್ಞಾಪನೆಯನ್ನು ಮಾಡುತ್ತಲೇ ಇರುವನು ಎಂಬುದನ್ನು ಸೂಚಿಸುತ್ತದೆ. (Lightfoot, *Jesus Christ Today*, 146-47.) [46]Walter Bauer, *A Greek-English Lexicon of the New Testament and Other Early Christian Literature*, 2d ed., rev. William F. Arndt and F. Wilbur Gingrich (Chicago: University of Chicago Press, 1957), 589. [47]Barclay, 89. [48]ಆತ್ಮೀಕ "ಅಂಧಕಾರ" ದ ಉಲ್ಲೇಖವಿರುವ ವಾಕ್ಯಭಾಗಗಳಿಂದ ಬೈಬಲ್ ಹೇರಳವಾಗಿ ತುಂಬಿರುತ್ತದೆ (ಲೂಕ 1:79; 22:53; ಯೋಹಾನ 1:5; 3:19; 8:12; 12:35, 46; ಅಪೊಸ್ತಲರ ಕೃತ್ಯಗಳು 26:18; ರೋಮಾ 2:19; 13:12; 2 ಕೊರಿಂಥ 6:14; ಎಫೆಸ 5:8, 11; 6:12; ಕೊಲೊಸ್ಸೆ 1:13; 1 ಥೆಸಲೋನಿಕ 5:4, 5; 1 ಪೇತ್ರ 2:9; 1 ಯೋಹಾನ 1:6; 2:8, 9, 11). [49]*Mishnah Yoma* 3.8. [50]Hughes, 275.

[51]Philo *Special Laws* 3.131. [52]Thomas Hewitt, *The Epistle to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 127. [53]Bruce, 158-59. ಅಂತಹ ಹೇಳಿಕೆಗಳು 2 Maccabees 7:37-40; 4 Maccabees 6:27-30; 17:22; 18:3, 4 ಗಳಂತಹ ಪ್ರೇರಿತವಲ್ಲದ ಬರಹಗಳಲ್ಲಿ ವ್ಯಕ್ತಪಡಿಸಲ್ಪಟ್ಟಿವೆ. [54]Simon J. Kistemaker, *Exposition of the Epistle to the Hebrews,* New Testament Commentary (Grand Rapids, Mich.: Baker Book House, 1984), 208. [55]Hughes, 279. [56]ಮತ್ತಾಯ 26:30; ಮಾರ್ಕ 14:26; ಅಪೊಸ್ತಲರ ಕೃತ್ಯಗಳು 16:25; ರೋಮಾ 15:9; 1 ಕೊರಿಂಥ 14:15; ಎಫೆಸ 5:19; ಕೊಲೊಸ್ಸೆ 3:16; ಇಬ್ರಿಯ 2:12; ಯಾಕೋಬ 5:13. [57]ಅಪೊಸ್ತಲರ ಕೃತ್ಯಗಳು 2ರ ನಂತರ, "ಕರ್ತನು" ಎಂಬ ಪದವು ಸಾಮಾನ್ಯವಾಗಿ ಯೇಸು ಕ್ರಿಸ್ತನನ್ನು ಸೂಚಿಸುತ್ತದೆ. ನಮಗೆ ನಿಜವಾಗಿಯೂ "ಒಬ್ಬನೇ ಕರ್ತನು" ಇದ್ದಾನೆ (ಎಫೆಸ 4:5). [58]ಈ ಯೋಚನೆಯು James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 194-96 ನಿಂದ ಅಭಿಪ್ರಾಯ ಪಡಲಾಗಿದೆ.